ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಅಕ್ಟೋಬರ್ 15 ಬುಧವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 178 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹4





ಮೈಸೂರಿನಲ್ಲಿ ದೀಪಾವಳಿ ನಿಮಿತ್ತ ರುದ್ರಾಕ್ಷಿ ಪ್ರದರ್ಶನ ಹಾಗೂ ಮಾರಾಟ

ಅಕ್ಟೋಬರ್ 15 ರಿಂದ 20 ರವರೆಗೆ ಆಯೋಜನೆ



ಮೈಸೂರು: ನಗರದ ಹೋಟೇಲ್ ಸಿಪಾಯ್ ಗ್ರಾಂಡೆ, ಜೆಎಸ್ ಎಸ್ ಆಸ್ಪತ್ರೆ ಎದರು, ಅಗ್ರಹಾರ, ಎಂ.ಜಿ. ರೋಡ, ಮೈಸೂರಿನಲ್ಲಿ ಅಕ್ಟೋಬರ್ 15 ರಿಂದ 20 ರವರೆಗೆ ರುದ್ರಾಕ್ಷಿ ಪ್ರದರ್ಶನ ಮಾರಾಟ, ಒಂದು ಮುಖಿ ಯಿಂದ 21 ಮುಖಿ ರುದ್ರಾಕ್ಷಗಳು ಲಭ್ಯವಿವೆ. ಇಂಡಸ್-ನೇಪಾಳ ಸಂಸ್ಥೆಯ ನಿರ್ದೇಶಕ ಡಾ. ನರೇಂದ್ರ ಕಾಶಿರೆಡ್ಡಿ ಯಾವ ರುದ್ರಾಕ್ಷಿಯನ್ನು ಯಾವಾಗ ಹಾಗೂ ಯಾರು ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಂಗ ಮತ್ತು ಕಂಪ್ಯೂಟರ್ ಸಹಾಯವಿಲ್ಲದೆ, ವೇದ ಗಣಿತದ ಮೂಲಕ ಜನ್ಮ ರಾಶಿ, ಜನ್ಮ ನಕ್ಷತ್ರದ ಆಧಾರದ ಮೇಲೆ ತಿಳಿಸಲಾಗುವುದು. ಮಾಂಸಹಾರಿಗಳು ಸಹ ರುದ್ರಾಕ್ಷಿಗಳನ್ನು ಧರಿಸಬಹುದು. ಮಳಿಗೆಯು ಬೆಳಗ್ಗೆ 10.30 ರಿಂದ ರಾತ್ರಿ 09.00 ರವರೆಗೆ ತೆರದಿರುತ್ತದೆ. ಸಂಪರ್ಕಿಸಿ: ಡಾ. ನರೇಂದ್ರ ಕಾಶಿರೆಡ್ಡಿ 7097396666

ADVT

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ

ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. (ಟೆಲಿಕಾಲರ್ ಬೇಕಾಗಿದ್ದಾರೆ)

ಒಂದು ಗ್ರಾಂ. ಚಿನ್ನಕ್ಕೆ 11,500 (24 CT.)

Mob: 9108146123

ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ.

ಸಂಬಳ: 25,000

ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.

8548089469/9164946160

A & A Realti

Luxurious City blends with Nature.

30X40 Site with 200 sqft., Guest House @ just Rs. 9,99,999/- (Easy 36 months EMI)
From 37th month Rent will be provided for the Guest House Minimum Rs. 6000/- per Month.

Connect us for more details: 98896 98826
Website:www.aandarealti.com

HOUSE FOR SALE

4 BHK Duplex House in Devapartiva Road near Ramaswamy Circle, Mysuru

Brokers Excuse Please

Contact:- 94825 46168









ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲೆತ್ನಿಸಿದ ಪ್ರಕರಣ ಖಂಡಿಸಿ ಗಾಂಧಿ ಚೌಕದ ಮುಂದೆ ಪ್ರತಿಭಟನೆ



ಮುಖ್ಯ ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲೆತ್ನಿಸಿರುವುದನ್ನು ಖಂಡಿಸಿ ಕರ್ನಾಟಕ ಪ್ರಾಂತ ರೈತ ಮತ್ತು ಕಾರ್ಮಿಕ ರಕ್ಷಣಾ ವೇದಿಕೆ ವತಿಯಿಂದ ಗಾಂಧಿಚೌಕದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಅ.14(ಜಿಎ)–ವಕೀಲ ರಾಕೇಶ್ ಕಿಶೋರ್ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಮೇಲೆ ಶೂ ಎಸೆಯಲೆತ್ನಿಸಿರುವುದನ್ನು ಖಂಡಿಸಿ ಕರ್ನಾಟಕ ಪ್ರಾಂತ ರೈತ ಮತ್ತು ಕಾರ್ಮಿಕ ರಕ್ಷಣಾ ವೇದಿಕೆ ವತಿಯಿಂದ ಗಾಂಧಿಚೌಕ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಭಾರತೀಯ ಪರಂಪರೆಯಲ್ಲಿ ಸಂವಿಧಾನವೇ ಶ್ರೇಷ್ಠ. ನಮ್ಮ ದೇಶದ ಸಂವಿಧಾನ ವಿಶ್ವದಲ್ಲೇ ಶ್ರೇಷ್ಠವಾದುದು. ಪ್ರಜಾಪ್ರಭುತ್ವ ಹಾಗೂ ಸಂವಿಧಾನ ರಕ್ಷಣೆ ಮಾಡುವ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ಮೇಲೆಯೇ ಶೂ ಎಸೆಯಲೆತ್ನಿಸಿರುವುದು ಖಂಡನೀಯ. ನ್ಯಾಯಾಂಗದ ಕಗ್ಗೊಲೆ ಮಾಡಿರುವ ದೇಶದ್ರೋಹಿ, ನ್ಯಾಯ ಮತ್ತು ಧರ್ಮ ಭ್ರಷ್ಟ ವಕೀಲ ರಾಕೇಶ್ ಕಿಶೋರ್ ಅವರನ್ನು ಬಂಧಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಈ ಮೂಲಕ ನ್ಯಾಯಾಂಗ ವ್ಯವಸ್ಥೆಯ ಘನತೆ ಎತ್ತಿ ಹಿಡಿಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ಜವರೇಗೌಡ, ಮಧುಗೌಡ, ಶಶಿಕುಮಾರ್, ದೇವರಾಜು, ಶಿವಮೂರ್ತಿ, ಗಿರೀಶ್, ಗೋವಿಂದರಾಜು, ಮೋಹನ್, ಪುಟ್ಟರಾಜು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಹೊತ್ತಿ ಉರಿದ ಓಮಿನಿ ವ್ಯಾನ್




ಮೈಸೂರು, ಅ.14(ಎಂಕೆ)– ಶಾರ್ಟ್ ಸರ್ಕ್ಯೂಟ್‌ನಿಂದ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಓಮಿನಿ ವ್ಯಾನ್ ಹೊತ್ತಿ ಉರಿದ ಘಟನೆ ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿ ಮಂಗಳವಾರ ಸಂಭವಿಸಿದೆ.

ದೇವರಾಜ ಮಾರುಕಟ್ಟೆಗೆ ತಮ್ಮ ಓಮಿನಿ ವ್ಯಾನ್(ಕೆಎ–12–ಎಂ–7277)ನಲ್ಲಿ ಬಂದಿದ್ದ ಪಡುವಾರಹಳ್ಳಿಯ ಲಕ್ಷ್ಮಣ್, ರಸ್ತೆ ಬದಿಯಲ್ಲಿ ಕಾರು ನಿಲ್ಲಿಸಿ ಮಾರುಕಟ್ಟೆಯೊಳಗೆ ಹೋಗಿದ್ದಾರೆ. ಈ ವೇಳೆ ಕಾರಿನಲ್ಲಿ ಶಾರ್ಟ್ ಸರ್ಕ್ಯೂಟ್ ಉಂಟಾಗಿದ್ದು, ಕ್ಷಣಾರ್ಧದಲ್ಲಿಯೇ ಕಾರು ಹೊತ್ತಿ ಉರಿದಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಬೆಂಕಿಯನ್ನು ನಂದಿಸಿದ್ದಾರೆ. ಅಷ್ಟರಲ್ಲಿ ಬಹುತೇಕ ಕಾರು ಸುಟ್ಟು ಕರಕಲಾಗಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಕಾರು ಹೊತ್ತಿ ಉರಿಯುತ್ತಿದ್ದ ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ.

ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್‌ನ ಪದಾಧಿಕಾರಿಗಳು



ಇತ್ತೀಚೆಗೆ ನಡೆದ ಶ್ರೀ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಚುನಾವಣೆಯಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು. ಹೆಚ್.ಎಸ್.ಅರುಣ್‌ಕುಮಾರ್–ಅಧ್ಯಕ್ಷ, ಎಂ.ಎಸ್.ಯಶ್ವಂತ್–ಕ್ಯಾಪ್ಟನ್, ಕೆ.ಎಸ್.ಸುಧೀರ್‌ಭಟ್–ಗೌರವ ಕಾರ್ಯದರ್ಶಿ, ಡಿ.ವಿ.ಶ್ರೀಧರ್–ಗೌರವ ಖಜಾಂಚಿ. ಸಮಿತಿ ಸದಸ್ಯರು (ಆಡುವ ವರ್ಗ) : ಎಂ.ಎಸ್.ದಿನೇಶ್‌ಕುಮಾರ್, ಫಾಲ್ಗುಣ ವಿ.ಅರಸ್, ಸುರೇಶ್ ಬಲರಾಮ್; ಆಟವಾಡದ ವರ್ಗ: ಎಂ.ಸಿ.ಚೆಂಗಪ್ಪ, ಕೆ.ಎನ್.ಮಹದೇವಸ್ವಾಮಿ, ಎಂ.ಎ.ಮಂಜುನಾಥ್.

ವಿಜೃಂಭಣೆಯ ಗಣಪತಿ ಉತ್ಸವ...



ಮೈಸೂರಿನ ರಾಮಾನುಜ ರಸ್ತೆಯ 4ನೇ ಕ್ರಾಸ್‌ನಲ್ಲಿ ನಡೆದ ಶ್ರೀ ವಿನಾಯಕ ಭಕ್ತ ಮಂಡಳಿಯ ಪೂಜಾ ಮಹೋತ್ಸವದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಭಾಗವಹಿಸಿದ್ದರು. ಮುಖಂಡರಾದ ರಾಜು, ಶಿವಕುಮಾರ್, ಉಮೇಶ್,ರವಿ, ಮದನ್, ಸತೀಶ್, ಚೇತನ್, ಗಣೇಶ್, ಗೀತಾ, ನಯನ, ಮಾಲಾ ಮತ್ತಿತರರು ಉಪಸ್ಥಿತರಿದ್ದರು.

ಉಡುಪಿ ಮಾಜಿ ಶಾಸಕ ಗೋಪಾಲ ಭಂಡಾರಿ ಪುತ್ರ ಸುದೀಪ್ ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆ!

ಉಡುಪಿ, ಅ.14– ಕಾರ್ಕಳದ ಮಾಜಿ ಶಾಸಕ ದಿ. ಗೋಪಾಲ ಭಂಡಾರಿಯವರ



ಪುತ್ರ ಸುದೀಪ್ ಭಂಡಾರಿ (48) ಆತ್ಮಹತ್ಯೆಗೆ ಶರಣಾಗಿದ್ದಾರೆ. ಸುದೀಪ್ ಭಂಡಾರಿ ಸೋಮವಾರ ರಾತ್ರಿ ಬ್ರಹ್ಮಾವರ ಸಮೀಪದ ಬಾರ್ಕೂರು ಬಳಿ ರೈಲು ಹಳಿಗೆ ತಲೆಕೊಟ್ಟು ಆತ್ಮಹತ್ಯೆಗೆ ಶರಣಾಗಿದ್ದಾರೆ. ಮೃತ ಸುದೀಪ್ ಭಂಡಾರಿ ಹೆಬ್ರಿಯಲ್ಲಿ ವೈನ್ ಶಾಪ್ ನಡೆಸಿಕೊಂಡಿದ್ದು, ಅತ್ಯಂತ ಸರಳ ವ್ಯಕ್ತಿತ್ವದವರಾಗಿದ್ದರು. ಮೃತರು ತಾಯಿ, ಪತ್ನಿ, ಇಬ್ಬರು ಮಕ್ಕಳು, ಸಹೋದರ ಮತ್ತು ಸಹೋದರಿಯನ್ನು ಅಗಲಿದ್ದಾರೆ. ಬ್ರಹ್ಮಾವರ ಪೊಲೀಸ್ ಠಾಣೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಶ್ರೀ ಭಂಡಾರಿಯವರ ಸಾವಿನ ಸುತ್ತಲಿನ ಸಂದರ್ಭಗಳ ಬಗ್ಗೆ ಸಮಗ್ರ ತನಿಖೆಯನ್ನು ಪ್ರಾರಂಭಿಸಿದ್ದಾರೆ. ಆದರೆ, ಸುದೀಪ್ ಆತ್ಮಹತ್ಯೆ ಮಾಡಿಕೊಳ್ಳಲು ನಿಖರ ಕಾರಣ ತಿಳಿದುಬಂದಿಲ್ಲ. ಹೆಬ್ರಿ ತಾಲೂಕು ನಿವಾಸಿಯಾಗಿರುವ ಸುದೀಪ್, ಆರ್ಥಿಕ ಮುಗ್ಗಟ್ಟಿನಿಂದ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ಸಂಬಂಧ ಬ್ರಹ್ಮಾವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ವ್ಯಕ್ತಿ ನಾಪತ್ತೆ

ಮೈಸೂರು, ಅ. 14–ವ್ಯಕ್ತಿಯೋರ್ವ ಕಾಣೆಯಾಗಿರುವ ಬಗ್ಗೆ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅ.9ರಂದು ಸಂಜೆ 7.45ರ ಸಮಯದಲ್ಲಿ ಮೈಸೂರಿನ ಹೆಬ್ಬಾಳು 1ನೇ ಹಂತ, ಸುಭಾಷ್‌ನಗರದ ಬಳಿ ಇರುವ ದೀಪಶ್ರೀ ಪುನಶ್ಚೇತನ ಕೇಂದ್ರದಿಂದ ಮಹಾದೇವ (55) ಕಾಣೆಯಾಗಿದ್ದಾರೆ. ಎಲ್ಲಾ ಕಡೆ ಹುಡುಕಿದರೂ ಇವರ ಸುಳಿವು ಸಿಕ್ಕಿಲ್ಲ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ದೂರವಾಣಿ ಸಂಖ್ಯೆ 0821–2418339, 2418315, 2418115 ಸಂಪರ್ಕಿಸಲು ಕೋರಲಾಗಿದೆ.

ಬಿಪಿಎಲ್ ಪಡಿತರದಾರರಿಗೆ ಇಂದಿರಾ ಪೌಷ್ಠಿಕ ಆಹಾರ ಕಿಟ್ ಕೊಡುವ ನಿರ್ಧಾರಕ್ಕೆ ರೈತ ಸಂಘ ಸ್ವಾಗತ

ಆಹಾರ ಉತ್ಪನ್ನಗಳನ್ನು ಏಜೆನ್ಸಿ ಬದಲು ರೈತರಿಂದಲೇ ನೇರವಾಗಿ ಖರೀದಿಸಲು ಮನವಿ



ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿದರು.

ಮೈಸೂರು,ಅ.14(ಜಿಎ)–ಬಿಪಿಎಲ್ ಪಡಿತರರಿಗೆ ಹೆಚ್ಚುವರಿ 5 ಕೆ.ಜಿ.ಅಕ್ಕಿ ಬದಲಿಗೆ ಇಂದಿರಾ ಪೌಷ್ಠಿಕ ಆಹಾರ ಕಿಟ್ ಮೂಲಕ ತೊಗರಿ ಬೇಳೆ, ಹಸಿರು ಬೇಳೆ, ಅಡುಗೆ ಎಣ್ಣೆ ಮುಂತಾದ ಅಗತ್ಯ ಆಹಾರ ವಸ್ತುಗಳನ್ನು ಕುಟುಂಬದ ಸದಸ್ಯರ ಸಂಖ್ಯೆಗೆ ಅನುಗುಣವಾದ ಪ್ರಮಾಣದಲ್ಲಿ ನೀಡಲು ತೀರ್ಮಾನ ಕೈಗೊಂಡಿರುವ ರಾಜ್ಯ ಸರ್ಕಾರದ ಕ್ರಮವನ್ನು ಕರ್ನಾಟಕ ರಾಜ್ಯ ರೈತ ಸಂಘ ಸ್ವಾಗತಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಪಡಿತರ ವ್ಯವಸ್ಥೆಗೆ ಬೇಕಾದ ಆಹಾರ ಉತ್ಪನ್ನಗಳನ್ನು ಟೆಂಡರ್ ಮೂಲಕ ಖಾಸಗಿ ಏಜೆನ್ಸಿಗಳಿಂದ ಕೊಳ್ಳುವ ಬದಲು ರೈತರಿಂದಲೇ ಎಂಎಸ್‌ಪಿ ದರದಲ್ಲಿ ನೇರವಾಗಿ ಖರೀದಿಸಬೇಕು. ರೈತರಿಂದಲೇ ನೇರವಾಗಿ ಕೊಳ್ಳುವ ಮೂಲಕ ಸರ್ಕಾರ ಅಪೂರ್ವ ಮತ್ತು ಕ್ರಾಂತಿಕಾರಿ ಮಾದರಿಯ ಹೆಜ್ಜೆ ಇಡಬೇಕೆಂದು ಸಂಘವು ಸಲಹೆ ನೀಡುತ್ತದೆ ಎಂದರು.

5 ಕೆ.ಜಿ ಹೆಚ್ಚುವರಿ ಅಕ್ಕಿಯನ್ನು ಪೂರೈಸಲು ಕೊರತೆ ಇರುವುದರಿಂದ ಅಕ್ಕಿ ಬದಲು ಕುಟುಂಬದ ಸದಸ್ಯರಿಗೆ ನೇರ ನಗದು ವರ್ಗಾವಣೆಯ ಬದಲು ಪ್ರತಿ ಕುಟುಂಬಕ್ಕೆ ಕನಿಷ್ಠ 5 ಕೆ.ಜಿ ರಾಗಿ ಅಥವಾ ಜೋಳ, 1 ಕೆ.ಜಿ ಬೇಳೆ, ಅಡುಗೆ ಎಣ್ಣೆ ಇತರೆ ಆಹಾರೋತ್ಪನ್ನಗಳನ್ನು ನೀಡುವಂತೆ 2023ನೇ ಸೆಪ್ಟೆಂಬರ 27ರಂದು ಕರ್ನಾಟಕ ರಾಜ್ಯ ರೈತ ಸಂಘ ರೈತ ಸ್ವರಾಜ್ ವೇದಿಕೆ, ಮಹಿಳಾ ರೈತರ ಹಕ್ಕುಗಳ ವೇದಿಕೆ. ಜಾಗೃತ ಕರ್ನಾಟಕ ಪದಾಧಿಕಾರಿಗಳು ಮತ್ತು ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ ಸಮಗ್ರ ವರದಿಯನ್ನು ಕೃಷಿ ಸಚಿವರ ಮೂಲಕ ಸರಕಾರಕ್ಕೆ ಸಲ್ಲಿಸಲಾಗಿತ್ತು. ಅಲ್ಲದೇ ಸಂಬಂದಪಟ್ಟ ಅಧಿಕಾರಿಗಳೊಂದಿಗೂ ಚರ್ಚಿಸಲಾಗಿತ್ತು ಎಂದರು.

ಈ ವರದಿಯನ್ನು ಜಾರಿಗೆ ತಂದರೆ ಸರ್ಕಾರಕ್ಕೆ ಹಣಕಾಸಿನ ಉಳಿತಾಯ ಅಲ್ಲದೇ ಗ್ರಾಮೀಣ ಆರ್ಥಿಕತೆಯ ಪುನಶ್ಚೇತನಕ್ಕೆ ಪೂರಕವಾಗುವ ಅಂಶಗಳ ಬಗ್ಗೆ ಬೆಳಕು ಚೆಲ್ಲಲಾಗಿತ್ತು. ಸರ್ಕಾರ ವರದಿಯ ಕೆಲವು ಅಂಶಗಳನ್ನು ಜಾರಿಗೆ ತಂದಿದೆಯಾದರೂ ರೈತರಿಂದಲೇ ಉತ್ಪನ್ನವನ್ನು ಕೊಳ್ಳಲು ತೀರ್ಮಾನಿಸದೆ ಇರುವುದು ವಿಷಾದನೀಯ ಎಂದು ಬೇಸರ ವ್ಯಕ್ತಪಡಿಸಿದರು.

ಪಡಿತರ ವ್ಯವಸ್ಥೆಗೆ ಬೇಳೆ ಕಾಳುಗಳು, ಎಣ್ಣೆ ಬೀಜಗಳು ಹಾಗೂ ಸಿರಿಧಾನ್ಯಗಳನ್ನು ಸ್ಥಳೀಯ ಖರೀದಿ ಮತ್ತು ವಿತರಣ ಮಾದರಿಯನ್ನು ಸ್ಥಾಪಿಸುವ ಮೂಲಕ ಸರ್ಕಾರವು ರಾಜ್ಯದಲ್ಲಿ ಉದ್ಯೋಗ ಮತ್ತು ಉದ್ಯಮದ ಅಪಾರ ಅವಕಾಶಗಳನ್ನು ಸೃಷ್ಟಿಸಬಹುದಾಗಿದೆ. ಸ್ಥಳೀಯ ಎಣ್ಣೆ ಸಂಸ್ಕರಣಾ ಘಟಕಗಳು ಮತ್ತು ಕಾಳು ಸಂಸ್ಕರಣಾ ಘಟಕಗಳು, ರೈತರ ಉತ್ಪಾದಕ ಸಂಸ್ಥೆಗಳು ಹಾಗೂ ಮಹಿಳಾ ಸ್ವ–ಸಹಾಯ ಸಂಘಗಳ ಮೂಲಕ ಖರೀದಿ ಪ್ರಕ್ರಿಯೆ ನಡೆಸಿದರೆ ಆ ಸಂಸ್ಥೆಗಳಿಗೆ ಹೆಚ್ಚುವರಿ ಆದಾಯ ಅವಕಾಶ ದೊರೆಯುತ್ತದೆ. ಈ ಮೂಲಕ ಗ್ರಾಮೀಣ ಆರ್ಥಿಕ ಚಟುವಟಿಕೆ ಪುನಶ್ಚೇತನಕ್ಕೆ ಸಹಾಯವಾಗುತ್ತದೆ ಎಂದು ಬಡಗಲಪುರ ನಾಗೇಂದ್ರ ಸಲಹೆ ನೀಡಿದರು.

ಅಲ್ಲದೇ ಕನಿಷ್ಠ ಬೆಂಬಲ ಬೆಲೆಯಲ್ಲಿ ರಾಜ್ಯದಲ್ಲಿ ಬೆಳೆಯಲಾಗುವ 7 ಬೆಳೆಗಳನ್ನು ನೇರವಾಗಿ ರೈತರಿಂದ ಕೊಳ್ಳುವುದರ ಮೂಲಕ ರೈತರಿಗೆ ಬೆಲೆ ಸ್ಥಿರತೆಯನ್ನು ಒದಗಿಸಬಹುದಾಗಿದೆ. ಇಂತಹ ಕ್ರಮಗಳಿಂದ ರಾಜ್ಯವು ದೇಶದಲ್ಲೇ ಮಾದರಿ ಆಗಬಹುದಾದ ಅವಕಾಶಗಳು ಇವೆ. ಈ ಕಾರಣ ಸರ್ಕಾರ ಪಡಿತರ ವ್ಯವಸ್ಥೆಗೆ ಈ ಮಾನದಂಡಗಳನ್ನು ಅನುಸರಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಕವಿತಾ ಕುರುಗಂಟಿ, ಹೊಸೂರು ಕುಮಾರ್, ನಾಗನಹಳ್ಳಿ ಚಂದ್ರಶೇಖರ್, ಆನಂದೂರು ಪ್ರಭಾಕರ್, ಮಂಡಕಳ್ಳಿ ಪ್ರಭಾಕರ್ ಮತ್ತಿತರರು ಉಪಸ್ಥಿತರಿದ್ದರು.

ಅ.19ರಂದು ಮೈಸೂರು ವಲಯ ಗಿಳಿವಿಂಡು ಪ್ರಾಂತೀಯ ಸಮಾವೇಶ

ಮೈಸೂರು: ಮೈಸೂರು ವಲಯದ ಮೈಸೂರು, ಹಾಸನ, ಮಂಡ್ಯ, ಚಾಮರಾಜನಗರ, ಕೊಡಗು ಜಿಲ್ಲೆಗಳಿಂದ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದು ಸಂಶೋಧನೆ ನಡೆಸಿದ ಸಿಬ್ಬಂದಿ ವರ್ಗದವರನ್ನು ಗಿಳಿವಿಂಡು ಸಂಘಟನೆ ಒಳಗೊಂಡಿದ್ದು, ಇದರ ಮೊದಲ ವಲಯ ಸಮಾವೇಶವನ್ನು ಮೈಸೂರಿನಲ್ಲಿ ಅ.19ರಂದು ಬೆಳಿಗ್ಗೆ 10.30ಕ್ಕೆ ರಾಮಕೃಷ್ಣನಗರದಲ್ಲಿರುವ ನೃಪತುಂಗ ಶಾಲೆಯ ಆವರಣದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮಕ್ಕೆ ಗಿಳಿವಿಂಡು ಮೊದಲ ತಂಡದ ವಿದ್ಯಾರ್ಥಿ ಪ್ರಾಧ್ಯಾಪಕ ಪ್ರೊ.ಎಲ್. ತಿಪ್ಪೇಸ್ವಾಮಿ ಚಾಲನೆ ನೀಡಲಿದ್ದಾರೆ. ಅಧ್ಯಕ್ಷತೆಯನ್ನು ಹಿರಿಯ ವಿದ್ವಾಂಸರು, ಪ್ರಾಧ್ಯಾಪಕ ಡಾ.ರಾಮೇಗೌಡ (ರಾ.ಗೌ) ವಹಿಸಲಿದ್ದಾರೆ. ಕೊಣಾಜೆ, ಗಿಳಿವಿಂಡು ಅಧ್ಯಕ್ಷ ಡಾ.ಬಿ.ಶಿವರಾಮಶೆಟ್ಟಿ ಉಪಸ್ಥಿತರಿದ್ದು, ಮುಖ್ಯ ಅತಿಥಿಗಳಾಗಿ ಪ್ರೊ.ಶಿವಾಜಿ ಜೋಯಿಸ್, ಪ್ರೊ.ಹೆಚ್.ಸಿ. ಸರಸ್ವತಿ ಡಾ.ವೈ.ಸಿ.ಭಾನುಮತಿ, ಬಿ.ವಿ. ಕರೀಗೌಡ ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಪ್ರೊ.ಪಂಡಿತಾರಾಧ್ಯ, ಡಾ.ಲೋಲಾಕ್ಷಿ, ಡಾ.ನಾಗಪ್ಪಗೌಡ, ಪ್ರೊ.ಸೋಮಣ್ಣ, ಪ್ರೊ.ಚಂದ್ರಕಲಾ ನಂದಾವರ, ಪ್ರೊ.ಸಬೀಹ ಭೂಮಿಗೌಡ ಅವರನ್ನು ಸನ್ಮಾನಿಸಲಾಗುವುದು ಎಂದು ಸಂಚಾಲಕ ಪ್ರೊ.ಎಂ.ನಟರಾಜ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಫೆನೆಸ್ಟಾ ಓಪನ್ ಟೆನ್ನಿಸ್ ಟೂರ್ನ್‌ಮೆಂಟ್

ಮೈಸೂರಿನ ಪದ್ಮಪ್ರಿಯಾ ರಮೇಶ್‌ಕುಮಾರ್‌ಗೆ ಡಬಲ್ಸ್ ಪ್ರಶಸ್ತಿ



ನವದೆಹಲಿಯಲ್ಲಿ ನಡೆದ 'ರಾಷ್ಟ್ರೀಯ ಫೆನೆಸ್ಟಾ ಓಪನ್ ಟೆನಿಸ್ ಟೂರ್ನ್‌ಮೆಂಟ್–2025'ನಲ್ಲಿ 14 ವರ್ಷದೊಳಗಿನವರ ಬಾಲಕಿಯರ ಡಬಲ್ಸ್‌ನಲ್ಲಿ ವಿಜೇತರಾಗಿ, ಸಿಂಗಲ್ಸ್‌ನಲ್ಲಿ ಮೈಸೂರಿನ ಪದ್ಮಪ್ರಿಯಾ ರನ್ನರ್ ಅಪ್ ಪ್ರಶಸ್ತಿ ಪಡೆದರು.

ಮೈಸೂರು,ಅ.14(ಎಂಟಿವೈ)–ದೆಹಲಿಯ ಲಾನ್ ಟೆನ್ನಿಸ್ ಅಸೋಸಿಯೇಷನ್ ಆಯೋಜಿಸಿದ್ದ 'ರಾಷ್ಟ್ರೀಯ ಫೆನೆಸ್ಟಾ ಓಪನ್ ಟೆನಿಸ್ ಟೂರ್ನ್‌ಮೆಂಟ್–2025'ನಲ್ಲಿ 14 ವರ್ಷದೊಳಗಿನವರ ಬಾಲಕಿಯರ ವಿಭಾಗದಲ್ಲಿ ಮೈಸೂರಿನ ಟೆನ್ನಿಸ್ ಪಟು ಪದ್ಮಪ್ರಿಯಾ ರಮೇಶ್‌ಕುಮಾರ್ ಬಾಲಕಿಯರ ಡಬಲ್ಸ್ ಪ್ರಶಸ್ತಿ ಗಳಿಸಿ, ಸಿಂಗಲ್ಸ್‌ನಲ್ಲಿ ರನ್ನರ್ ಅಪ್ ಆಗಿ ಸಾಧನೆ ಮಾಡಿದ್ದಾರೆ.

ಮೈಸೂರಿನ ಎಕ್ಸೆಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿಯಾಗಿರುವ ಪದ್ಮಪ್ರಿಯಾ ರಮೇಶ್ ಕುಮಾರ್ ಹುಲಿ ಯೋಜನೆಯ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್ ಹಾಗೂ ಮೈಸೂರು ಕಾರ್ಯಯೋಜನೆಯ ಸಿಎಫ್ ಡಾ.ಮಾಲತಿ ಪ್ರಿಯಾ ದಂಪತಿ ಪುತ್ರಿಯಾಗಿದ್ದು, ಟೆನ್ನಿಸ್‌ನಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದಾರೆ. 14 ವರ್ಷದೊಳಗಿನ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿಯಲ್ಲಿ ಹಲವು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿರುವ ಪದ್ಮಪ್ರಿಯಾ ಏಷ್ಯಾಮಟ್ಟದ ಟೆನ್ನಿಸ್‌ನ ಬಾಲಕಿಯರ ವಿಭಾಗದಲ್ಲೂ ಅಮೂಲಾಗ್ರ ಸಾಧನೆ ಮಾಡಿದ್ದಾರೆ.

ನವದೆಹಲಿಯ ಇತ್ತೀಚೆಗೆ ದೆಹಲಿ ಲಾನ್ ಟೆನ್ನಿಸ್ ಅಸೋಸಿಯೇಷನ್ ಆಯೋಜಿಸಿದ್ದ 'ರಾಷ್ಟ್ರೀಯ ಫೆನೆಸ್ಟಾ ಓಪನ್ ಟೆನ್ನಿಸ್ ಟೂರ್ನ್‌ಮೆಂಟ್ 2025'ನಲ್ಲಿ 14 ವರ್ಷದೊಳಗಿನವರ ಬಾಲಕಿಯರ ವಿಭಾಗದಲ್ಲಿ ರನ್ನರ್ ಅಪ್ ಎರಡನೇ ಸ್ಥಾನ ಪಡೆದರೆ, ಡಬಲ್ಸ್ ವಿಭಾಗದಲ್ಲಿ ಪ್ರಥಮ ಬಹುಮಾನ ಪಡೆದಿದ್ದಾರೆ.

ಆರ್‌ಎಸ್‌ಎಸ್ ನಿಷೇಧ ಪ್ರಸ್ತಾಪ; ಪ್ರಿಯಾಂಕ ಖರ್ಗೆಗೆ ಬೆದರಿಕೆ

ಇದಕ್ಕೆಲ್ಲಾ ನಾನು ಹೆದರಲ್ಲ: ಪ್ರಿಯಾಂಕ ಖರ್ಗೆ



ಬೆಂಗಳೂರು,ಅ.14(ಕೆಎಂಶಿ)–ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ನಿಷೇಧಿಸುವಂತೆ ಮುಖ್ಯಮಂತ್ರಿಗಳಿಗೆ ಪತ್ರ ಬರೆದ ಹಿನ್ನೆಲೆಯಲ್ಲಿ ಬೆದರಿಕೆ ಕರೆಗಳು ಬರುತ್ತಿದ್ದು ಇದಕ್ಕೆಲ್ಲಾ ಹೆದರುವುದಿಲ್ಲ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಸರ್ಕಾರಿ ಶಾಲಾ–ಕಾಲೇಜುಗಳು ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆ ತಡೆಯಲು ಮುಂದಾದ ತಮಗೆ ನಿರಂತರ ಬೆದರಿಕೆ ಕರೆಗಳು ಬರುತ್ತಿದೆ. ಇದರಿಂದ ನಾನು ವಿಚಲಿತನಾಗುವುದಿಲ್ಲ. ಮಹಾತ್ಮ ಗಾಂಧಿ, ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರಂತಹ ಮಹಾನ್ ನಾಯಕರನ್ನೇ ಆರ್‌ಎಸ್‌ಎಸ್ ಬಿಟ್ಟಿಲ್ಲ, ಇನ್ನು ನನ್ನನ್ನು ಬಿಡುತ್ತಾರೆಯೇ ಎಂದಿದ್ದಾರೆ. ಕಳೆದ ಎರಡು ದಿನಗಳಿಂದ ನನ್ನ ಫೋನ್‌ಗೆ ಬೆದರಿಕೆ ಕರೆಗಳು ಬರುತ್ತಿವೆ, ಸಾರ್ವಜನಿಕ ಸಂಸ್ಥೆಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆ ತಡೆಯುವ ಧೈರ್ಯ ಮಾಡಿದ್ದರಿಂದ ನನ್ನ ಮತ್ತು ನನ್ನ ಕುಟುಂಬಕ್ಕೆ ಬೆದರಿಕೆಗಳು, ಅತ್ಯಂತ ಕೀಳು ಪದಗಳ ನಿಂದನೆ ಕರೆಗಳು ಬರುತ್ತಲೇ ಇವೆ. ಬೆದರಿಕೆ ಮತ್ತು ವೈಯಕ್ತಿಕ ನಿಂದನೆಗಳಿಂದ ನನ್ನ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ. ರಾಷ್ಟ್ರವನ್ನು ಅತ್ಯಂತ ಅಪಾಯಕಾರಿ ವೈರಸ್‌ಗಳಿಂದ ಶುದ್ಧೀಕರಿಸುವ ಸಮಯ ಇದಾಗಿದೆ ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.10.2025 ಬುಧವಾರ, ಮಳೆ ನಕ್ಷತ್ರ: ಚಿತ್ತ 11.10.2025 ರಿಂದ 23.10.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಕೃಷ್ಣ ಪಕ್ಷ,
ತಿಥಿ: ನವಮಿ, ನಕ್ಷತ್ರ: ಪುಷ್ಯ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಮೂಲವ್ಯಾದಿ/ಪೈಲ್ಸ್, ಮಧುಮೇಹ ತೊಂದರೆ, ಲಕ್ವ/ಪ್ಯಾರಾಲಿಸಿಸ್, ಮೈಗ್ರೇನ್ ಹಾಗೂ ಎಲ್ಲಾ ಪ್ರಕಾರದ ತಲೆನೋವುಗಳು, ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಶೇಷಾದ್ರಿಪುರಂ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಇಂಡಿಯನ್ ನ್ಯೂಕ್ಲಿಯರ್ ಸೊಸೈಟಿ:** ಅಪ್ಲಿಕೇಷನ್ಸ್ ಆಫ್ ನ್ಯೂಕ್ಲಿಯರ್ ಎನರ್ಜಿ & ರೇಡಿಯೇಷನ್ ಕುರಿತು ವಿಚಾರ ಸಂಕಿರಣ, ಅಧ್ಯಕ್ಷತೆ: ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೂಡೇ ಪಿ.ಕೃಷ್ಣ, ಮುಖ್ಯ ಅತಿಥಿಗಳು: ಅಸೋಸಿಯೇಟ್ ಡೈರೆಕ್ಟರ್ ಆರ್.ದಿನೇಶ್‌ಬಾಬು, ಸ್ಥಳ: ಸೆಮಿನಾರ್ ಹಾಲ್, ಇನ್ಸ್‌ಟಿಟ್ಯೂಟ್ ಆವರಣ, ಬೆಳಗ್ಗೆ 9.30ಕ್ಕೆ

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಮಕ್ಕಳಲ್ಲಿ ಕಂಡು ಬರುವ ಸೆರೆಬ್ರಲ್ ಪಾಲ್ಸಿ (ಮಾಂಸ ಖಂಡಗಳ ದೌರ್ಬಲ್ಯ, ನಿಲ್ಲಲು ಹಾಗೂ ನಡೆದಾಡಲು ಸಾಧ್ಯವಾಗದಿರುವುದು, ಕುಂಠಿತ ಬೆಳವಣಿಗೆ), ವಯಸ್ಕರಲ್ಲಿ ಕಂಡು ಬರುವ ಸಂಧಿ ನೋವು, ಮಂಡಿ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್.ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಬೆಳಗ್ಗೆ 10ರಿಂದ.

■ **ಶೇಷಾದ್ರಿಪುರಂ ಪದವಿ ಕಾಲೇಜು:** ವಿದ್ಯಾರ್ಥಿವೇತನ ವಿತರಣಾ ಸಮಾರಂಭ, ಮುಖ್ಯ ಅತಿಥಿಗಳು: ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ, ಅಧ್ಯಕ್ಷತೆ: ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್ ಸಹಾಯಕ ಕಾರ್ಯದರ್ಶಿ ಎಂ.ಎಸ್.ನಟರಾಜ್, ಗೌರವ ಅತಿಥಿಗಳು: ಕಾಲೇಜು ಪ್ರಿನ್ಸಿಪಾಲ್ ಶ್ರೀಮತಿ ಎನ್.ಅರ್ಚನಾ ಸ್ವಾಮಿ, ಸ್ಥಳ: ಕಾಲೇಜು ಸೆಮಿನಾರ್ ಹಾಲ್, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ :** ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆ, ಸ್ಥಳ: ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣ, ಬೆಳಗ್ಗೆ 11.30ಕ್ಕೆ.

■ **ಸಾಧನ ಮಂದಿರ :** ಸರಸ್ವತಿ ಪೂಜಾ, ಸಂಜೆ 4.45 ರಿಂದ ಯಡತೊರೆ ಶ್ರೀ ಯೋಗಾನಂದೇಶ್ವರ ಮಠ; ರಾತ್ರಿ 6 ರಿಂದ ಶ್ರೀ ಕೃಷ್ಣಮಂದಿರ, ಗೋಕುಲಂ 3ನೇ ಹಂತ; ರಾತ್ರಿ 7 ರಿಂದ ಸಮುದಾಯ ಭವನ, ಗುರುದ್ವಾರ ಸಮೀಪ, ಬೃಂದಾವನ ಬಡಾವಣೆ.

■ **ಮೈಸೂರು ವಿಶ್ವವಿದ್ಯಾನಿಲಯ:** ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ–2025, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಉದ್ಘಾಟನೆ: ಪೊಲೀಸ್ ಉಪ ಮಹಾನಿರೀಕ್ಷಕ ರವಿ ಡಿ. ಚನ್ನಣ್ಣನವರ್, ವಿಶೇಷ ಉಪನ್ಯಾಸ: ಕನ್ನಡ ಪ್ರಾಧ್ಯಾಪಕ ಪ್ರೊ.ಜಿ.ಪ್ರಶಾಂತ ನಾಯಕ, ಉಪಸ್ಥಿತರು: ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ.ಸವಿತಾ, ಪ್ರೊ.ಎನ್.ನಾಗರಾಜು, ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್.ರೇಖಾ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಮಧ್ಯಾಹ್ನ 3ಕ್ಕೆ.

■ **ಕರ್ನಾಟಕ ರಾಜ್ಯ ಭಿಕ್ಕು ಸಂಘ, ರಾಜ್ಯ ಬೌದ್ಧ ಸಂಘ–ಸಂಸ್ಥೆಗಳು, ರಾಜ್ಯ ಅಂಬೇಡ್ಕರ್‌ವಾದಿ ಸಂಘಟನೆಗಳು ಮತ್ತು ವಿಶ್ವಮೈತ್ರಿ ಬುದ್ಧ ವಿಹಾರ:** ಬೌದ್ಧ ಮಹಾ ಸಮ್ಮೇಳನ, ಮಾನವ ಮೈತ್ರಿಯ ಪಯಣ... ಅಂತರರಾಷ್ಟ್ರೀಯ ಬೌದ್ಧ ಸಾಂಸ್ಕೃತಿಕ ಸಂಗಮ; ನಳಂದ ವೇದಿಕೆ: ಬೆಳಗ್ಗೆ 8ರಿಂದ ಧಮ್ಮಂ ನಮಾಮಿ, ಧಮ್ಮ ಸಾನ್ನಿಧ್ಯ: ಜೇತವನ ಬುದ್ಧವಿಹಾರ, ಕೊಳ್ಳೇಗಾಲ ಪೂಜ್ಯ ಭಂತೆ ಮನೋರಕ್ಖಿತ, ಸಾರನಾಥ ಸ್ಥಂಭಕ್ಕೆ ಧಮ್ಮ ನಮನ: ವಿಶ್ವಮೈತ್ರಿ ಬುದ್ಧವಿಹಾರ, ಮೈಸೂರಿನ ಪೂಜ್ಯ ಭಂತೆ ಕಲ್ಯಾಣಸಿರಿ, ಧಮ್ಮ ಧ್ವಜಾರೋಹಣ: ಬುದ್ಧವಿಹಾರ, ಕೂಡ್ಲೂರು, ಟಿ.ನರಸೀಪುರದ ಪೂಜ್ಯ ಭಂತೆ ಬೋಧಿರತ್ನ, ತಿಸರಣ ಪಠಣ: ಬುದ್ಧವಿಹಾರ, ಬೆಂಗಳೂರಿನ ಪೂಜ್ಯ ಭಂತೆ ಜ್ಞಾನಲೋಕ, ಪಂಚಶೀಲ ಪಠಣ: ಬುದ್ಧ ವಿಹಾರ, ಬೀದರ್‌ನ ಪೂಜ್ಯ ಭಂತೆ ಸಂಘಮಿತ್ರೆ, ಅಷ್ಟಾಂಗ ಮಾರ್ಗಗಳ ಸಾರ: ಬುದ್ಧವಿಹಾರ, ಬೀದರ್‌ನ ಪೂಜ್ಯ ಭಂತೆ ಜ್ಞಾನಸಾಗರ; ಸಾಮ್ರಾಟ್ ಅಶೋಕ ವೇದಿಕೆ: ಬೆಳಗ್ಗೆ 9.30ರಿಂದ, ಸಾನ್ನಿಧ್ಯ: ಬುದ್ಧವಿಹಾರ, ಅಂತರಸಂತೆ, ಹೆಚ್.ಡಿ.ಕೋಟೆ ಪೂಜ್ಯ ಭಂತೆ ಮಾತೆ ಗೌತಮಿ, ಉದ್ಘಾಟನೆ : ಸಾಹಿತಿ ಮೋನ್‌ರಾಜ್, ಅಧ್ಯಕ್ಷತೆ: ಚಿಂತಕ ಶಂಕನಪುರ ಮಹಾದೇವ; ರಾಜ ಕಾನಿಷ್ಕ ವೇದಿಕೆ: ಬೆಳಗ್ಗೆ 9ರಿಂದ ಸಾನ್ನಿಧ್ಯ: ಕೊಳತೂರು ಬುದ್ಧವಿಹಾರ, ಟಿ.ನರಸೀಪುರದ ಪೂಜ್ಯ ಭಂತೆ ಸುಗತಪಾಲ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅಧ್ಯಕ್ಷತೆ: ಬರಹಗಾರ ಸಿ.ಹರಕುಮಾರ್; ರಾಜ ಹರ್ಷವರ್ಧನ ವೇದಿಕೆ: ಬೆಳಗ್ಗೆ 9.30ರಿಂದ ಧಮ್ಮ ಸಾನ್ನಿಧ್ಯ: ನಾಗಸೇನಾ ಬುದ್ಧವಿಹಾರ, ಬೆಂಗಳೂರಿನ ಪೂಜ್ಯ ಭಂತೆ ಮೈತ್ರಿ ಅಮ್ಮ, ಉದ್ಘಾಟನೆ: ಪೊಲೀಸ್ ಮಹಾನಿರ್ದೇಶಕ ನಂಜುಂಡಸ್ವಾಮಿ, ಅಧ್ಯಕ್ಷತೆ: ಭಾರತೀಯ ಬೌದ್ಧ ಮಹಾಸಭಾ ನಿವೃತ್ತ ಡಿಸಿಪಿ ಸಿದ್ದರಾಜು; ಬಾಬಾ ಸಾಹೇಬ್ ಅಂಬೇಡ್ಕರ್ ವೇದಿಕೆ: ಬೆಳಗ್ಗೆ 9.30ರಿಂದ ಧಮ್ಮ ಸಾನ್ನಿಧ್ಯ: ಬುದ್ಧವಿಹಾರ, ತುಮಕೂರಿನ ಪೂಜ್ಯ ಭಂತೆ ಬುದ್ಧ ಪ್ರಕಾಶ್, ಉದ್ಘಾಟನೆ: ಚಿಂತಕ ತಲಕಾಡು ರಂಗೇಗೌಡ, ಅಧ್ಯಕ್ಷತೆ : ಅಂಬೇಡ್ಕರ್ ಅಧ್ಯಯನ ಕೇಂದ್ರದ ಪ್ರಾಧ್ಯಾಪಕ ಡಾ. ನರೇಂದ್ರಕುಮಾರ್, ಸ್ಥಳ: ಮಹಾರಾಜ ಕಾಲೇಜು ಮೈದಾನ.

■ **ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕ :** ಶರಣ ದರ್ಶನ–128 ಆನ್‌ಲೈನ್ ಕಾರ್ಯಕ್ರಮ, ಸಾಹಿತಿ ಡಾ.ಲೋಕೇಶ್ ಅಗಸನಕಟ್ಟೆ ಅವರಿಂದ ಸಿರಿಗೆರೆ ಶ್ರೀ ತರಳಬಾಳು ಬೃಹನ್ಮಠ ಲಿಂ. ಶ್ರೀ ಶಿವಕುಮಾರ ಮಹಾಸ್ವಾಮಿಗಳ ಬದುಕು ಬರಹ ಕುರಿತು ಉಪನ್ಯಾಸ, ಅಧ್ಯಕ್ಷತೆ: ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕ ಉಪಾಧ್ಯಕ್ಷ ಎಂ.ಚಿನ್ನಸ್ವಾಮಿ, ಸ್ಥಳ: ಶರಣ ಸಾಹಿತ್ಯ ಪರಿಷತ್, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ದಸರಾ ಚಿಂತನ, 6.15 ದಸರಾ ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ.ಎಸ್. ಪೂರ್ಣಿಮಾ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಪಿ. ಸುರುಭಿ ಹಾಗೂ ಕೆ.ಪಿ. ರೇವತಿ, ವ್ಯಾಖ್ಯಾನ–ಡಾ. ಎನ್.ಎಸ್. ತಾರಾನಾಥ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.05 ರೇಷ್ಮೆ ಸಿರಿ, 9.20 ವೃತ್ತಿ ಮಾರ್ಗದರ್ಶನ ಭೌತಶಾಸ್ತ್ರ ಅಂದರೆ ಫಿಸಿಕ್ಸ್ ವಿಷಯದಲ್ಲಿ ಇರುವ ಅಧ್ಯಯನ, ಸಂಶೋಧನೆ ಮತ್ತು ವೃತ್ತಿಪರ ಅವಕಾಶಗಳು ಕುರಿತು ಮೈಸೂರಿನ ಮಹಾರಾಣಿ ಮಹಿಳಾ ಕಾಲೇಜಿನ ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಡೀನ್ ಅಕಾಡೆಮಿಕ್ಸ್ ಡಾ. ಎಚ್.ಆರ್. ಶ್ರೀಪಾದ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ನಾಸಿಕ್ ಅಹ್ಮದ್–ಮ್ಯಾಂಡೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಆರ್.ಮೋಹನ್–ಕ್ಲ್ಯಾರಿಯೋನೆಟ್ ವಾದನ, 4.00 ಮಹಿಳಾ ರಂಗ, ಸಾಧನ ಶಿಖರ, ಭಾಗವಹಿಸುತ್ತಾರೆ–ಸಂಪ್ರದಾಯ ಗೀತೆಗಳನ್ನು ಹಾಡುವ ಮೈಸೂರಿನ ವಿಜಯಾಂಬ ಹೆಚ್.ಎನ್., ಪ್ರಸ್ತುತಿ–ಎಸ್.ಸುಬ್ರಹ್ಮಣ್ಯ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಎಸ್.ಎನ್.ಭಟ್ ಸೈಪಂಗಲ್ಲು, 6.50 ಕೃಷಿರಂಗ–ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಪಾಂಡವಪುರ ತಾಲೂಕು ಚಿನಕುರಳಿ ಹೋಬಳಿ ರಾಗಿಮುದ್ದನಹಳ್ಳಿ ಗ್ರಾಮದ ಆರ್.ಕೆ.ಶ್ರೀನಿವಾಸ್‌ಗೌಡ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ, ಬಾನುಲಿ ಬೇಸಾಯ ದಣಿವರಿಯದ ಕೃಷಿಗೆ ನಮ್ಮ ಸಹಾಯ, ಪ್ರಸ್ತುತಿ–ಆರ್.ಲೋಕೇಶ್ವರಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ಕನ್ನಡ ಚಿತ್ರಗೀತೆಗಳು, 8.00 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು, ಜಾನಪದ ಕ್ಷೇತ್ರದ ಸಾಧನೆಗಾಗಿ ಮೈಸೂರು ಆಕಾಶವಾಣಿ ಕೇಂದ್ರದಿಂದ ಸನ್ಮಾನಿತರಾದ ಜಾನಪದ ವಿದ್ವಾಂಸ ಡಾ. ಪಿ.ಕೆ.ರಾಜಶೇಖರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಡಾ.ಮೈಸೂರು ಉಮೇಶ್, 8.30 ಹಿಂದಿ ಚಿತ್ರಗೀತೆಗಳು, 9.30–ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


46

ಅಕ್ಟೋಬರ್ 15 ಬುಧವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 178 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ನಾಯಕತ್ವ ನಿರ್ಧಾರ ವರಿಷ್ಠರದ್ದೇ ಅಂತಿಮ

• ರಾಜ್ಯ ಕಾಂಗ್ರೆಸ್ ಇತಿಹಾಸದಲ್ಲಿ ಸಂಖ್ಯಾಬಲದ ಆಧಾರದಲ್ಲಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಯಾಗಿಲ್ಲ • ಕಿರಿಕಿರಿ ಮಾಡುವವರಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ 'ಜವಾಬ್'

ಬೆಂಗಳೂರು, ಅ.14(ಕೆಎಂಶಿ)– ರಾಜ್ಯ ಕಾಂಗ್ರೆಸ್ ಇತಿಹಾಸದಲ್ಲೇ ಸಂಖ್ಯಾಬಲದ ಆಧಾರದ ಮೇಲೆ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಆಗಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಾಂಬ್ ಸಿಡಿಸಿದ್ದಾರೆ.

ಪಕ್ಷದ ವರಿಷ್ಠರ ನಿರ್ಧಾರವೇ ಅಂತಿಮ, ನಮ್ಮಲ್ಲಿ ಶಾಸಕರ ಸಂಖ್ಯಾಬಲ ನಗಣ್ಯ, ಈ ಹಿಂದೆ ನಾಯಕರುಗಳ ಆಯ್ಕೆ ಇತಿಹಾಸವನ್ನು ತಿರುವಿ ಹಾಕಿದರೆ ವಾಸ್ತವ ತಿಳಿಯುತ್ತದೆ. ಸಿದ್ದರಾಮಯ್ಯ ಮೊದಲ ಬಾರಿಗೆ ಮುಖ್ಯಮಂತ್ರಿ ಆದಾಗ ನನ್ನನ್ನು ಮಂತ್ರಿಮಂಡಲಕ್ಕೆ ಸೇರ್ಪಡೆ ಮಾಡಿಕೊಂಡಿರಲಿಲ್ಲ.

ಎಸ್.ಎಂ.ಕೃಷ್ಣ ಆಡಳಿತದಲ್ಲಿ ನಾನು ಬೇರೆ ಪಕ್ಷಗಳಿಂದ ಯಾರನ್ನೆಲ್ಲಾ ಕರೆದುಕೊಂಡು ಬಂದೆನೋ ಅವರೆಲ್ಲಾ ಸಿದ್ದರಾಮಯ್ಯ ಸಂಪುಟದಲ್ಲಿ ಮಂತ್ರಿಯಾದರು. ನನಗೆ ಮಾತ್ರ ಅವಕಾಶ ದೊರೆಯಲಿಲ್ಲ.

ಅಧಿಕಾರ ತಪ್ಪಿದ್ದರ ಬಗ್ಗೆ ಸೋನಿಯಾ ಗಾಂಧಿ ಅವರ ಸಮಯ ಪಡೆದು ನಾನು ನೇರವಾಗಿ ವಿಷಯ ವಿವರಿಸಿದೆ. ಸೋನಿಯಾ ಅವರು ನನಗೆ ಸ್ವಲ್ಪ ದಿನ ಸುಮ್ಮನಿರು ಎಂದರು. ತಕ್ಷಣವೇ ರಾಹುಲ್ ಗಾಂಧಿ ನನ್ನನ್ನು ರಾಜಾಸ್ತಾನದಲ್ಲಿ ಚುನಾವಣಾ ಕಾರ್ಯಕ್ಕೆ ಕಳುಹಿಸಿಕೊಟ್ಟರು.



ಪಕ್ಷದ ಆದೇಶದಂತೆ ಎರಡು ತಿಂಗಳು ಕೆಲಸ ಮಾಡಿ ಹಿಂತಿರುಗಿ ಬರುತ್ತಿದ್ದಂತೆ ಸಿದ್ದರಾಮಯ್ಯ ಸಂಪುಟಕ್ಕೆ ಸೇರ್ಪಡೆಯಾಗು ಎಂದರು. ವರಿಷ್ಠರ ಆದೇಶವನ್ನು ಮುಖ್ಯಮಂತ್ರಿ ಅವರಿಗೆ ತಲುಪಿಸಿದಾಗ, ನಿನಗೆ ಇಂಧನ ಖಾತೆ ಬೇಕೋ, ಬೃಹತ್ ಕೈಗಾರಿಕಾ ಖಾತೆ ಬೇಕೋ ಎಂದರು. ನಾನು ಇಂಧನ ಖಾತೆ ಪಡೆದು ಸಚಿವನಾದೆ.

ಇದು ದೆಹಲಿ ಕಾಂಗ್ರೆಸ್‌ನ ಬಲ. ನನಗೆ ಯಾವ ಸಮಯದಲ್ಲಿ ಏನು ಸಿಗಬೇಕೋ ಅದು ಸಿಗಲಿದೆ. ನನ್ನ ಶ್ರಮಕ್ಕೆ ಫಲ ದೊರೆಯುತ್ತದೆ ಎಂಬ ಆಶಾಭಾವನೆ ಹೊಂದಿರುವವನು ನಾನು. ಪಕ್ಷ ಅಧಿಕಾರಕ್ಕೆ ಬಂದ ನಂತರ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಲಿ, ನೀನು ಉಪಮುಖ್ಯಮಂತ್ರಿ ಆಗು ಎಂಬುದಾಗಿ ಹೇಳಿ ಕಳುಹಿಸಿದರು. ಅವರ ಆದೇಶದಂತೆ ಸರ್ಕಾರ ರಚನೆ ಆಯಿತು.

ಸಂಪುಟ ಪುನರ್ ರಚನೆ ಆಗುತ್ತದೋ ಅಥವಾ ಹೊಸ ನಾಯಕತ್ವದಲ್ಲಿ ಸಂಪುಟ ರಚನೆ ಆಗುವುದೋ ಎಂಬ ಪ್ರಶ್ನೆಗೆ, ಇದು ಮುಖ್ಯಮಂತ್ರಿಗಳ ಪರಮಾಧಿಕಾರ ಹಾಗೂ ವರಿಷ್ಠರ ನಿರ್ಧಾರ.

ಆದರೆ, ಪಕ್ಷ ಮತ್ತು ಸರ್ಕಾರಕ್ಕೆ ಸಂಬಂಧಿಸಿದಂತೆ ನಾನು ಹಾಗೂ ಸಿದ್ದರಾಮಯ್ಯ ನಾಲ್ಕು ಗೋಡೆಗಳ ಮಧ್ಯೆ ಹಲವು ಬಾರಿ ಮಾತನಾಡಿದ್ದೇವೆ. ಅದೆಲ್ಲವನ್ನೂ ಬಹಿರಂಗಪಡಿಸಲು ಸಾಧ್ಯವಿಲ್ಲ.

ಅಧಿಕಾರ ಹಂಚಿಕೆ ವಿಷಯ ಕುರಿತಂತೆ ಸಿದ್ದರಾಮಯ್ಯ ಐದು ವರ್ಷ ನಾನೇ ಆಡಳಿತದಲ್ಲಿ ಇರುತ್ತೇನೆ. ಆದರೆ, ವರಿಷ್ಠರು ತೆಗೆದುಕೊಳ್ಳುವ ತೀರ್ಮಾನಕ್ಕೂ ಬದ್ಧ ಎಂದಿರುವುದನ್ನು ನೀವು ಯಾವ ರೀತಿಯಲ್ಲಾದರೂ ಅರ್ಥೈಸಿಕೊಳ್ಳಿ ಎಂದು ಶಿವಕುಮಾರ್ ಖಾಸಗಿ ಟಿವಿ ಒಂದಕ್ಕೆ ನೀಡಿರುವ ಸಂದರ್ಶನದಲ್ಲಿ ಮಾರ್ಮಿಕವಾಗಿ ತಿಳಿಸಿದ್ದಾರೆ.

ಬನ್ನಿಮಂಟಪದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಾಣ ಪ್ರಕ್ರಿಯೆ ಆರಂಭ

ಹಳೆ ಕಟ್ಟಡಗಳ ನೆಲಸಮಗೊಳಿಸುವ ಕಾಮಗಾರಿಗೆ ಚಾಲನೆ

• ಡಿಪೋ 1 ಮತ್ತು 2ರ ಹಳೆ ಕಟ್ಟಡ ನೆಲಸಮ • 120 ಕೋಟಿ ವೆಚ್ಚದಲ್ಲಿ 14 ಎಕರೆಯಲ್ಲಿ ಹೊಸ ಬಸ್ ನಿಲ್ದಾಣ ನಿರ್ಮಾಣ

ಮೈಸೂರು, ಅ.14(ಬಿಎಲ್‌ಯು)– ಮೈಸೂರಿನ ಬನ್ನಿಮಂಟಪದಲ್ಲಿ 120 ಕೋಟಿ ವೆಚ್ಚದಲ್ಲಿ ನಿರ್ಮಿಸುತ್ತಿರುವ ನೂತನ ಬಸ್ ನಿಲ್ದಾಣದ ಕಾಮಗಾರಿ ಪ್ರಕ್ರಿಯೆ ಆರಂಭಗೊಂಡಿದೆ. 14 ಎಕರೆ ಪ್ರದೇಶದಲ್ಲಿರುವ ಹಳೆ ಕಟ್ಟಡಗಳನ್ನು ನೆಲಸಮಗೊಳಿಸುವ ಕಾರ್ಯ ಭರದಿಂದ ಸಾಗಿದೆ.

ಬನ್ನಿಮಂಟಪದ ಕೆಎಸ್‌ಆರ್‌ಟಿಸಿ ಡಿಪೋ 2ರಲ್ಲಿ ಈ ಮೊದಲು ವೋಲ್ವೊ ಬಸ್‌ಗಳನ್ನು ನಿಲ್ಲಿಸಲಾಗುತ್ತಿತ್ತು. ಹಳೆ ಕಟ್ಟಡ ನೆಲಸಮಗೊಳಿಸುತ್ತಿರುವ ಹಿನ್ನೆಲೆಯಲ್ಲಿ ವೋಲ್ವೊ ಬಸ್‌ಗಳ ನಿಲುಗಡೆಗೆ ತಾತ್ಕಾಲಿಕ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ. ವೋಲ್ವೋ ಬಸ್ ನಿಲ್ಲುತ್ತಿದ್ದ ಡಿಪೋ 2 ರಲ್ಲಿರುವ ಹಳೆ ಕಟ್ಟಡಗಳನ್ನು ನೆಲಸಮಗೊಳಿಸಲಾಗುತ್ತಿದೆ.



ಕಟ್ಟಡವನ್ನು ನೆಲಸಮಗೊಳಿಸುತ್ತಿರುವುದು.

ಎರಡು ಜೆಸಿಬಿ ಯಂತ್ರಗಳ ಮೂಲಕ ಡಿಪೋ 1 ಮತ್ತು 2 ರಲ್ಲಿರುವ ಹಳೆ ಕಟ್ಟಡಗಳನ್ನು ನೆಲಸಮಗೊಳಿಸಲಾಗುತ್ತಿದೆ ನೆಲಸಮಗೊಳಿಸಿದ ನಂತರ ಅಡಿಪಾಯ ಹಾಗೂ ಪಿಲ್ಲರ್‌ಗಳ ನಿರ್ಮಿಸಿ, ಕಟ್ಟಡ ನಿರ್ಮಾಣ ■ 6ನೇ ಪುಟಕ್ಕೆ

ಅಂಬಾವಿಲಾಸ ಅರಮನೆ ಮಾದರಿ ಬಸ್ ನಿಲ್ದಾಣ



ಮೈಸೂರು, ಅ.14– ಮೈಸೂರಿನ ಅಂಬಾವಿಲಾಸ ಅರಮನೆ ಶೈಲಿ ರೂಪುರೇಷೆಯುಳ್ಳ ನೂತನ ಬಸ್ ನಿಲ್ದಾಣವನ್ನು ನಿರ್ಮಾಣ ಮಾಡಲಾಗುತ್ತಿದೆ. ಮೈಸೂರು ಪಾರಂಪರಿಕ ಕಟ್ಟಡಗಳ ತಾಣವಾಗಿರುವ ಹಿನ್ನೆಲೆಯಲ್ಲಿ ಹೊಸ ಬಸ್ ನಿಲ್ದಾಣಕ್ಕೆ ಪಾರಂಪರಿಕ ಶೈಲಿಯ ಸ್ಪರ್ಶ ನೀಡಲಾಗುತ್ತಿದೆ. ನೂತನ ಬಸ್ ನಿಲ್ದಾಣದಲ್ಲಿ ಆಧುನಿಕ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. 75 ಬಸ್ ಬೇ ಗಳಿರುವ ಬಸ್ ನಿಲ್ದಾಣದಲ್ಲಿ ಸಾರ್ವಜನಿಕರ ವಾಹನಗಳ ಪಾರ್ಕಿಂಗ್‌ನಲ್ಲಿ 300 ಕಾರು, 4,000 ದ್ವಿಚಕ್ರ ವಾಹನಗಳನ್ನು ನಿಲ್ಲಿಸಬಹುದಾಗಿದೆ. ಆಧುನಿಕ ತಂತ್ರಜ್ಞಾನದ ಲಿಫ್ಟ್‌ಗಳು, ಉತ್ತಮ ಶೌಚಾಲಯ, ಟಿಕೆಟ್ ಕೌಂಟರ್, ಶಿಶು ಆಹಾರ ಕೊಠಡಿ, ಪುರುಷರು ಹಾಗೂ ಮಹಿಳೆಯರಿಗೆ ಪ್ರತ್ಯೇಕ ನಿರೀಕ್ಷಣಾ ಕೊಠಡಿ ನಿರ್ಮಿಸಲಾಗುತ್ತಿದೆ.

ಅಂತಾರಾಷ್ಟ್ರೀಯ ಬೌದ್ಧ ಸಾಂಸ್ಕೃತಿಕ ಸಂಗಮದ 'ಬೌದ್ಧ ಮಹಾ ಸಮ್ಮೇಳನ'
■ ಪುಟ–5

COMMERCIAL LAND FOR LEASE / SALE
1.8 Acres of Commercial Land at Ammathi Town (South Coorg)
Contact: 9900984926
Brokers please excuse

ಚಾ.ನಗರದ ಬಳಿ ವಿದ್ಯುತ್ ಸ್ಪರ್ಶ: ಇಬ್ಬರು ಕೂಲಿ ಕಾರ್ಮಿಕರ ಸಾವು

• ಜಮೀನಿನ ಬೇಲಿಗೆ ಹಾಯಿಸಿದ್ದ ವಿದ್ಯುತ್ ಸ್ಪರ್ಶದಿಂದ ಘೋರ ದುರಂತ
• ಜಮೀನಿನಲ್ಲಿ ಶವವನ್ನಿಟ್ಟುಕೊಂಡು ಪ್ರತಿಭಟನೆ ನಡೆಸುತ್ತಿರುವ ಗ್ರಾಮಸ್ಥರು

ಚಾಮರಾಜನಗರ, ಅ.14– ಜಮೀನಿನಲ್ಲಿ ತೆಂಗಿನ ಕಾಯಿ ಕೀಳುವ ವೇಳೆ ವಿದ್ಯುತ್ ಸ್ಪರ್ಶದಿಂದ ಇಬ್ಬರು ಕೂಲಿ ಕಾರ್ಮಿಕರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಕೊತ್ತಲವಾಡಿ ಗ್ರಾಮದಲ್ಲಿ ಸಂಭವಿಸಿದೆ. ಗ್ರಾಮಸ್ಥರು, ಜಮೀನನ್ನು ಗುತ್ತಿಗೆ ಪಡೆದಿರುವವರು ಸ್ಥಳಕ್ಕೆ ಬರುವವರೆಗೂ ಮೃತದೇಹ ಎತ್ತುವುದಿಲ್ಲ ಎಂದು ಪಟ್ಟು ಹಿಡಿದು ಶವಗಳನ್ನಿಟ್ಟುಕೊಂಡು ಪ್ರತಿಭಟನೆ ನಡೆಸುತ್ತಿದ್ದಾರೆ.



ಸ್ವಾಮಿ ಕೃಷ್ಣ

ಕೊತ್ತಲವಾಡಿ ಗ್ರಾಮದ ಸ್ವಾಮಿ (43), ಕೃಷ್ಣ (44) ಮೃತ ಕೂಲಿ ಕಾರ್ಮಿಕರು.

ಘಟನೆಯ ವಿವರ: ಕೊತ್ತಲವಾಡಿ ಗ್ರಾಮದ ಪ್ರಕಾಶ್ ಎಂಬುವರಿಗೆ ಸೇರಿದ ಜಮೀನನ್ನು ಕೇರಳ ಮೂಲದ ವ್ಯಕ್ತಿಯೊಬ್ಬರಿಗೆ ಗುತ್ತಿಗೆ ನೀಡಲಾಗಿತ್ತು. ಈತ ಕಾಡು ಪ್ರಾಣಿಗಳಿಂದ ಬೆಳೆ ರಕ್ಷಣೆಗಾಗಿ ಜಮೀನಿನ ಸುತ್ತಲು ತಂತಿ ಬೇಲಿಯನ್ನು ಅಳವಡಿಸಿದ್ದು, ಅದಕ್ಕೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿದ್ದಾರೆ ಎನ್ನಲಾಗಿದೆ.

ಮಂಗಳವಾರ ಸ್ವಾಮಿ ಹಾಗೂ ಕೃಷ್ಣ ಅವರು ಜಮೀನಿಗೆ ಎಂದಿನಂತೆ ಕೂಲಿ ಕೆಲಸಕ್ಕೆ ತೆರಳಿದ್ದರು. ■ 6ನೇ ಪುಟಕ್ಕೆ

ಮುಂದಿನ ವರ್ಷ ಬಹುನಿರೀಕ್ಷಿತ 105 ಕಿ.ಮೀ. ಪೆರಿಫೆರಲ್ ರಿಂಗ್ ರೋಡ್ ಯೋಜನೆಗೆ ಚಾಲನೆ

7.5 ಕೋಟಿ ರೂ. ವೆಚ್ಚದಲ್ಲಿ 6 ತಿಂಗಳಲ್ಲಿ ಡಿಪಿಆರ್ ಸಲ್ಲಿಸಲು ಮೂರು ಕಂಪನಿಗಳು ಆಸಕ್ತಿ

ಮೈಸೂರು, ಅ. 14 (ಆರ್‌ಕೆ)– ಮಹತ್ವಾಕಾಂಕ್ಷೆಯ ಮೈಸೂರು ಹೊರವಲಯದ 105 ಕಿ.ಮೀ. ಪೆರಿಫೆರಲ್ ರಿಂಗ್ ರಸ್ತೆ ಯೋಜನೆ 2026ರಲ್ಲಿ ಸಾಕಾರಗೊಳ್ಳುವುದು ಖಚಿತವಾಗಿದೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ವು ಬಹುನಿರೀಕ್ಷಿತ ಈ ಯೋಜನೆಗೆ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಕರೆದಿದ್ದ ತಾಂತ್ರಿಕ ಮತ್ತು ಹಣಕಾಸು ಟೆಂಡರ್‌ನಲ್ಲಿ ಕರ್ನಾಟಕ, ಗುಜರಾತ್ ಮತ್ತು ಮಹಾರಾಷ್ಟ್ರ ಮೂಲದ ಮೂರು ಕಂಪನಿಗಳು ಆಸಕ್ತಿ ತೋರಿದ್ದವು. ತಾಂತ್ರಿಕ ಟೆಂಡರ್ ಅನ್ನು ತೆರೆಯಲಾಗಿದ್ದು ನಗರಾಭಿವೃದ್ಧಿ ಆಯುಕ್ತಾಲಯ ಮತ್ತು ಇಲಾಖೆ ಕಾರ್ಯದರ್ಶಿಯವರ ಅನುಮೋದನೆಗೆ ರವಾನಿಸಲಾಗಿದೆ. ಯಶಸ್ವಿ ಬಿಡ್ಡುದಾರರಿಗೆ ಡಿಪಿಆರ್ ಸಿದ್ಧಪಡಿಸಲು ಕಾರ್ಯಾದೇಶ (Work Order) ನೀಡಲಾಗುವುದೆಂದು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ



ಕೆ.ಆರ್. ರಕ್ಷಿತ್

ಕೆಆರ್. ರಕ್ಷಿತ್ ತಿಳಿಸಿದ್ದಾರೆ. 105.31 ಕಿ.ಮೀ. ಅಂತರ, 45 ಮೀಟರ್ ■ 6ನೇ ಪುಟಕ್ಕೆ

ಅ.17ಕ್ಕೆ ಮೈಸೂರು ವಿಭಾಗ ಮಟ್ಟದ ಬೃಹತ್ ಉದ್ಯೋಗ ಮೇಳ

ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ, ಜೀವನೋಪಾಯ, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಮಾಹಿತಿ

■ ಮಹಾರಾಜ ಕಾಲೇಜು ಮೈದಾನದಲ್ಲಿ ಉದ್ಯಮಿಗಳು–ಅಭ್ಯರ್ಥಿಗಳ ಮುಖಾಮುಖಿ ■ ಆನ್‌ಲೈನ್‌ನಲ್ಲಿ ಈಗಾಗಲೇ 24 ಸಾವಿರ ಅಭ್ಯರ್ಥಿಗಳು ನೋಂದಣಿ ■ 221 ಖಾಸಗಿ ಕಂಪನಿಗಳು ಭಾಗಿ ■ ಖಾಲಿ ಇರುವ 45 ಸಾವಿರಕ್ಕೂ ಅಧಿಕ ಹುದ್ದೆಗಳಿಗೆ ಆಯ್ಕೆ ಪ್ರಕ್ರಿಯೆ

ಮೈಸೂರು, ಅ.14(ಬಿಎಲ್‌ಯು)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಅಕ್ಟೋಬರ್ 17 ರಂದು ಮೈಸೂರು ವಿಭಾಗ ಮಟ್ಟದ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ ಉದ್ಯಮ ಶೀಲತೆ ಹಾಗೂ ಜೀವನೋಪಾಯ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ತಿಳಿಸಿದರು.

ಮೈಸೂರು ಜಿಪಂ ಸಭಾಂಗಣದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆವರೆಗೆ ನಿರಂತರವಾಗಿ ಮೇಳ ನಡೆಯಲಿದೆ. ಸ್ಥಳೀಯರು ಸೇರಿದಂತೆ ಹೊರ ಜಿಲ್ಲೆಯಿಂದ ಬರುವ ಅಭ್ಯರ್ಥಿಗಳಿಗೆ ಬಸ್ ಸೌಕರ್ಯ ಮಾಡಲಾಗುವುದು ಎಂದು ಹೇಳಿದರು.

ಉದ್ಯೋಗ ಮೇಳದಲ್ಲಿ 221 ಕಂಪನಿಗಳು ಭಾಗವಹಿಸುತ್ತಿದ್ದು, ಉದ್ಯೋಗ ಅರಸಿ 24,000 ಅಭ್ಯರ್ಥಿಗಳು ಈಗಾಗಲೇ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ. ನೋಂದಣಿ ಪ್ರಕ್ರಿಯೆ ಮುಂದುವರೆಯುತ್ತಿದ್ದು, ಉದ್ಯೋಗ ಮೇಳದ ದಿನ ಕೂಡ ಸ್ಥಳದಲ್ಲಿ ನೋಂದಣಿ ಮಾಡಿಕೊಳ್ಳಬಹುದು. ಇದರಿಂದ ಉದ್ಯೋಗ ಮೇಳದಲ್ಲಿ ದಾಖಲೆ ಪ್ರಮಾಣದಲ್ಲಿ ಅಭ್ಯರ್ಥಿಗಳು ಭಾಗಿಯಾಗುವ ಸಾಧ್ಯತೆ ಹೆಚ್ಚಿದೆ ಎಂದರು.

ಉದ್ಯೋಗ ಮೇಳದಲ್ಲಿ ಭಾಗವಹಿಸುವ ಖಾಸಗಿ ಕಂಪನಿಗಳು ನೀಡಿರುವ ಮಾಹಿತಿಯಂತೆ 45 ಸಾವಿರ ಹುದ್ದೆಗಳು ಖಾಲಿ ಇವೆ. ಉದ್ಯೋಗ ಮೇಳದಲ್ಲಿ ನೇರ ಸಂದರ್ಶನದ ಮೂಲಕ ಅರ್ಹರು ಆಯ್ಕೆಯಾಗಲಿದ್ದಾರೆ ಎಂದು ಡಾ.ಶರಣ ಪ್ರಕಾಶ್ ಪಾಟೀಲ್ ತಿಳಿಸಿದರು. ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಈಗಾಗಲೇ ಉದ್ಯೋಗ ಮೇಳ ನಡೆಸಲಾಗಿದೆ. ಶಿರಾದಲ್ಲಿ 9,700, ಸೇಡಂ ನಲ್ಲಿ 5,000, ಬೆಂಗಳೂರಿನಲ್ಲಿ 88,000, ಚನ್ನಪಟ್ಟಣದಲ್ಲಿ 70 ಸಾವಿರ ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದು, ಇವರಲ್ಲಿ ಸಾವಿರಾರು ಜನರಿಗೆ ಕೆಲಸ ಸಿಕ್ಕಿದೆ ಎಂದು ಮಾಹಿತಿ ನೀಡಿದರು.

ಡಿನ್ನರ್‌ಗೆ ವಿಶೇಷ ಅರ್ಥ ಬೇಡ: ಇದೇ ವೇಳೆ ಪ್ರಸಕ್ತ ರಾಜಕೀಯ ಬೆಳವಣಿಗೆ ಬಗ್ಗೆ ಪ್ರತಿಕ್ರಿಯೆ ನೀಡಿದ ಡಾ.ಶರಣ ಪ್ರಕಾಶ್ ಪಾಟೀಲ್ ಅವರು, ■ 6ನೇ ಪುಟಕ್ಕೆ

ಪಿಪಿಪಿ ಮಾಡೆಲ್‌ನಲ್ಲಿ 6 ಮೆಡಿಕಲ್ ಕಾಲೇಜು ಸ್ಥಾಪನೆಗೆ ಯೋಜನೆ

ರಾಜ್ಯದಲ್ಲಿ 22 ಸರ್ಕಾರಿ ಮೆಡಿಕಲ್ ಕಾಲೇಜು ಕಾರ್ಯ ನಿರ್ವಹಿಸುತ್ತಿದ್ದು, ಇದರ ಜೊತೆಗೆ ಪಿಪಿಪಿ ಮಾಡೆಲ್‌ನಲ್ಲಿ 6 ಮೆಡಿಕಲ್ ಕಾಲೇಜು ಸ್ಥಾಪಿಸುವ ಯೋಜನೆ ರೂಪಿಸಲಾಗಿದೆ ಎಂದು ಡಾ.ಶರಣ ಪ್ರಕಾಶ್ ಪಾಟೀಲ್ ತಿಳಿಸಿದರು.

ರಾಜ್ಯದ 22 ಮೆಡಿಕಲ್ ಕಾಲೇಜುಗಳಲ್ಲಿ 3,900 ಮೆರಿಟ್ ಸ್ಟೂಡೆಂಟ್‌ಗಳಿಗೆ ಎಂಬಿಬಿಎಸ್ ಪ್ರವೇಶಾವಕಾಶ ದೊರೆತಿದೆ. ಹೊಸ ಕಾಲೇಜುಗಳ ಸ್ಥಾಪನೆಯಾದರೆ ಎಂಬಿಬಿಎಸ್ ವ್ಯಾಸಂಗ ಮಾಡುವವರ ಸಂಖ್ಯೆ ಹೆಚ್ಚಾಗಿ, ರೋಗಿಗಳ ಒತ್ತಡ ಕಡಿಮೆಯಾಗಲಿದೆ ಎಂದರು.



ಮೈಸೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಮಾತನಾಡಿದರು. ಚಿತ್ರದಲ್ಲಿ ಮೈಸೂರು ಡಿಸಿ ಲಕ್ಷ್ಮೀಕಾಂತ ರೆಡ್ಡಿ, ಇಲಾಖಾ ಅಧಿಕಾರಿಗಳಿದ್ದಾರೆ.

ಕೆಲಸಕ್ಕೆ ಸೇರಿದರೆ ಯುವ ನಿಧಿ ಹಣ ನಿಲ್ಲಿಸುವುದಿಲ್ಲ

ಉದ್ಯೋಗಕ್ಕೆ ಸೇರಿದರೆ ಹಣ ಬರುವುದಿಲ್ಲ ಎಂಬ ತಪ್ಪು ಭಾವನೆಯಿಂದ ಯುವ ನಿಧಿ ಯೋಜನೆಯ ಬಹಳಷ್ಟು ಫಲಾನುಭವಿಗಳು ಕೆಲಸಕ್ಕೆ ಸೇರಲು ಹಿಂದೇಟು ಹಾಕುತ್ತಿದ್ದಾರೆ. ಆದರೆ ಕೆಲಸಕ್ಕೆ ಸೇರಿದರೂ ಹಣ ಪಾವತಿ ಮಾಡಲಾಗುವುದು ಎಂದು ಡಾ.ಶರಣ ಪ್ರಕಾಶ್ ಪಾಟೀಲ್ ಸ್ಪಷ್ಟಪಡಿಸಿದರು.

ಇಡೀ ಕರ್ನಾಟಕದಲ್ಲಿ 3 ಲಕ್ಷ ಯುವ ನಿಧಿ ಫಲಾನುಭವಿಗಳಿದ್ದು, ಇದರಲ್ಲಿ 43,500 ಮೈಸೂರಿನ ಫಲಾನುಭವಿಗಳಾಗಿದ್ದಾರೆ. ಕೆಲಸಕ್ಕೆ ಸೇರಿದರೆ ಹಣ ಬರುವುದಿಲ್ಲ ಎಂಬ ಭಯ ಬಿಟ್ಟು ಉದ್ಯೋಗ ಮೇಳದ ಎಲ್ಲರೂ ಭಾಗವಹಿಸುವಂತೆ ಸಲಹೆ ನೀಡಿದರು.

ಉದ್ಯೋಗ ಮೇಳದಲ್ಲಿ ಉದ್ಯೋಗಕ್ಕೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಕನಿಷ್ಠ ವೇತನದಿಂದ 12 ಲಕ್ಷ ರೂಪಾಯಿ ವರೆಗೆ ವರ್ಷಕ್ಕೆ ಪ್ಯಾಕೇಜ್ ದೊರೆಯಲಿದೆ. ಈ ಮೊದಲು ನಡೆಸಿರುವ ತಾಲೂಕು ಹಾಗೂ ಜಿಲ್ಲಾ ಮಟ್ಟದ ಉದ್ಯೋಗ ಮೇಳದಲ್ಲಿ 12,966 ಅಭ್ಯರ್ಥಿಗಳಿಗೆ ಉದ್ಯೋಗ ದೊರೆತಿದೆ ಎಂದರು. ಖಾಸಗಿ ಕಂಪನಿಗಳು ಫೋನ್ ಮಾಡಿ ಮುಕ್ತ ಆಹ್ವಾನ ನೀಡುತ್ತಿದ್ದರೂ ನಿರುದ್ಯೋಗಿಗಳು ಕೆಲಸಕ್ಕೆ ಬಾರದಿರುವುದು ದುರದೃಷ್ಟಕರ ಸಂಗತಿ ಎಂದು ಡಾ.ಶರಣ ಪ್ರಕಾಶ್ ಪಾಟೀಲ್ ಅಸಮಾಧಾನ ವ್ಯಕ್ತಪಡಿಸಿದರು.

- ಯುವನಿಧಿ ಫಲಾನುಭವಿಗಳು ಹಾಗೂ ಉದ್ಯೋಗಾಕಾಂಕ್ಷಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಲು http://udyogamela.ksdckarnataka.com ಎಂಬ ಪ್ರತ್ಯೇಕ ಪೋರ್ಟಲ್ ಸೃಜಿಸಲಾಗಿದ್ದು, ಆಸಕ್ತರು ಪೋರ್ಟಲ್‌ನಲ್ಲಿ ನೋಂದಾಯಿಸಲು ಅವಕಾಶ ಕಲ್ಪಿಸಲಾಗಿದೆ.
- ಉದ್ಯೋಗ ಮೇಳದಲ್ಲಿ ಭಾಗವಹಿಸುವವರಿಗೆ ಉಚಿತ ಪ್ರವೇಶಾವಕಾಶವಿದ್ದು, 60 ಮಳಿಗೆಗಳನ್ನು ತೆರೆಯಲಾಗಿದೆ. ಮೇಳದಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಗೂ ಉಪಹಾರದ ವ್ಯವಸ್ಥೆ ಮಾಡಲಾಗಿದೆ.
- ಮೇಳದಲ್ಲಿ ಭಾಗವಹಿಸುವ ಉದ್ಯೋಗಾಕಾಂಕ್ಷಿಗಳು ಅಧಿಕೃತ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 9606494308 / 9606494301 ಸಂಪರ್ಕಿಸಬಹುದು.
- ವಿಶೇಷ ಚೇತನರಿಗೆ ಅವಶ್ಯ ನೆರವು ನೀಡಲು ವಿಶೇಷ ಮಳಿಗೆ ತೆರೆಯಲಾಗಿದೆ.

ಮೈಸೂರಿನ ವರುಣ, ಕಲ್ಬುರ್ಗಿ, ಕೊಪ್ಪಳದಲ್ಲಿ 380 ಕೋಟಿ ವೆಚ್ಚದಲ್ಲಿ ವಿಶಿಷ್ಟ ಕೌಶಲ್ಯ ತರಬೇತಿ ಕೇಂದ್ರ ಆರಂಭಿಸಲು ಯೋಜನೆ ರೂಪಿಸಲಾಗಿದೆ. ಇಲ್ಲಿ ತರಬೇತಿ ಪಡೆದವರಿಗೆ ಸುಲಭವಾಗಿ ಉದ್ಯೋಗ ದೊರೆಯುತ್ತದೆ. ಇದರಿಂದ ನಿರುದ್ಯೋಗ ಸಮಸ್ಯೆ ನಿವಾರಣೆಯಾಗಿ, ಉದ್ಯಮ ವಿಸ್ತರಣೆಗೊಳ್ಳಲಿದೆ.

ಆಶೋಕ ರಸ್ತೆ, ಲಷ್ಕರ್ ಮೊಹಲ್ಲಾ, ಮೈಸೂರು 0821-2521926
ಟೆಂಪಲ್ ರೋಡ್, ವಿವಿ ಮೊಹಲ್ಲಾ, ಮೈಸೂರು 0821-4191926
ಎಂಜಿಎಸ್ ರಸ್ತೆ, ನಂಜನಗೂಡು 082214 67926



ತೊಳಸಿ ದೀಪೋತ್ಸವ ಸಂಭ್ರಮ
ಬೆಳಕಿನ ಉತ್ಸವಕ್ಕೆ ಬಂಗಾರದ ಕೊಡುಗೆಗಳು
ಅಕ್ಟೋಬರ್ 8 ರಿಂದ 22ರ ವರೆಗೂ
ಅತ್ಯಾಕರ್ಷಕ ವಿನ್ಯಾಸಗಳು - ಅತ್ಯುತ್ತಮ ಉಳಿತಾಯಗಳು
ಇನ್ನು 8 ದಿನಗಳು ಮಾತ್ರ - ಇಂದೇ ಭೇಟಿ ನೀಡಿ



ತೊಳಸಿ ಜ್ಯುಯಲ್ಸ್
THOLASI JEWELS
Fine Jewellers Since Generations

ನಕ್ಕರೆ ಅದೇ ಸ್ವರ್ಗ

ಗುಂಡ ಬಸ್ಸಿನಲ್ಲಿ ನಿಂತುಕೊಂಡೇ ಪ್ರಯಾಣಿಸುತ್ತಿದ್ದ
ಸಹ ಪ್ರಯಾಣಿಕರು : ಸುಮ್ನೆ ಯಾಕಪ್ಪ ನಿಂತುಕೊಂಡೇ ಇದ್ದೀಯಾ? ಸೀಟ್ ಖಾಲಿ ಇದೆಯಲ್ಲ ಬಾ ಕುತ್ಕೋ.
ಗುಂಡ : ಬೇಡ ಬಿಡಿ ಸರ್, ಈಗಾಗಲೇ ಲೇಟ್ ಆಗಿದೆ. ಕುತ್ಕೊಂಡು ಹೋದ್ರೆ ಇನ್ನೂ ಲೇಟ್ ಆಗುತ್ತೆ...!

ಮೈಸೂರು ಮಿತ್ರ
ಬುಧವಾರ, 15 ಅಕ್ಟೋಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ನೀವು ಬೇರೆಯವರ ತಪ್ಪುಗಳಿಂದ ಕಲಿಯಬೇಕು. ಏಕೆಂದರೆ ಎಲ್ಲಾ ತಪ್ಪುಗಳನ್ನು ಮಾಡಿ ಕಲಿಯುವಷ್ಟು ದೊಡ್ಡ ಜೀವನ ನಿಮ್ಮ ಬಳಿಯಿಲ್ಲ.
– ಚಾಣಕ್ಯ ಆಚಾರ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಣದಷ್ಟು ಮಾತಿಗಿಂತ ಕಣದಷ್ಟು ಕೆಲಸ ಲೇಸು.

ನಿಮ್ಮ ಪತ್ರಗಳು

ರೌಡಿ ಪ್ರತಿಬಂಧಕ ದಳ ರಚನೆ ಬರೀ 'ಆರಂಭ ಶೂರತ್ವ' ಆಗದಿರಲಿ...!

ಮಾನ್ಯರೆ,

ಮೈಸೂರು ನಗರದಲ್ಲಿ ಸಮಾಜಘಾತುಕ ಶಕ್ತಿಗಳ ಮೇಲೆ ನಿಗಾ ಇಡಲು, ರೌಡಿ ಪ್ರತಿಬಂಧಕ ದಳವನ್ನು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ರಚಿಸಿರುವುದು ಸ್ವಾಗತಾರ್ಹ ಬೆಳವಣಿಗೆ. ಇದರ ಅನಿವಾರ್ಯತೆ ಬಗ್ಗೆ 2023ರಲ್ಲೇ ತಮ್ಮ ಲೇಖನದ ಮೂಲಕ 'ಮೈಸೂರು ಮಿತ್ರ' ವ್ಯವಸ್ಥಾಪಕ ಸಂಪಾದಕರಾದ ವಿಕ್ರಮ್ ಮುತ್ತಣ್ಣ ಮನವರಿಕೆ ಮಾಡಿಕೊಟ್ಟಿದ್ದರು. ಇತ್ತೀಚೆಗೆ ಮೈಸೂರಿನಲ್ಲಿ ರೌಡಿಗಳ ಅಟ್ಟಹಾಸ ಮಿತಿ ಮೀರಿದೆ. ಹಾಡಹಗಲೇ ಕೊಲೆ, ಅತ್ಯಾಚಾರ–ಹತ್ಯೆ, ಲೇವಾದೇವಿ ವ್ಯವಹಾರಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಕೊಲೆ, ಬೆದರಿಕೆಗಳಿಂದ ಸಾರ್ವಜನಿಕರು ಪೊಲೀಸ್ ವ್ಯವಸ್ಥೆಯ ಮೇಲೆ ವಿಶ್ವಾಸವನ್ನೇ ಕಳೆದುಕೊಳ್ಳುತ್ತಿದ್ದರು. ಇಂತಹ ಸಂದರ್ಭದಲ್ಲಿ ಪೊಲೀಸ್ ಆಯುಕ್ತರು ರೌಡಿ ಪ್ರತಿಬಂಧಕ ದಳ ರಚನೆ ಮಾಡಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಆದರೆ ಇದು 'ಆರಂಭ ಶೂರತ್ವ' ಆಗಬಾರದು. ನಿರಂತರವಾಗಿ ಕೆಲಸ ನಿರ್ವಹಿಸುವಂತಾಗಬೇಕು.

ಸುಮಾರು 30 ವರ್ಷಗಳ ಹಿಂದೆ, ಅಂದಿನ ಮೈಸೂರು ನಗರ ಪೊಲೀಸ್ ಕಮಿಷನರ್ ಆಗಿದ್ದ ಕಸ್ತೂರಿ ರಂಗನ್ ಅವರು ರೌಡಿ ಪ್ರತಿಬಂಧಕ ದಳ ರಚನೆ ಮಾಡಿದ್ದರು. ಈ ತಂಡದಲ್ಲಿದ್ದ ದಕ್ಷ ಪೊಲೀಸ್ ಅಧಿಕಾರಿಗಳಾದ ಕೆ.ಎಸ್. ತಮ್ಮಯ್ಯ, ಧರ್ಮೇಶ್, ಪುಟ್ಟಸ್ವಾಮಿಗೌಡ ಇತರರು ಮೈಸೂರು ನಗರದಲ್ಲಿ ರೌಡಿಗಳ ಅಟ್ಟಹಾಸವನ್ನು ಸಮರ್ಥವಾಗಿ ಮಟ್ಟಹಾಕಿ ಜನಸಾಮಾನ್ಯರು ನೆಮ್ಮದಿಯಿಂದ ಬದುಕಲು ಕಾರಣವಾಗಿದ್ದರು. ನಂತರ ಮೈಸೂರು ನಗರಕ್ಕೆ ಪೊಲೀಸ್ ಕಮಿಷನರ್ ಆಗಿ ಬಂದ ಚಂದ್ರಶೇಖರ್ ಅವರು ಈ ರೌಡಿ ಪ್ರತಿಬಂಧಕ ದಳವನ್ನು ಸಿಸಿಬಿಯಲ್ಲಿ ವಿಲೀನಗೊಳಿಸಿದ್ದರು. ಇತ್ತೀಚಿನ ವರ್ಷಗಳಲ್ಲಿ ಪುಡಿ ರೌಡಿಗಳು ತಲೆ ಎತ್ತಿದರು. ಇಂತಹ ರೌಡಿ ಚಟುವಟಿಕೆಗಳ ಹಿಂದೆ ಕೆಲವು ರಾಜಕಾರಣಿಗಳ ಅಭಯವಿದ್ದು, ಇಂತಹವರಿಗೆ ಪೊಲೀಸರ ಭಯ–ಭೀತಿ ಇಲ್ಲದಂತಾಗಿದೆ. ಮುಂದಿನ ದಿನಗಳಲ್ಲಿ ಈ ರೌಡಿಸಂ ಅನ್ನು ಸಂಪೂರ್ಣವಾಗಿ ಮಟ್ಟ ಹಾಕಲು ರೌಡಿ ಪ್ರತಿಬಂಧಕ ದಳ ಸದಾ ಸಕ್ರಿಯವಾಗಿರಬೇಕು. ಮೊದಲು ಸಮಾಜಘಾತುಕ ಶಕ್ತಿಗಳೊಂದಿಗೆ ಪೊಲೀಸ್ ಅಧಿಕಾರಿಗಳ ಸಖ್ಯ ತಪ್ಪಿಸಬೇಕು. ಕಾನೂನಿನ ಆಳ್ವಿಕೆ ಜಾರಿಗೊಂಡರೆ ಎಲ್ಲರಿಗೂ ನೆಮ್ಮದಿ ದೊರಕಲಿದೆ. **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.**

ರಾಜ್ಯೋತ್ಸವ ಪ್ರಶಸ್ತಿಗೆ ಹಾಸ್ಯನಟ ಎಂ.ಎಸ್.ಉಮೇಶ್ ಪರಿಗಣಿಸಲಿ

ಮಾನ್ಯರೆ,



ಚಿತ್ರರಂಗದಲ್ಲಿ ಸಾಮಾನ್ಯವಾಗಿ ಜನರು ಆರಾಧಿಸು ವುದು ನಾಯಕ ನಟರನ್ನು ಮಾತ್ರ. ಹಾಗೆಯೇ ಜನರ ನಾಡಿಮಿಡಿತಕ್ಕೆ ಅನುಗುಣವಾಗಿ ಹಾಗೂ ಕೆಲವೊಮ್ಮೆ ತಮ್ಮ ರಾಜಕೀಯ ಲೆಕ್ಕಾಚಾರವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಪ್ರಶಸ್ತಿ ಪುರಸ್ಕಾರಗಳನ್ನು ನೀಡುವುದು ಜನಪ್ರಿಯ ನಾಯಕ ನಟರಿಗೆ ಮಾತ್ರ. ಆದರೆ ಜನರಿಗೆ ಮನರಂಜನೆ ನೀಡಿ ನಕ್ಕು ನಲಿಸುವ ಹಾಸ್ಯ ಕಲಾವಿದರು ಅವರ ಕಾಲಾನಂತರ ಜನರ ಮನಸಿನಿಂದ ಮಾಸಿ ಅಪ್ರಸ್ತುತವಾಗಿ ಬಿಡುತ್ತಾರೆ. ಎಂಬತ್ತರ ಇಳಿ ವಯಸ್ಸಿನ ಕನ್ನಡ ಚಿತ್ರರಂಗದ ಹಾಸ್ಯ ನಟ ಎಂ.ಎಸ್. ಉಮೇಶ್‌ರವರು ಅನಾರೋಗ್ಯದ ನಿಮಿತ್ತ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪರೀಕ್ಷೆಯಿಂದ ಅವರಿಗೆ ಕ್ಯಾನ್ಸರ್ ಎಂದು ತಿಳಿದು ಬಂದಿರುವುದಾಗಿ ವರದಿಯಾಗಿದೆ.

1960ರಲ್ಲಿ ತೆರೆಕಂಡ ಮಕ್ಕಳ ರಾಜ್ಯ ಚಲನ ಚಿತ್ರದಿಂದ ನಟನೆಯನ್ನು ಪ್ರಾರಂಭಿಸಿ ಸುಮಾರು 350 ಚಲನಚಿತ್ರಗಳಲ್ಲಿ ಆರು ದಶಕಗಳಿಗೂ ಹೆಚ್ಚು ಕನ್ನಡ ಜನತೆಯನ್ನು ತಮ್ಮದೇ ಮಾತಿನ ಹಾಗೂ ದೈಹಿಕ ಹಾಸ್ಯ ಶೈಲಿಯಿಂದ ನಕ್ಕು ನಲಿಸಿದ್ದಾರೆ. ನಾಟಕದ ಹಿನ್ನೆಲೆಯಲ್ಲಿ ಸ್ವಂತ ಪರಿಶ್ರಮದಿಂದ ಹಲವಾರು ಏಳುಬೀಳುಗಳ ನಡುವೆ ಬೆಳೆದು ಬಂದ ಇವರಿಗೆ ಚಲನಚಿತ್ರ ರಂಗದಲ್ಲಿ ಉತ್ತಮ ಪೋಷಕ ನಟ ಪ್ರಶಸ್ತಿ, ನಾಟಕ ಅಕಾಡಮಿ ಪ್ರಶಸ್ತಿ ಹೀಗೆ ಕೆಲವೊಂದು ಪ್ರಶಸ್ತಿಗಳು ಲಭಿಸಿವೆ. ಸುದೀರ್ಘ ಕಾಲ ಚಿತ್ರರಂಗದಲ್ಲಿ ಎಲ್ಲಾ ನಾಯಕ ನಟರೊಡನೆಯೂ ಸೇವೆ ಸಲ್ಲಿಸಿರುವ ಪ್ರಭಾವವಿಲ್ಲದ ಅಪ್ಪಟ ಕನ್ನಡಿಗ ಎಂ.ಎಸ್.ಉಮೇಶ್‌ರವರು ಕನ್ನಡನಾಡಿನ ಗೌರವಕ್ಕೆ ಅರ್ಹರೂ ಕೂಡ. ಅವರಿಗೆ ಮುಂದಿನ ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ರಾಜ್ಯೋತ್ಸವ ಪ್ರಶಸ್ತಿಗೆ ಸರ್ಕಾರ ಪರಿಗಣಿಸುವುದು ಸಮಂಜಸವಾಗಿರುತ್ತದೆ. ಇದರಿಂದ ಇಳಿ ವಯಸ್ಸಿನಲ್ಲಿ ಗಂಭೀರ ಕಾಯಿಲೆಯಿಂದ ಚಿಕಿತ್ಸೆ ಪಡೆಯುತ್ತಿರುವ ಅವರಿಗೂ ಮತ್ತು ಪ್ರಶಸ್ತಿಗೂ ಒಂದು ಗೌರವ ಸಿಕ್ಕಂತಾಗುತ್ತದೆ.
–ಕೆ.ಎಂ.ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು.

ಆರ್‌ಎಸ್‌ಎಸ್ ನಿಷೇಧದ ಹೇಳಿಕೆ ಮೂರ್ಖತನದ ಪರಮಾವಧಿ

ಮಾನ್ಯರೆ,

ಶಿಸ್ತು, ದೇಶ ಪ್ರೇಮಕ್ಕೆ ಹೆಸರಾಗಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಚಟುವಟಿಕೆಗಳನ್ನು ನಿಷೇಧಿಸಬೇಕೆಂಬ ರಾಜ್ಯ ಕಾಂಗ್ರೆಸ್ ಸರ್ಕಾರದ ಕೆಲ ಮಂತ್ರಿಗಳ ಹೇಳಿಕೆ ಮೂರ್ಖತನದ ಪರಮಾವಧಿಯಾಗಿದೆ. ಆರ್‌ಎಸ್‌ಎಸ್ ಬಗ್ಗೆ ಕಾಂಗ್ರೆಸ್ ನಾಯಕರು ಆಗಾಗ್ಗೆ ಏಕೆ ಹೊಟ್ಟೆ ಕಿವುಚಿಕೊಳ್ಳುತ್ತಾರೆಂಬುದು ನಿಜಕ್ಕೂ ಯಕ್ಷ ಪ್ರಶ್ನೆಯಾಗಿದೆ.

ನೂರು ವರ್ಷ ಪೂರೈಸಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ ಶಿಸ್ತಿನ ಸಂಘಟನೆಯಾಗಿದ್ದು, ಈ ತನಕ ದೇಶದಲ್ಲಿ ಯಾವುದೇ ಅಶಾಂತಿ ಮೂಡಿಸಿದಂತಹ ಉದಾಹರಣೆಗಳು ನಡೆದಿಲ್ಲ. ಯಾವುದೇ ಪ್ರಚಾರ ಪಡೆಯದೇ ಸಂಘರ್ಷಗಳಿಗೆ ಆಸ್ಪದ ನೀಡದೆ ತನ್ನ ಚಟುವಟಿಕೆಗಳನ್ನು ದೇಶ ಸೇವೆಗೋಸ್ಕರ ಮುಡಿಪಾಗಿಟ್ಟಿದೆ. ದೇಶದ ಪ್ರಧಾನಿ, ಗೃಹ ಸಚಿವರು, ಸರ್ಕಾರಿ ಅಧಿಕಾರಿಗಳು ಈ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಆದರೆ ಕರ್ನಾಟಕ ಕಾಂಗ್ರೆಸ್ ಸರ್ಕಾರ ಮತ್ತು ಕೆಲ ಸಚಿವರಿಗೆ ಆರೆಸ್ಸೆಸ್ ಕಂಡರೆ ಅದೇಕೆ ಅಷ್ಟು ಅಲರ್ಜಿ ಎಂಬುದು ನಿಗೂಢ ಪ್ರಶ್ನೆಯಾಗಿದೆ. ಕೋಟ್ಯಾಂತರ ಸೇವಕರನ್ನು ಹೊಂದಿರುವ ಆರೆಸ್ಸೆಸ್ ಬಗ್ಗೆ ಲಘುವಾಗಿ ಮಾತನಾಡುವ ಸಚಿವರು, ಇದೇ ರೀತಿ ಸಮಾಜದ ಸ್ವಾಸ್ಥ್ಯ ಹಾಳು ಮಾಡುತ್ತಿರುವ ಇತರೆ ಸಂಘಟನೆಗಳ ವಿರುದ್ಧ ಧ್ವನಿ ಎತ್ತುವ ಧೈರ್ಯ ತೋರಲಿ. ಯಾವುದೇ ಫಲಾಪೇಕ್ಷೆ ಇಲ್ಲದೆ ತನ್ನದೇ ಧ್ಯೇಯ–ಧೋರಣೆಗಳ ಮೂಲಕ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಆರ್‌ಎಸ್‌ಎಸ್ ದೇಶದ ಹೆಮ್ಮೆಯ ಪ್ರತೀಕ ಎಂಬುದನ್ನು ಯಾರು ಅಲ್ಲಗಳೆಯುವಂತಿಲ್ಲ.
–ಹೆಚ್.ಆರ್.ಪ್ರಸಾದ್, ವಿವೇಕಾನಂದನಗರ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಈಶಾವಾಸ್ಯೋಪನಿಷತ್ತು–ಒಂದು ಒಳನೋಟ

ಉಪನಿಷತ್ತುಗಳು ನಮ್ಮ ದೇಶದ ಅತ್ಯಂತ ಪ್ರಾಚೀನ ಚಿಂತನೆಗಳನ್ನು ಪ್ರತಿಬಿಂಬಿಸುವ ಗ್ರಂಥಗಳು. ಪ್ರಪಂಚವು ಆ ಕಾಲದಲ್ಲಿ ಅಷ್ಟು ಮುಂದುವರಿದಿರಲಿಲ್ಲವೆಂಬುದು ಸತ್ಯ. ನಾವು ಕಾಣುತ್ತಿರುವ ವೈಜ್ಞಾನಿಕ ಸತ್ಯಗಳನ್ನು ಮೂರು ಸಾವಿರ ವರ್ಷಗಳಷ್ಟು ಹಿಂದಿನ ಕಾಲದ ಜನರು ಕಂಡಿರಲಿಲ್ಲವೆನ್ನುವುದು ಸ್ಪಷ್ಟ. ಆದರೂ ತಪಸ್ಸಿನಿಂದ, ಮನಸ್ಸಿನ ಏಕಾಗ್ರತೆಯಿಂದ, ಯೋಗ ಸಾಧನೆಯಿಂದ ಋಷಿಗಳು ಕಂಡಿದ್ದ ಅನೇಕ ಸತ್ಯಗಳು ಇಂದಿಗೂ ನಮಗೆ ಮಾರ್ಗದರ್ಶಕಗಳಾಗ ಬಲ್ಲವೆಂಬುದಕ್ಕೆ ಉಪನಿಷತ್ತುಗಳು ಸಾಕ್ಷಿಯಾಗಿವೆ. ನೂರಾರು ಉಪನಿಷತ್ತುಗಳು ಇಂದೂ ಉಪಲಬ್ಧವಾಗಿರುವುದು ನಮ್ಮ ಪುಣ್ಯ. ಅವುಗಳಲ್ಲಿ ಪ್ರಾಚೀನತಮವೆಂದು ಪರಿಗಣಿತವಾಗಿರುವುವು ಹತ್ತು. ಈಶಾವಾಸ್ಯ, ಕೇನ, ಕಠ, ಪ್ರಶ್ನೆ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕ. ಇವುಗಳಲ್ಲಿ ಪ್ರಾಚೀನತೆಯಿಂದಲೂ ಗಹನತೆಯಿಂದಲೂ ಮೊದಲನೆಯದು ಈಶಾವಾಸ್ಯ.

ಈಶಾವಾಸ್ಯೋಪನಿಷತ್ತು ಯಜುರ್ವೇದದ ವಾಜಸನೇಯೀ ಶಾಖೆಗೆ ಸೇರಿದುದು. ಸಾಮಾನ್ಯವಾಗಿ ಉಪನಿಷತ್ತುಗಳು ವೇದಗಳ ಕೊನೆಯ ಭಾಗಗಳು. ಸಂಹಿತೆ, ಬ್ರಾಹ್ಮಣ, ಅರಣ್ಯಕ, ಉಪನಿಷತ್ತು ಎಂದು ವೇದಗಳ ನಾಲ್ಕು ಭಾಗಗಳನ್ನು ಕಾಣುತ್ತೇವೆ. ಆದರೆ ಈಶಾವಾಸ್ಯವು ಸಂಹಿತೆಯಲ್ಲೇ ಇರುವುದು ವಿಶೇಷ. ಇದರ ಮೊದಲನೆಯ ಪದ ಈಶಾವಾಸ್ಯ ಎಂದಿರುವುದರಿಂದ ಹೆಸರೂ ಈಶಾವಾಸ್ಯೋಪನಿಷತ್ ಎಂದಾಗಿದೆ. ಸಂಹಿತೆಯಲ್ಲೇ ಸೇರಿರುವುದರಿಂದ ಸಂಹಿತೋಪನಿಷತ್ ಎಂದೂ ಇದನ್ನು ಕರೆಯುವುದುಂಟು. ಇದು ಗಾತ್ರದ ದೃಷ್ಟಿಯಿಂದ ಚಿಕ್ಕದು. ಇದರಲ್ಲಿರುವುವು ಕೇವಲ ಹದಿನೆಂಟು ಮಂತ್ರಗಳು. ಒಂದೊಂದು ಮಂತ್ರವೂ ಅರ್ಥಗರ್ಭಿತ. ಮೊದಲನೆಯ ಮಂತ್ರ–

ಓಂ । ಈಶಾವಾಸ್ಯ ಮಿದಂ ಸರ್ವಂ ಯತ್ ಕಿಂಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯ ಸ್ವಿದ್ ಧನಮ್ ॥

ಇದಂ ಎಂದರೆ ಪ್ರತ್ಯಕ್ಷವಾಗಿರುವ ಸಮಸ್ತ ವಿಶ್ವವೂ ಎಂದು ಅರ್ಥ. ನಾವು ನೋಡುತ್ತಿರುವ ಎಲ್ಲ ಮನುಷ್ಯರೂ, ಪ್ರಾಣಿಗಳೂ, ಪಕ್ಷಿಗಳೂ ಸಮಸ್ತ ಜೀವಿಗಳೂ, ನದಿ–ಅರಣ್ಯ–ಪರ್ವತಗಳೂ, ಲಕ್ಷಾಂತರ ಅಥವಾ ಕೋಟ್ಯಾಂತರ ಅಥವಾ ಅಸಂಖ್ಯ ಗ್ರಹಗಳು, ನಕ್ಷತ್ರಗಳು, ನೀಹಾರಿಕೆಗಳು –ಇವೆಲ್ಲವೂ ಆ ಈಶ್ವರನಿಂದ ಆಚ್ಛಾದಿಸಲ್ಪಟ್ಟಿವೆ. ಎಲ್ಲವೂ ಅವನಲ್ಲೇ ಇವೆ. ಯತ್ ಕಿಂಚ ಜಗತ್ಯಾಂ ಜಗತ್ –ನಾವು ಕಾಣಲಾಗದ ವಿಶ್ವಗಳೂ ಆ ಈಶನಲ್ಲಿ, ಆ ಪ್ರಭುವಿನಲ್ಲಿ ನಿಂತಿವೆ.

ಇದು ಜ್ಞಾನಿಗಳು, ಸತ್ಯ ಸಾಕ್ಷಾತ್ಕಾರವನ್ನು ಮಾಡಿಕೊಂಡ ಋಷಿಗಳ ಜೀವನದೃಷ್ಟಿ ಎಲ್ಲವೂ ಭಗವಂತನ ಆವಾಸಸ್ಥಾನ. ಪ್ರತಿಯೊಂದು ಚರ–ಅಚರ ವಸ್ತುವೂ ಪರಮಾತ್ಮನ ಮನೆ. ಪ್ರತಿಯೊಂದನ್ನೂ ಪೂಜ್ಯ ಭಾವನೆಯಿಂದ ನೋಡಬೇಕು. ಯಾವನೂ ಯಾವುದೂ ತಿರಸ್ಕಾರಾರ್ಹವಲ್ಲ.

ಈಶಾವಾಸ್ಯ – ಈ ಜಗತ್ತನ್ನೆಲ್ಲ ಆವರಿಸಿಕೊಂಡಿರುವ ಶಕ್ತಿಯನ್ನೇ ನಾವು ದೇವರೆಂದು ಕರೆಯುವುದು ಎಂದು ಮಂಕುತಿಮ್ಮನ ಕಗ್ಗದ ಆರಂಭದಲ್ಲಿ ಡಿವಿಜಿ ಹೇಳಿರುವುದನ್ನು ನಾವಿಲ್ಲಿ ನೆನೆಯಬೇಕು.

ಜೀವಜಡರೂಪ ಪ್ರಪಂಚವನದಾವುದೋ
ಆವರಿಸಿಕೊಂಡು ಮೊಳ ನೆರೆದುಮಿಹುದಂತೆ
ಭಾವಕೊಳಪಡದಂತೆ ಅಳತೆಗಳವಡದಂತೆ
ಆ ವಿಶೇಷಕ ಮಣಿಯೊ ಮಂಕುತಿಮ್ಮ ॥

ಹೀಗೆ ಜಗತ್ತೆಲ್ಲ ಭಗವಂತನ ಆವಾಸ ಸ್ಥಾನವೆಂದು ತಿಳಿದವನು ಹೇಗೆ ನಡೆದುಕೊಳ್ಳಬೇಕೆಂಬುದನ್ನು ಮಂತ್ರದ ಉತ್ತರಾರ್ಧ ತಿಳಿಸುತ್ತದೆ – 'ತೇನ ತ್ಯಕ್ತೇನ ಭುಂಜೀಥಾಃ, ತ್ಯಾಗಪೂರ್ವಕವಾಗಿ ಎಲ್ಲವನ್ನೂ ಅನುಭವಿಸು, ಬಳಸಿಕೋ. ಯಾವುದೂ ನನ್ನೊಬ್ಬನದೇ ಎಂಬ ಭಾವನೆ ಬೇಡ. ಎಲ್ಲವೂ ಭಗವಂತನಿಗೆ ಸೇರಿದುದು. ಭಗವಂತನು ಏನನ್ನು ಎಷ್ಟನ್ನು ನನಗೆ ಬಿಟ್ಟಿರುವನೋ ಅಷ್ಟು ಮಾತ್ರ ನನ್ನದು. ಅಷ್ಟನ್ನು ನಾನು ತಿನ್ನಬೇಕು. ತ್ಯಾಗಪೂರ್ವಕವಾಗಿಯೇ ಭೋಗ. ಇದನ್ನು ಉಪನಿಷತ್ತು ಮತ್ತೆ ದೃಢಪಡಿಸುತ್ತದೆ. 'ಮಾ ಗೃಧಃ' ದುರಾಶೆ ಪಡಬೇಡ. ಗರ್ಧ ಎಂಬ ಶಬ್ದದ ಅರ್ಥ ಲೋಭ. ಅತಿಯಾಗಿ ಆಶೆಯನ್ನು ಪ್ರವೃತ್ತಿ. ಅದು ಬೇಡ ಎನ್ನುತ್ತದೆ ಉಪನಿಷತ್ತು. ಅದಕ್ಕೆ ಕಾರಣವನ್ನೂ ಹೇಳಿದೆ– ಕಸ್ಯಸ್ವಿದ್ ಧನಮ್? ಈ ಹಣವೆನ್ನುವುದು, ಸಂಪತ್ತೆನ್ನುವುದು ಯಾರದೆಂದುಕೊಂಡಿರುವೆ? ಯಾರ ಕೈಗೆ ಸಿಕ್ಕಿತೋ ಅವರದು. ವಸ್ತುತಃ ಅದು ಯಾರದೂ ಅಲ್ಲ. ನೆನ್ನೆ ಲಕ್ಷಾಧಿಕಾರಿ, ಇಂದು ಭಿಕ್ಷಾಧಿಕಾರಿ. ಈ ಜಗತ್ತಿನಲ್ಲಿ ಎಷ್ಟು ಜನ ದೊರೆಗಳು, ಚಕ್ರವರ್ತಿಗಳು, ಸಾಮ್ರಾಟರು ಆಗಿ ಹೋದರೋ 'ನೈಕೇನಾಪಿ ಸಮಂ ಗತಾ ವಸುಮತೀ' ಯಾರೊಬ್ಬರ ಜೊತೆಯಲ್ಲೂ ಭೂಮಿಯು ಹೋಗಲಿಲ್ಲ. ಹೀಗಿರುವಾಗ ಸಂಪತ್ತು ಯಾರದು?

ಈಶಾವಾಸ್ಯೋಪನಿಷತ್ತಿನ ಎರಡನೆಯ ಮಂತ್ರವು ಕರ್ಮಯೋಗದ ರಹಸ್ಯವನ್ನು ಬಿಚ್ಚಿಡುತ್ತದೆ.

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ।
ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ ॥

ಕರ್ಮಗಳನ್ನು ಮಾಡುತ್ತಲೇ ನೂರು ವರ್ಷ ಬದುಕಬೇಕೆಂದು ಮನುಷ್ಯನು ಇಷ್ಟಪಡಬೇಕು. ಹೀಗಿದ್ದರೆ ಮಾತ್ರ ಕರ್ಮ ಬಂಧನದಿಂದ ಮುಕ್ತಿ. ಕರ್ಮಗಳಿಂದ ಮನುಷ್ಯನು ಲಿಪ್ತನಾಗದೆ ಇರಲು ಬೇರೆ ಮಾರ್ಗವಿಲ್ಲ.

ಸೋಮಾರಿಯಾಗಿ ಕಾಲವನ್ನು ಕಳೆಯುವುದನ್ನು ಉಪನಿಷತ್ತು ಒಪ್ಪುವುದಿಲ್ಲ. ನೂರು ವರ್ಷ ಬದುಕಿದರೂ ವೇದೋಕ್ತವಾದ ಕರ್ಮಗಳನ್ನು ಮಾಡುತ್ತಲೇ ಜೀವಿಸಲು ಮನುಷ್ಯನು ಇಷ್ಟಪಡಬೇಕು. ಇದನ್ನೇ ಶಿವಶರಣರು ಕಾಯಕವೇ ಕೈಲಾಸ ಎಂದರು.

ಭಗವದ್ಗೀತೆಯು ಕರ್ಮಯೋಗ ಎಂದು ಇದನ್ನೇ ವಿಸ್ತರೇಣ ಹೇಳಿದೆ. ಅದರ ಮಾತಿನಲ್ಲಿ ಹೇಳಬೇಕಾದರೆ ಕರ್ಮಗಳನ್ನು ಮಾಡುತ್ತಿದ್ದರೂ ಅವುಗಳ ಬಂಧನದಿಂದ ತಪ್ಪಿಸಿಕೊಳ್ಳಬೇಕಾದರೆ, ಆ ಕರ್ಮಗಳು ನಿಷ್ಕಾಮ ಕರ್ಮಗಳಾಗಬೇಕು. ಹಾಗೆಂದರೇನು? ಕರ್ಮಗಳ ಫಲವನ್ನು ಪರಮಾತ್ಮನಿಗೇ ಅರ್ಪಿಸಿ ಬಿಡಬೇಕು.

ಆತ್ಮ ಎಂಬ ಸತ್ಯವನ್ನು ನಿರಾಕರಿಸಬಾರದು. ತನ್ನನ್ನು ತಾನೇ ಇಲ್ಲವೆಂದು ಕೊಳ್ಳುವವನು ಆತ್ಮಹತ್ಯೆಯನ್ನು ಮಾಡಿಕೊಂಡಂತಾಗುತ್ತದೆ.

ಅಸುರ್ಯಾ ನಾಮ ತೇ ಲೋಕಾ ಅಂಧೇನ ತಮಸಾವೃತಾಃ।
ತಾಂಸ್ತೇ ಪ್ರೇತ್ಯಾಭಿಗಚ್ಛಂತಿ ಯೇ ಕೇಚಾತ್ಮಹನೋ ಜನಾಃ॥

ಕಣ್ಣನ್ನು ಕುರುಡಾಗಿಸುವ ಕತ್ತಲೆಯಿಂದ ತುಂಬಿದ ಅಸುರ್ಯ ಎಂಬ ಲೋಕಗಳಿವೆ. ಯಾರು ಆತ್ಮ ನಿರಾಕರಣೆಯನ್ನು ಮಾಡುವರೋ ಅವರು ಸತ್ತ ಮೇಲೆ ಅಂತಹ ತಮೋ ಲೋಕಗಳಿಗೆ ಹೋಗುವರು ಎಂಬುದು ಈಶಾವಾಸ್ಯೋಪನಿಷತ್ತಿನ ಮೂರನೆಯ ಮಂತ್ರದ ತಾತ್ಪರ್ಯ. ಆತ್ಮ ಎಂಬ ಶಾಶ್ವತ ತತ್ತ್ವದಲ್ಲಿ ನಂಬಿಕೆಯನ್ನು ಈ ಮಂತ್ರವು ದೃಢಪಡಿಸುತ್ತದೆ. ಎಲ್ಲ ಉಪನಿಷತ್ತುಗಳ ಉಪದೇಶದ ಸಾರವೂ ಇದೇ. ಶರೀರವೆಂಬುದು ಅನಿತ್ಯ. ಸ್ಥೂಲ ಶರೀರವು ಅಶಕ್ತವಾದಾಗ ಅದನ್ನು ತ್ಯಜಿಸಿ ಆತ್ಮನು ಬೇರೆ ಶರೀರವನ್ನು ಪ್ರವೇಶಿಸುತ್ತಾನೆ. ಇದನ್ನೇ ಹೊಸ ಜನ್ಮ ಎಂದು ಕರೆಯುವುದು – ಎಂಬುದು ಉಪನಿಷತ್ತುಗಳ ಮತ್ತು ಭಗವದ್ಗೀತೆಯ ಸಿದ್ಧಾಂತ.

ವಿದ್ಯೆ–ಅವಿದ್ಯೆ ಎಂಬ ತತ್ತ್ವಗಳ ಬಗೆಗೆ ಈಶಾವಾಸ್ಯೋಪನಿಷತ್ತು ಮೂರು ಮಂತ್ರಗಳಲ್ಲಿ (9, 10, 11) ಹೇಳುವ ವಿಷಯಗಳು ಒಗಟಿನಂತಿವೆ.

ಅಂಧಂ ತಮಃ ಪ್ರವಿಶಂತಿ ಯೇ ಅವಿದ್ಯಾಮುಪಾಸತೇ।
ತತೋ ಭೂಯ ಇವ ತೇ ತಮೋ ಯಉ ವಿದ್ಯಾಯಾಂ ರತಾಃ॥

ಅವಿದ್ಯೆಯನ್ನು ಅವಲಂಬಿಸಿದವರು ಕಣ್ಣನ್ನು ಕುರುಡಾಗಿಸುವ ಕತ್ತಲೆಯನ್ನು ಪ್ರವೇಶಿಸುವರು. ಆದರೆ ಯಾರು ವಿದ್ಯೆಯಲ್ಲೇ ನಿರತರಾಗುವರೋ ಅವರು ಇನ್ನೂ ಹೆಚ್ಚು ಗಾಢವಾದ ತಮಸ್ಸನ್ನು ಪ್ರವೇಶಿಸುತ್ತಾರೆ.

ಇಲ್ಲಿ ವಿದ್ಯೆ–ಅವಿದ್ಯೆ ಎಂಬ ಪದಗಳಿಂದ ಉಪನಿಷತ್ತು ಏನನ್ನು ಹೇಳಲು ಬಯಸಿದೆ ಎಂಬುದು ಸ್ಪಷ್ಟವಾಗುವುದಿಲ್ಲ. ಅವಿದ್ಯೆ ಎಂದರೆ ಅಜ್ಞಾನ ಎಂದು ಸಾಮಾನ್ಯವಾಗಿ ಗ್ರಹಿಸುತ್ತೇವೆ. ಆತ್ಮವಲ್ಲದ ದೇಹ, ಮನಸ್ಸು, ಬುದ್ಧಿ, ಇಂದ್ರಿಯ ಮುಂತಾದವನ್ನು ಆತ್ಮವೆಂದು ಭ್ರಮಿಸುವುದು ಅವಿದ್ಯೆ ಎಂದು ಪಾತಂಜಲ ಯೋಗ ಸೂತ್ರವೂ ತಿಳಿಸುತ್ತದೆ. ಅಂತಹ ತಪ್ಪು ಜ್ಞಾನವನ್ನು ಹೊಂದಿದ್ದವರು ಅಂಧ ತಮಸ್ಸಿನಲ್ಲಿ ಪ್ರವೇಶಿಸುತ್ತಾರೆ ಎಂದು ಹೇಳಿರುವುದೇನೋ ಸರಿ. ಆದರೆ ಇದಕ್ಕೆ ವಿರುದ್ಧವಾದ ವಿದ್ಯೆಯನ್ನು ಆಶ್ರಯಿಸಿದವರು ಇನ್ನೂ ಹೆಚ್ಚು ಗಾಢವಾದ ಕತ್ತಲಿನಲ್ಲಿ ಪ್ರವೇಶಿಸುತ್ತಾರೆ ಎನ್ನುವುದನ್ನು ಒಪ್ಪುವುದು ಹೇಗೆ?

ಪ್ರಾಯಶಃ ಇಲ್ಲಿ ವಿದ್ಯಾ ಎಂಬ ಶಬ್ದ ಲೌಕಿಕ ವಿದ್ಯೆ ಎಂಬ ಅರ್ಥದಲ್ಲಿ ಪ್ರಯುಕ್ತವಾಗಿರಬಹುದು. ಜೀವಿಕೆಗಾಗಿ ನಾವು ಅವಲಂಬಿಸುವ ವಿದ್ಯೆಗಳಲ್ಲೇ ಮುಳುಗಿದವರು ಅಜ್ಞಾನಿಗಳು ಪ್ರವೇಶಿಸುವ ಕತ್ತಲೆಗಿಂತ ಹೆಚ್ಚು ಗಾಢವಾದ ಕತ್ತಲೆಯೊಳಕ್ಕೆ ನುಗ್ಗಿದಂತೆ ಎಂಬ ಅಭಿಪ್ರಾಯ ಋಷಿಗಳದಾಗಿರಬಹುದು. ಮುಂದಿನ ಮಂತ್ರವೂ ಆ ಅಭಿಪ್ರಾಯವನ್ನು ಸೂಚಿಸುವಂತಿದೆ.

ಅನ್ಯದೇವಾಹುರ್ವಿದ್ಯಯಾ ಅನ್ಯದಾಹುರವಿದ್ಯಯಾ।
ಇತಿ ಶುಶ್ರುಮ ಧೀರಾಣಾಂ ಯೇ ನಸ್ತದ್ವಿಚಚಕ್ಷಿರೇ॥

"ವಿದ್ಯೆಯಿಂದ ಸಿಕ್ಕುವ ಫಲವೇ ಬೇರೆ, ಅವಿದ್ಯೆಯಿಂದ ಸಿಕ್ಕುವ ಫಲವೇ ಬೇರೆ ಎಂದು ನಮಗೆ ವಿವರಿಸಿ ಹೇಳಿದ ಧೀರರ ಮಾತುಗಳನ್ನು ಕೇಳಿದ್ದೆವು."

ಅವಿದ್ಯೆಯಿಂದ ದುಃಖಮಯವಾದ ಫಲ, ವಿದ್ಯೆಯಿಂದ ಸುಖಮಯವಾದ ಫಲ ಬರುವುದೆಂಬುದು ಲೋಕಸಿದ್ಧವಾದುದೇ. ಆದರೆ ಈ ವಿದ್ಯೆ ಪರಾವಿದ್ಯೆಯಲ್ಲ. ಲೋಕದ ವಿದ್ಯೆಗೂ ಫಲವುಂಟು. ಧನಕನಕ ವಸ್ತು ವಾಹನಾದಿಗಳು ಅದರ ಫಲ. ಆದರೆ ಅದರಲ್ಲೇ ಮುಳುಗಿಬಿಟ್ಟರೆ ಸುಖದ ಮಾಯಾಜಾಲದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೇವೆ. ಅದು ಗಾಢವಾದ ಕತ್ತಲೆ.

ಹಾಗಾದರೆ ಮುಂದಿನ ಮಾರ್ಗವೇನು? ಜ್ಞಾನಿಯಾಗಿ ಮೋಕ್ಷ ಸಾಧನೆ ಮಾಡುವುದು ಹೇಗೆ?

ವಿದ್ಯಾಂ ಚ ಅವಿದ್ಯಾಂ ಚ ಯಸ್ತದ್ವೇದೋಭಯಂ ಸಹ ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ॥

ಲೋಕದಲ್ಲಿರುವ ಅವಿದ್ಯೆಯನ್ನೂ ವಿದ್ಯೆಯನ್ನೂ ಒಟ್ಟಿಗೆ ತಿಳಿದು ಕೊಳ್ಳಬೇಕು. (ಅವಿದ್ಯೆಯ ದೃಷ್ಟಿಯಿಂದ ನೋಡಿದರೆ ಇದೆಲ್ಲ ಅವಿದ್ಯೆಯೇ) ಉಭಯ ವಿಧವಾದ ಅವಿದ್ಯೆಯಿಂದ ಮೃತ್ಯುವನ್ನು (ಎಂದರೆ ಸದಾ ಮೃತ್ಯುಗ್ರಸ್ತವಾದ ಈ ಪ್ರಪಂಚವನ್ನು ದಾಟಿ, ನಿಜವಾದ ವಿದ್ಯೆಯಿಂದ, ಎಂದರೆ ಅಧ್ಯಾತ್ಮ ವಿದ್ಯೆಯಿಂದ, ಅಮೃತವನ್ನು) ಸಾಧಕನು ಪಡೆಯುತ್ತಾನೆ. ಈ ಅಮೃತವನ್ನೇ ಮೋಕ್ಷ, ಮುಕ್ತಿ, ಕೈವಲ್ಯ ಇತ್ಯಾದಿಯಾಗಿ ಕರೆಯುತ್ತಾರೆ. ಅಮೃತತ್ವವೇ ಮಾನವನ ಬದುಕಿನ ಗುರಿ.

ಇಲ್ಲಿನ ಮಂತ್ರಗಳಿಂದ ಮುಂದಿನ ಮೂರು ಮಂತ್ರಗಳಲ್ಲಿ ಸಂಭೂತಿ, ಅಸಂಭೂತಿ ಎಂಬವುಗಳ ಬಗೆಗೂ ಉಪನಿಷತ್ತು ಹೇಳುತ್ತದೆ.

ಅಂಧಂ ತಮಃ ಪ್ರವಿಶಂತಿ ಯೇಽಸಂಭೂತಿ ಮುಪಾಸತೇ।
ತತೋ ಭೂಯ ಇವತೇ ತಮೋ ಯ ಉ ಸಂಭೂತ್ಯಾಂ ರತಾಃ॥

ಅಸಂಭೂತಿಯನ್ನು ಉಪಾಸನೆ ಮಾಡುವವರು ಕುರುಡು ಕತ್ತಲೆಯೊಳಗೆ ಪ್ರವೇಶಿಸುತ್ತಾರೆ. ಸಂಭೂತಿಯಲ್ಲೇ ಮುಳುಗಿರುವವರು ಇನ್ನೂ ಹೆಚ್ಚು ಗಾಢವಾದ ಕತ್ತಲೆಯೊಳಗೆ ನುಗ್ಗುತ್ತಾರೆ.

ಇಲ್ಲೂ ಸಂಭೂತಿ–ಅಸಂಭೂತಿ ಎಂಬ ಶಬ್ದಗಳ ಅರ್ಥ ಸ್ಪಷ್ಟವಲ್ಲ. ಪ್ರಾಯಃ ಸಂಭೂತಿ ಎಂದರೆ ಸಾಕಾರ, ಅಸಂಭೂತಿ ಎಂದರೆ ನಿರಾಕಾರ–ನಿರಾಕಾರವನ್ನು ಉಪಾಸಿಸಲು ಹೊರಟವರೂ, ಸಾಕಾರದ ಆರಾಧನೆಯನ್ನೇ ಅತಿಯಾಗಿ ಮಾಡುವವರೂ ಕತ್ತಲಿನಲ್ಲೇ ಉಳಿದುಬಿಡುತ್ತಾರೆ ಎಂಬ ಭಾವನೆ ಇರಬಹುದು.

ಅನ್ಯದೇವಾಹುಃ ಸಂಭವಾತ್ ಅನ್ಯದಾಹುರಸಂಭವಾತ್ ।
ಇತಿ ಶುಶ್ರುಮ ಧೀರಾಣಾಂ ಯೇ ನಸ್ತದ್ ವಿಚಚಕ್ಷಿರೇ॥

ಸಾಕಾರದ ಆರಾಧನೆಯಿಂದ ದೊರಕುವ ಫಲವೇ ಬೇರೆ, ನಿರಾಕಾರದ ಉಪಾಸನೆಯಿಂದ ದೊರಕುವ ಫಲವೇ ಬೇರೆ ಎಂದು ನಮಗೆ ವಿವರಿಸಿದ ಧೀರರ ಮಾತುಗಳನ್ನು ಕೇಳಿದ್ದೇವೆ.

ಇಷ್ಟು ಹೇಳಿದ ಮೇಲೆ ಮುಂದಿನ ಮಾತು ಮತ್ತೂ ನಮಸ್ಯಾತ್ಮಕವೇ ಆಗಿದೆ.

ಸಂಭೂತಿಂ ಚ ವಿನಾಶಂ ಚ ಯಸ್ತದ್ವೇದೋ ಭಯಂ ಸಹ।
ವಿನಾಶೇನ ಮೃತ್ಯುಂ ತೀರ್ತ್ವಾ ಸಂಭೂತ್ಯಾಮೃತಮಶ್ನುತೇ॥

ಸಂಭೂತಿಯನ್ನು ವಿನಾಶವನ್ನೂ ಈ ಎರಡನ್ನೂ ಒಟ್ಟಿಗೆ ಯಾವನು ತಿಳಿದಿರುವನೋ ಅವನು ವಿನಾಶದಿಂದ ಮೃತ್ಯುವನ್ನು ದಾಟಿ ಸಂಭೂತಿಯಿಂದ ಅಮೃತವನ್ನು ಅನುಭವಿಸುವನು.

ಅಸಂಭೂತಿಯನ್ನಿಲ್ಲಿ ವಿನಾಶ ಎಂದು ಕರೆಯಲಾಗಿದೆ. ವಿನಾಶ ಎಂದರೆ ನಾಶವಿಲ್ಲದ್ದು ಎಂಬ ಅರ್ಥವನ್ನಿಲ್ಲಿ ಗ್ರಹಿಸಬೇಕು. ನಿರಕಾರವಾದುದಕ್ಕೆ ನಾಶವಿಲ್ಲ. ಅದರ ಉಪಾಸನೆಯಿಂದ ನಾಶೋಪಲಕ್ಷಕವಾದ ಮೃತ್ಯುವನ್ನು ದಾಟಿ ಸಾಕಾರದ ಅನುಗ್ರಹದಿಂದ ಅಮೃತತ್ವವನ್ನು ಪಡೆಯಬೇಕು. ಇವೆಲ್ಲ ಅತ್ಯಂತ ಸೂಕ್ಷ್ಮ ವಿಷಯಗಳು. ಇವುಗಳನ್ನು ಸ್ಪಷ್ಟಪಡಿಸು ಎಂಬ ಪ್ರಾರ್ಥನೆ ಉಪನಿಷತ್ತಿನಲ್ಲಿದೆ.

ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಮ್ ।
ತತ್ತ್ವಂ ಪೂಷನ್ನಪಾವೃಣು ಸತ್ಯಧರ್ಮಾಯ ದೃಷ್ಟಯೇ॥

ಚಿನ್ನದ ಪಾತ್ರೆಯಿಂದ ಸತ್ಯದ ಮುಖ ಮುಚ್ಚಿದೆ. ಸೂರ್ಯನೇ, ಆ ಮುಚ್ಚಳವನ್ನು ಸರಿಸು ನಾನು ಸತ್ಯದ ದೃಷ್ಟಿಯನ್ನು ಪಡೆಯುವಂತೆ ಆಗಲಿ.

ಈ ರೀತಿಯಾಗಿ ಪ್ರಾರ್ಥಿಸಿ ಸತ್ಯವನ್ನು ಕಾಣಲು ಯತ್ನಿಸುತ್ತಾ ಸಾಧಕರು ಗುರಿಯನ್ನು ಮುಟ್ಟುತ್ತಾರೆ. ಇದು ಈಶಾವಾಸ್ಯೋಪನಿಷತ್ ತೋರಿಸುವ ಮಾರ್ಗ.

ಈ ಉಪನಿಷತ್ತಿನ ಭಾಷ್ಯಗಳು, ವ್ಯಾಖ್ಯಾನಗಳು, ಅನುವಾದಗಳು, ವಿವರಣೆಗಳು ಸಾಕಷ್ಟಿದ್ದರೂ ಅದರ ಮುಖ್ಯ ಉದ್ದೇಶವೇನು? ಕರ್ಮ ಮಾರ್ಗದಲ್ಲಿ ಜನರ ಪ್ರವರ್ತನೆಯೋ, ಜ್ಞಾನಪ್ರಾಧಾನ್ಯದ ಪ್ರತಿಪಾದನೆಯೋ ಅಥವಾ ಭಕ್ತಿಮಾರ್ಗದಲ್ಲಿ ಜನರನ್ನು ತೊಡಗಿಸಲು ಪ್ರಯತ್ನವೋ ಎಂಬುದು ಸ್ಪಷ್ಟವಾಗುವುದಿಲ್ಲ. ಇದರ ಗಂಭೀರ ಅಧ್ಯಯನ ಇನ್ನೂ ಅವಶ್ಯಕ.

ಓಂ ಶಾಂತಿಃ ಶಾಂತಿಃ ಶಾಂತಿಃ

ಡಾ.ಎಸ್.ಎಲ್.ಭೈರಪ್ಪರಿಗೆ ಸಾಹಿತ್ಯಲೋಕದ ನುಡಿನಮನ

• ಶ್ರೀಯುತರ ಕಾದಂಬರಿಗಳು ಸರ್ವಕಾಲಕ್ಕೂ ಒಪ್ಪಿತ: ಸಿಪಿಕೆ • ಪ್ರತಿ ಕೃತಿ ರಚನೆಗೂ ಮುನ್ನ ಭೈರಪ್ಪನವರು ಕ್ಷೇತ್ರಾಧ್ಯಯನ ಮಾಡುತ್ತಿದ್ದರು: ಡಾ.ಪ್ರಧಾನ ಗುರುದತ್ • ಯಾರೇನೇ ಹೇಳಲಿ ಭೈರಪ್ಪನವರ ಕಾದಂಬರಿ ಓದುಗರಲ್ಲಿ ಮಹಿಳೆಯರೇ ಅಧಿಕ: ಕವಯಿತ್ರಿ ಡಾ.ಲತಾ ರಾಜಶೇಖರ್

ಮೈಸೂರು, ಅ.14(ಎಸ್‌ಪಿಎನ್)– ಇತ್ತೀಚೆಗೆ ನಿಧನರಾದ ಹಿರಿಯ ಸಾಹಿತಿ, ಸರಸ್ವತಿ ಸಮ್ಮಾನ್ ಪುರಸ್ಕೃತ ಡಾ.ಎಸ್.ಎಲ್.ಭೈರಪ್ಪನವರಿಗೆ ಹಿರಿಯ ಸಾಹಿತಿ ಗಳಾದ ಡಾ.ಸಿ.ಪಿ.ಕೃಷ್ಣಕುಮಾರ್, ಡಾ.ಪ್ರಧಾನ ಗುರುದತ್ ಸಮ್ಮುಖದಲ್ಲಿ ನುಡಿನಮನ ಸಲ್ಲಿಸಲಾಯಿತು.

ಮೈಸೂರು ವಿಜಯನಗರ ಒಂದನೇ ಹಂತದ ಕಸಾಪ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಕರ್ನಾಟಕ ಲೇಖಕಿಯರ ಸಂಘ, ವಿಜಯನಗರ ಕ್ಷೇಮಾಭಿವೃದ್ಧಿ ಸಂಘ, ಮೈಸೂರು ಲೇಡೀಸ್ ಅಸೋಸಿಯೇಷನ್ ಸಹಯೋಗದೊಂದಿಗೆ ಡಾ.ಎಸ್.ಎಲ್. ಭೈರಪ್ಪನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ನುಡಿನಮನ ಸಲ್ಲಿಸಿದರು.

ಬಳಿಕ ಮಾತನಾಡಿದ ಹಿರಿಯ ಸಾಹಿತಿ ಡಾ.ಸಿಪಿಕೆ, ಡಾ.ಭೈರಪ್ಪನವರು 25ಕ್ಕೂ ಹೆಚ್ಚು ಅದ್ಭುತ ಕಾದಂಬರಿಗಳನ್ನು ಬರೆದಿದ್ದಾರೆ. ಆ ಕಾದಂಬರಿಗಳು ಎಲ್ಲಾ ಕಾಲಕ್ಕೂ ಸಲ್ಲುತ್ತವೆ. ಇಷ್ಟು ಜನಪ್ರಿಯ ಕಾದಂಬರಿಗಳನ್ನು ನೀಡಿರುವ ಭೈರಪ್ಪನವರನ್ನು ಅದ್ಭುತ ಕಾದಂಬರಿಕಾರ ಎಂದರೆ ತಪ್ಪಾಗಲಾರದು.

ಒಂದಕ್ಕೊಂದು ಭಿನ್ನ: ಭೈರಪ್ಪನವರು ತಮ್ಮ ಬರಹಗಳಲ್ಲಿ ಜನಪ್ರಿಯತೆ ಮತ್ತು ಚಿಂತನಶೀಲತೆ ಇವೆರಡನ್ನೂ ಕಾಯ್ದುಕೊಂಡ ಅಪರೂಪ ಬರಹಗಾರ. 1961ರಲ್ಲಿ ಜನಪ್ರಿಯವಾದ ಅವರ ಧರ್ಮಶ್ರೀ ಕಾದಂಬರಿಯಿಂದ ಮೊದಲ್ಗೊಂಡು ಇತ್ತೀಚಿನ ಎಲ್ಲಾ ಕಾದಂಬರಿಗಳ ವರೆಗೆ ಜನಪ್ರಿಯಗೊಂಡಿರುವುದು ವಿಶೇಷ ಎಂದರು.



ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪನವರ ಭಾವಚಿತ್ರಕ್ಕೆ ಸಾಹಿತ್ಯ ಲೋಕದ ಗಣ್ಯರು, ಸಾಹಿತಿಗಳು ಪುಷ್ಪಾರ್ಚನೆ ಮಾಡಿದರು.

ಭೈರಪ್ಪ ವಿಶ್ವ ಸಾಹಿತಿ: ಕನ್ನಡ ಸಾಹಿತ್ಯದಲ್ಲಿ ಭೈರಪ್ಪನವರು ಸಾಮಾಜಿಕ ಕಾದಂಬರಿಕಾರರೆಂದೇ ಪ್ರಸಿದ್ಧರಾಗಿದ್ದಾರೆ. ಅವರ ಕಾದಂಬರಿಗಳಲ್ಲಿ ಸಂಗೀತಕ್ಕೂ ಹೆಚ್ಚು ಒತ್ತು ನೀಡುತ್ತಿದ್ದರು. ಅನೇಕ ವಿಮರ್ಶಕಾರರು, ಭೈರಪ್ಪನವರ ಬರಹಗಳನ್ನು ಸ್ತ್ರೀ ವಿರೋಧಿ ಎಂದು ವಿಮರ್ಶೆ ಮಾಡಿದರೂ ಮಹಿಳೆಯರೇ ಹೆಚ್ಚಾಗಿ ಅವರ ಕೃತಿಗಳನ್ನು ಕೊಂಡು ಓದುತ್ತಿರುವುದು ವಿಶೇಷ. ಅವರ ಹಲವು ಕಾದಂಬರಿಗಳು ಬೇರೆಬೇರೆ ಭಾಷೆಗಳಿಗೂ ತರ್ಜುಮೆಗೊಂಡು ದೇಶ–ವಿದೇಶಗಳಲ್ಲೂ ಇವರಿಗೆ ಓದುಗರಿರುವುದು ವಿಶೇಷ. ಹಾಗಾಗಿ ಇವರನ್ನು 'ವಿಶ್ವ ಸಾಹಿತಿ' ಎಂದರೆ ತಪ್ಪಾಗಲಾರದು ಎಂದು ಬಣ್ಣಿಸಿದರು.

ಹಿರಿಯ ಸಾಹಿತಿ ಡಾ.ಪ್ರಧಾನ ಗುರುದತ್ ಮಾತನಾಡುತ್ತಾ, ಭೈರಪ್ಪನವರ ಕೃತಿಗಳಿಗೆ ದೇಶ–ವಿದೇಶಗಳಲ್ಲಿಯೂ ಹೆಚ್ಚಿನ ಓದುಗರಿದ್ದಾರೆ. ನಮ್ಮ ರಾಜ್ಯದ ಗಡಿಗೆ ಸೀಮಿತಗೊಳಿಸದೇ ವಿಶ್ವ ಸಾಹಿತಿ ಎಂದರೆ ತಪ್ಪಾಗಲಾರದು. ಒಂದೊಂದು ಕಾದಂಬರಿಯೂ ಐತಿಹಾಸಿಕ. ಆ ಕಾದಂಬರಿಗಳಲ್ಲಿನ ಕಥಾವಸ್ತುಗಳು ಸರ್ವಕಾಲಿಕ.

ಕ್ಷೇತ್ರಾಧ್ಯಯನಕ್ಕೆ ಒತ್ತು: ಯಾವುದೇ ಕೃತಿಗಳನ್ನು ಬರೆಯುವ ಮುನ್ನ ಕ್ಷೇತ್ರಾಧ್ಯಯನಕ್ಕೆ ಹೆಚ್ಚು ಒತ್ತು ನೀಡಿ, ಪ್ರವಾಸ ಮಾಡುತ್ತಿದ್ದರು. ಅವರು ಆಯ್ಕೆ ಮಾಡಿಕೊಳ್ಳುತ್ತಿದ್ದ ಪ್ರತಿಯೊಂದು ಕಥಾವಸ್ತುವೂ ಸಂಶೋಧನಾತ್ಮಕವಾಗಿರುತ್ತಿತ್ತು. ಹಾಗಾಗಿ ಅವರ ಕಾದಂಬರಿಗಳಲ್ಲಿ ಒಂದಕ್ಕಿಂತ ಒಂದು ಅದ್ಭುತವಾಗಿವೆ. ಅದರಲ್ಲಿ 'ಭೀಮಕಾಯ', 'ಪರ್ವ', 'ಮತದಾನ', 'ತಬ್ಬಲಿ ನೀನಾದೆ ಮಗನೆ' ಹಾಗೂ 'ನಾಯಿ ನೆರಳು' ಒಂದಕ್ಕಿಂತ ಒಂದು ಭಿನ್ನವಾಗಿವೆ ಎಂದು ಹೇಳಿದರು.

> "ಸಾರಸ್ವತ ಲೋಕದಲ್ಲಿ ವಿಮರ್ಶೆಗಳು ಏನೇ ಇರಲಿ. ಭೈರಪ್ಪನವರು ರಚಿಸಿದ 25 ಕಾದಂಬರಿಗಳು 'ವಿಶ್ವಪ್ರಸಿದ್ಧ'. ಅವರ ಕಾದಂಬರಿಗಳಲ್ಲಿ 'ತಬ್ಬಲಿ ನೀನಾದೆ ಮಗನೆ' ನಾನು ಮೆಚ್ಚಿಕೊಂಡ ಕಾದಂಬರಿ. ಇದರಂತೆ ಇತರೆ ಕಾದಂಬರಿಗಳು ಹೆಚ್ಚು ಜನಪ್ರಿಯವಾಗಿವೆ. ಅವರು ಕಾದಂಬರಿ ರಚಿಸಲು ಕ್ಷೇತ್ರಾಧ್ಯಯನ ಕೈಗೊಂಡು ವೈಜ್ಞಾನಿಕ ಬರವಣಿಗೆ ಮಾಡುತ್ತಿದ್ದರು. ಈ ಕಾರ್ಯ, ತಾಳ್ಮೆ ಎಲ್ಲರಿಗೂ ಸಾಧ್ಯವಿಲ್ಲ.
> **–ಪ್ರೊ.ಪದ್ಮಾಶೇಖರ್, ವಿಶ್ರಾಂತ ಕುಲಪತಿ, ಕರ್ನಾಟಕ ರಾಜ್ಯ ಸಂಸ್ಕೃತ ವಿವಿ.**

ಮಹಿಳಾ ಓದುಗರೇ ಹೆಚ್ಚು: ಹಿರಿಯ ಕವಯಿತ್ರಿ ಡಾ.ಲತಾ ರಾಜಶೇಖರ್, ಡಾ.ಎಸ್.ಎಲ್.ಭೈರಪ್ಪನವರು ಭಾರತೀಯ ಸಾಹಿತ್ಯವಲಯದಲ್ಲಿ ಸಂಚಲನ ಸೃಷ್ಟಿಸಿದ್ದ ಸಾಹಿತಿ. ಅವರ ಕಾದಂಬರಿಗಳನ್ನು ಎಲ್ಲಾ ವರ್ಗದ ಜನರು ಇಷ್ಟಪಡುತ್ತಿದ್ದರು. ಕೆಲ ವಿಮರ್ಶಕರು ಅವರ ಕಾದಂಬರಿಗಳ ಕುರಿತು ಸ್ತ್ರೀ ವಿರೋಧಿ ಎಂಬ ಟೀಕೆ ಮಾಡುತ್ತಿದ್ದರೂ ಅವರ ಮಹಿಳಾ ಓದುಗರೇ ಹೆಚ್ಚು ಒಪ್ಪಿತ ಸತ್ಯ ಎಂದು ನುಡಿನಮನ ಸಲ್ಲಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಅಂತರರಾಷ್ಟ್ರೀಯ ಬೌದ್ಧ ಸಾಂಸ್ಕೃತಿಕ ಸಂಗಮದ 'ಬೌದ್ಧ ಮಹಾ ಸಮ್ಮೇಳನ'ಕ್ಕೆ ಬುದ್ಧ, ಡಾ.ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆಯೊಂದಿಗೆ ಮಯನ್ಮಾರ್‌ನ ಪೂಜ್ಯ ಪನಿಂದ ಸಯಡೋ ವಿದ್ಯುಕ್ತ ಚಾಲನೆ

ಸರ್ವರನ್ನು ಸಮನಾಗಿ ಕಾಣುವ ಪಂಚಶೀಲ ತತ್ವ ಒಳಗೊಂಡ ಬೌದ್ಧ ಧಮ್ಮ





ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ 'ಬೌದ್ಧ ಮಹಾ ಸಮ್ಮೇಳನಕ್ಕೆ ಮಂಗಳವಾರ ವಿದ್ಯುಕ್ತ ಚಾಲನೆ ದೊರೆಯಿತು. ಬಲಚಿತ್ರದಲ್ಲಿ ಸಮ್ಮೇಳನದಲ್ಲಿ ನೆರೆದಿದ್ದ ಜನಸ್ತೋಮವನ್ನು ಕಾಣಬಹುದು.

ಮೈಸೂರು, ಅ.14(ಎಂಕೆ)– 'ಬುದ್ಧಂ ಶರಣಂ ಗಚ್ಛಾಮಿ... ಸಂಘಂ ಶರಣಂ ಗಚ್ಛಾಮಿ... ಧಮ್ಮಂ ಶರಣಂ...' ಪ್ರಾರ್ಥನೆಯೊಂದಿಗೆ ಭಗವಾನ್ ಬುದ್ಧರಿಗೆ ಭಕ್ತಿಯಿಂದ ನಮಿಸುತ್ತಾ ಎರಡು ದಿನಗಳ ಅಂತರರಾಷ್ಟ್ರೀಯ ಬೌದ್ಧ ಸಾಂಸ್ಕೃತಿಕ ಸಂಗಮದ 'ಬೌದ್ಧ ಮಹಾ ಸಮ್ಮೇಳನ (ಮಾನವ ಮೈತ್ರಿಯ ಪಯಣ...)'ಕ್ಕೆ ವಿದ್ಯುಕ್ತ ಚಾಲನೆ ದೊರೆಯಿತು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ಭಿಕ್ಕು ಸಂಘ, ರಾಜ್ಯ ಬೌದ್ಧ ಸಂಘ–ಸಂಸ್ಥೆಗಳು ಹಾಗೂ ರಾಜ್ಯ ಅಂಬೇಡ್ಕರ್ ವಾದಿ ಸಂಘ–ಸಂಸ್ಥೆಗಳು ಮತ್ತು ವಿಶ್ವಮೈತ್ರಿ ಬುದ್ಧ ವಿಹಾರ ಸಂಯುಕ್ತಾಶ್ರದಲ್ಲಿ ಹಮ್ಮಿಕೊಂಡಿರುವ 'ಬೌದ್ಧ ಮಹಾ ಸಮ್ಮೇಳನ'ಕ್ಕೆ ದೇಶ–ವಿದೇಶಗಳಿಂದ ಆಗಮಿಸಿದ್ದ ಬೌದ್ಧ ಬಿಕ್ಕುಗಳು, ಹಿರಿಯ ಧಮ್ಮಚಾರಿಗಳು, ಉಪಾಸಕರು ಸಾಮೂಹಿಕವಾಗಿ ಭಗವಾನ್ ಬುದ್ಧ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಬುದ್ಧ ವಂದನೆ, ಧಮ್ಮ ವಂದನೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ಭಕ್ತಿಯಿಂದ ಆವೃತ್ತವಾಗಿದ್ದ ನಳಂದ ವೇದಿಕೆಯಲ್ಲಿ 'ಬುದ್ಧಂ ನಮಾಮಿ' ಪ್ರಾರ್ಥನೆಯೊಂದಿಗೆ ಏಕಕಾಲದಲ್ಲಿ ಸಾವಿರಾರು ಬುದ್ಧ ಅನುಯಾಯಿಗಳಿಗೆ ಧಮ್ಮ ಸ್ವೀಕಾರ ಬೋಧಿಸಿ, ಭಗವಾನ್ ಬುದ್ಧ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗಳಿಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಮಯನ್ಮಾರ್ ಸಾಸನ ವಿಪುಲಾಮ ಬುದ್ಧ ತರಬೇತಿ ಕೇಂದ್ರದ ಪೂಜ್ಯ ಪನಿಂದ ಸಯಡೋ ಬೌದ್ಧ ಮಹಾ ಸಮ್ಮೇಳನ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ನಾವೆಲ್ಲರೂ ಭಗವಾನ್ ಬುದ್ಧರು ತೋರಿದ ಜ್ಞಾನ ಮಾರ್ಗದಲ್ಲಿ ನಡೆಯಬೇಕು. ಧಮ್ಮವನ್ನು ಅನುಸರಿಸಬೇಕು. ಸಿದ್ಧಾರ್ಥರಿಗೆ ಬೋಧಿವೃಕ್ಷದ ಕೆಳಗೆ ಜ್ಞಾನೋದಯವಾದ ಬಳಿಕವೇ ಭಗವಾನ್ ಬುದ್ಧರಾಗಿದ್ದು. ಬುದ್ಧ ಜ್ಞಾನದ ಸಂಕೇತವಾಗಿದ್ದಾರೆ. ಬುದ್ಧ ಮತ್ತು ಧಮ್ಮ ಮಾರ್ಗದಲ್ಲಿ ನಡೆಯುವವರು ಜ್ಞಾನವನ್ನು ಹಿಂಬಾಲಿಸಬೇಕು. ಶಿಕ್ಷಣವಂತರಾಗಬೇಕು. ಅಜ್ಞಾನದಿಂದ ಸುಜ್ಞಾನದ ಬೆಳಕಿನತ್ತ ಸಾಗಬೇಕು ಎಂದು ಕರೆ ನೀಡಿದರು.

ನಾವಿಂದು ಸತ್ಯಕ್ಕಾಗಿ ಸೇರಿದ್ದೇವೆ...!

"ಬೌದ್ಧ ಮಹಾ ಸಮ್ಮೇಳನದಲ್ಲಿ ನಾವಿಂದು ಸತ್ಯಕ್ಕಾಗಿ ಸೇರಿದ್ದೇವೆ. ಹಿಂಸೆಯನ್ನು ತೊಲಗಿಸಿ, ಅಹಿಂಸಾ ಮಾರ್ಗದಲ್ಲಿ ಸಾಗಲು ಒಂದಾಗಿದ್ದೇವೆ. ಪ್ರೀತಿ ಮತ್ತು ಕರುಣೆ ನಮ್ಮೊಂದಿಗೆ ಇದ್ದರೆ, ನಮಗೆ ದುಃಖದಿಂದ ಸ್ವಾತಂತ್ರ್ಯ ಸಿಗಲಿದೆ. ಬುದ್ಧರ ಆದರ್ಶಗಳ ಅನುಸರಣೆಯಲ್ಲಿ ಶಾಂತಿ, ಸಹಬಾಳ್ವೆ ಅಡಗಿದೆ.

–ಪೂಜ್ಯ ರಾನ್ರಿಯನ್ ಪುಂಚಿ, ಧಮ್ಮಗುರು, ನಳಂದ ವಿವಿ ಬೈಲುಕುಪ್ಪೆ

ಸರ್ವರನ್ನೂ ಸಮಾನರನ್ನಾಗಿ ಕಾಣುವ, ಸರ್ವರನ್ನೂ ಸದಾಚಾರ ಸಂಪನ್ನರಾಗಿಸುವ ಪಂಚಶೀಲತತ್ವಗಳನ್ನು ಒಳಗೊಂಡ ಬೌದ್ಧ ಧಮ್ಮದ ಸಾರವನ್ನು ಪ್ರತಿಯೊಬ್ಬರೂ ಅರಿಯಬೇಕು. ಸಹಬಾಳ್ವೆ, ಸಂತೋಷದಿಂದ ಜೀವನ ನಡೆಸಬೇಕಾದರೆ ಜೀವನದಲ್ಲಿ ಬೌದ್ಧ ಧಮ್ಮ ತತ್ವಗಳನ್ನು ಪಾಲನೆ ಮಾಡಬೇಕು ಎಂದು ತಿಳಿಸಿದರು.

ಸಮ್ಮೇಳನದ ಧಮ್ಮ ಸಾನಿಧ್ಯ ವಹಿಸಿದ್ದ ಲಾವೋಸ್ ಬುದ್ಧ ವಿಹಾರದ ಪೂಜ್ಯ ರಾಂಡಿಸೋಟ್ ಮಾತನಾಡಿ, ಬುದ್ಧ ಎಂದರೆ ಸತ್ಯ. ಸತ್ಯದ ದಾರಿಯಲ್ಲಿ ನಾವೆಲ್ಲರೂ ಸಾಗಬೇಕು. ಮನಸ್ಸಿನಲ್ಲಿ ಯಾವುದನ್ನು ಮುಚ್ಚಿಡದೆ ಸತ್ಯವಂತರಾಗಿ ಬದುಕಬೇಕು. ಜ್ಞಾನವನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ ನಮ್ಮ ಜೊತೆಗೆ ಇರುವವರಿಗೂ ಜ್ಞಾನವನ್ನು ಹಂಚಬೇಕು. ಧಮ್ಮ ಮಾರ್ಗದಲ್ಲಿ ಹೊಂದಾಣಿಕೆಯಿಂದ ಮುನ್ನಡೆಯಬೇಕು ಎಂದು ತಿಳಿಸಿದರು.

ಧಮ್ಮ ಧ್ವಜಾರೋಹಣ ನೆರವೇರಿಸಿದ ವಿಯಟ್ನಾಂ ಗೋಕ್‌ಹೋನ್ ಬುದ್ಧ ವಿಹಾರದ ಪೂಜ್ಯ ತಿಚ್‌ಮಿನ್ ಹಾನ್ ಮಾತನಾಡಿ, ಜೀವನ ಉತ್ತಮವಾಗಿರಬೇಕಾದರೆ ಆಧ್ಯಾತ್ಮ ದಾರಿಯಲ್ಲಿ ಸಾಗಬೇಕು. ಪಂಚಶೀಲ ತತ್ವಗಳ ಪಾಲನೆ ಜೊತೆಗೆ ಉಲ್ಲಾಸ ಭರಿತ ಜೀವನ ಶೈಲಿ ರೂಢಿಸಿಕೊಳ್ಳಬೇಕು. ಎಲ್ಲರನ್ನು ಪ್ರೀತಿ, ಕರುಣೆ, ವಿಶ್ವಾಸದಿಂದ ಕಾಣಬೇಕು ಎಂದರು.

ಪ್ರಜ್ಞೆಯೆಡೆಗೆ ಸಾಗಬೇಕು: ಅರುಣಾಚಲ ಪ್ರದೇಶ ಬುದ್ಧ ವಿಹಾರದ ಪೂಜ್ಯ ವಿಸುದ್ದಶೀಲ ಭಂತೇಜಿ ಮಾತನಾಡಿ, ಬುದ್ಧನ ಸಂದೇಶಗಳನ್ನು ಪಾಲನೆಯೊಂದಿಗೆ ನಾವೆಲ್ಲರೂ ಪ್ರಜ್ಞೆಯೆಡೆಗೆ ಸಾಗಬೇಕು. ಈ ನಿಟ್ಟಿನಲ್ಲಿ ಭಗವಾನ್ ಬುದ್ಧ ಮತ್ತು ಅಂಬೇಡ್ಕರ್ ತತ್ವಗಳನ್ನು ಅನುಸರಿಸಬೇಕೆಂದು ತಿಳಿಸಿದರೆ, ಕಲಬುರಗಿ ಬುದ್ಧ ವಿಹಾರದ ಪೂಜ್ಯ ವರಜ್ಯೋತಿ ಭಂತೇಜಿ ಮಾತನಾಡಿ, ಸಂಸ್ಕಾರವಿಲ್ಲದ ಶಿಕ್ಷಣ, ಹಣ್ಣು ಕೊಡದ ಮರವಿದ್ದಂತೆ. ದೇಶದಲ್ಲಿ ಶಾಂತಿ ನೆಲೆಸುವಂತೆ ಮಾಡಲು ಬುದ್ಧ–ಧಮ್ಮದ ಅನುಸರಣೆ ಅಗತ್ಯವಾಗಿದೆ ಎಂದರು.

ಗಾಂಧಿನಗರ ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಬೌದ್ಧ ಮಹಾಸಮ್ಮೇಳನದ ಗೌರವಾಧ್ಯಕ್ಷತೆ ವಹಿಸಿದ್ದರೆ, ಮಾಜಿ ಮೇಯರ್ ಪುರುಷೋತ್ತಮ್ ಸರ್ವಾಧ್ಯಕ್ಷತೆ ವಹಿಸಿದ್ದರು. ಕೊಳ್ಳೇಗಾಲ ಜೇತವನ ಬುದ್ಧ ವಿಹಾರದ ಪೂಜ್ಯ ಮನೋರಕ್ಖಿತ ಭಂತೇಜಿ, ಅಸ್ಸಾಂ ಬುದ್ಧವಿಹಾರದ ಪೂಜ್ಯ ಭಿಕ್ಕು ಸೋಬಾನ ಭಂಜೇಜಿ, ತ್ರಿಪುರ ಬುದ್ಧ ವಿಹಾರದ ಪೂಜ್ಯ ಭಿಕ್ಕು ಪನ್ಯಾಬೋಧಿ ಭಂತೇಜಿ, ಟಿ.ನರಸೀಪುರ ಕೊಳತೂರು ಬುದ್ಧ ವಿಹಾರದ ಪೂಜ್ಯ ಸುಗತಪಾಲ ಭಂತೇಜಿ, ಟಿ.ನರಸೀಪುರ ನಳಂದ ಬುದ್ಧವಿಹಾರದ ಪೂಜ್ಯ ಬೋಧಿರತ್ನ ಭಂತೇಜಿ, ಅಂತರಸಂತೆ ಸಾರನಾಥ ಬುದ್ಧ ವಿಹಾರದ ಪೂಜ್ಯ ಮಾತೆ ಗೌತಮಿ ಭಂತೇಜಿ, ಗುಲ್ಬರ್ಗಾ ಭೂಮಿ ಬುದ್ಧ ವಿಹಾರದ ಪೂಜ್ಯ ಅಮರಜ್ಯೋತಿ ಭಂತೇಜಿ, ಕೊಳ್ಳೇಗಾಲ ಬುದ್ಧ ವಿಹಾರದ ಪೂಜ್ಯ ಧಮ್ಮತಿಸ್ಸಾ ಭಂತೇಜಿ, ಪೂಜ್ಯ ಬೋಧಿಪ್ರಿಯ ಭಂತೇಜಿ, ಕಾಮಗೆರೆ ಬುದ್ಧ ವಿಹಾರದ ಪೂಜ್ಯ ಧಮ್ಮಪಾಲ ಭಂತೇಜಿ, ಮಂಡ್ಯ ಬುದ್ಧ ವಿಹಾರದ ಪೂಜ್ಯ ಧಮ್ಮವೀರ ಭಂತೇಜಿ, ತುಮಕೂರು ಬುದ್ಧ ವಿಹಾರದ ಪೂಜ್ಯ ಜ್ಞಾನಾನಂದ ಭಂತೇಜಿ ಸೇರಿದಂತೆ ವಿವಿಧ ಬುದ್ಧ ವಿಹಾರಗಳ ಭಿಕ್ಕುಗಳು, ಧಮ್ಮಚಾರಿಗಳು ಹಾಗೂ ಉಪಾಸಕರು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಭಕ್ತಿ–ಭಾವದೊಂದಿಗೆ ಸಾಗಿದ ಧಮ್ಮ ಪಯಣ...



ಮೈಸೂರಲ್ಲಿ ಮಂಗಳವಾರ ವಿವಿಧ ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಧಮ್ಮ ಪಯಣ ಮೆರವಣಿಗೆ ವೈಭವದಿಂದ ನಡೆಯಿತು.

'ಬೌದ್ಧ ಮಹಾ ಸಮ್ಮೇಳನ'ದ ಅಂಗವಾಗಿ ಬುದ್ಧ ನಡಿಗೆ... ಒಂದು ಸಾರ್ಥಕ ನಡಿಗೆ... ಧ್ಯೇಯ ವಾಕ್ಯದೊಂದಿಗೆ 'ಧಮ್ಮ ಪಯಣ'... ಸಾಂಸ್ಕೃತಿಕ ಮೆರವಣಿಗೆ ಭಕ್ತಿ–ಭಾವದಿಂದ ನೆರವೇರಿತು.

ಟೌನ್ ಹಾಲ್ ಎದುರಿನ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಕೊಳ್ಳೇಗಾಲ ಜೇತವನ ಬುದ್ಧ ವಿಹಾರದ ಪೂಜ್ಯ ಮನೋರಕ್ಖಿತ ಭಂತೇಜಿ 'ಧಮ್ಮ ಪಯಣ' ಮೆರವಣಿಗೆಗೆ ಚಾಲನೆ ನೀಡಿದರು.

ಭಗವಾನ್ ಬುದ್ಧರ ಪ್ರತಿಮೆ ಅಲಂಕೃತ ಬೆಳ್ಳಿರಥದೊಂದಿಗೆ ಡೊಳ್ಳು ಕುಣಿತ, ಗೊರವರ ಕುಣಿತ, ಕಂಸಾಳೆ, ನಗಾರಿ, ಚಿಲಿಪಿಲಿ ಗೊಂಬೆ ಸೇರಿದಂತೆ ಹತ್ತಾರು ಸಾಂಸ್ಕೃತಿಕ ಕಲಾತಂಡಗಳು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದವು. ಬೌದ್ಧ ಮಹಾ ಸಮ್ಮೇಳನದ ಗೌರವಾಧ್ಯಕ್ಷರಾದ ಗಾಂಧಿನಗರ ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಜೊತೆಗೆ ಧಮ್ಮ ಧ್ವಜವನ್ನು ಹಿಡಿದ ಸಮ್ಮೇಳನದ ಸರ್ವಾಧ್ಯಕ್ಷರೂ ಆದ ಮಾಜಿ ಮೇಯರ್ ಪುರುಷೋತ್ತಮ್ ನೇತೃತ್ವದಲ್ಲಿ ದೇಶ–ವಿದೇಶಗಳಿಂದ ಆಗಮಿಸಿದ್ದ ಭಂತೇಜಿಗಳು, ಮಾಜಿ ಶಾಸಕ ಎನ್.ಮಹೇಶ್, ಅಕ್ಕ ಐಎಎಸ್ ಅಕಾಡೆಮಿಯ ಡಾ.ಶಿವಕುಮಾರ್ ಸೇರಿದಂತೆ ವಿವಿಧ ದಲಿತ ಸಂಘಟನೆಗಳ ಮುಖಂಡರು ಹಾಗೂ ಸಾವಿರಾರು ಮಂದಿ ಬುದ್ಧ ಅನುಯಾಯಿಗಳು ಮೆರವಣಿಗೆಯಲ್ಲಿ ಸಾಗಿದರು.

ಮಕ್ಕಳ ಕೈಯಲ್ಲಿ ಪೆನ್ನು ಕೊಡುವುದು ನಮ್ಮ ಸಂಸ್ಕೃತಿ...!

"ಮಕ್ಕಳ ಕೈಯಲ್ಲಿ ದೊಣ್ಣೆ ಕೊಡುವುದು ನಮ್ಮ ಸಂಸ್ಕೃತಿಯಲ್ಲ. ಬದಲಿಗೆ ಪೆನ್ನು ಕೊಡುವುದು ನಮ್ಮ ಸಂಸ್ಕೃತಿ. ಮಕ್ಕಳಲ್ಲಿ ಶಾಂತಿ, ಸಮಾನತೆ, ಸಹೋದರತೆ ಭಾವವನ್ನು ಬೆಳೆಸಬೇಕು. ಅದಕ್ಕಾಗಿಯೇ ಬಾಬಾ ಸಾಹೇಬರು ಬೌದ್ಧ ಧಮ್ಮ ಸ್ವೀಕಾರ ಮಾಡಿದ್ದು. ಭಗವಾನ್ ಬುದ್ಧರ ಅನಿವಾರ್ಯತೆ ದೇಶದ ಪ್ರತಿಯೊಂದು ಮನೆಗೂ ಇದೆ. ಬುದ್ಧ ಜ್ಞಾನದ ಸಂಕೇತ.


–ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಗೌರವಾಧ್ಯಕ್ಷರು, ಬೌದ್ಧ ಮಹಾ ಸಮ್ಮೇಳನ

"ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಭಗವಾನ್ ಬುದ್ಧರ ಸಾವಿರಾರು ಅನುಯಾಯಿಗಳು ಧಮ್ಮ ದೀಕ್ಷೆ ಪಡೆದಿದ್ದಾರೆ. ಬುದ್ಧರ ಮಾರ್ಗವೆಂದರೆ ಅದು ಜ್ಞಾನದ ಮಾರ್ಗ. ಬೌದ್ಧ ಧಮ್ಮ ಪ್ರೀತಿ, ಕರುಣೆ ಮತ್ತು ಸಹಬಾಳ್ವೆಯ ಸಂಕೇತವಾಗಿದೆ. ಬೌದ್ಧ ಮಹಾ ಸಮ್ಮೇಳನಕ್ಕೆ ದೇಶ–ವಿದೇಶಗಳಿಂದ ಪೂಜ್ಯ ಭಂತೇಜಿಗಳ ಆಗಮಿಸಿ, ಆಶೀರ್ವದಿಸಿದ್ದಾರೆ.

–ಪುರುಷೋತ್ತಮ್, ಸರ್ವಾಧ್ಯಕ್ಷರು, ಬೌದ್ಧ ಮಹಾ ಸಮ್ಮೇಳನ

ಶಾಂತಿಯುತ ಜೀವನಕ್ಕೆ ಪಂಚಶೀಲ ತತ್ವ ಪಾಲನೆ

ಕೊಳ್ಳೇಗಾಲ ಜೇತವನ ಬುದ್ಧ ವಿಹಾರದ ಪೂಜ್ಯ ಮನೋರಕ್ಖಿತ ಭಂತೇಜಿ ಕಿವಿಮಾತು



ಕೊಳ್ಳೇಗಾಲ ಜೇತವನ ಬುದ್ಧ ವಿಹಾರದ ಪೂಜ್ಯ ಮನೋರಕ್ಖಿತ ಭಂತೇಜಿ, ಭಗವಾನ್ ಬುದ್ಧರ ಪಂಚಶೀಲ ತತ್ವ ಬೋಧಿಸಿದರು.

ಮೈಸೂರು, ಅ.14(ಎಂಕೆ)– ಜ್ಞಾನಗೆಟ್ಟಂತೆ ಬದುಕುವುದಲ್ಲ. ಜ್ಞಾನದ ಜೊತೆಗೆ ಎಚ್ಚರಿಕೆಯಿಂದ ಬದುಕಬೇಕು. ಸುಖ–ಶಾಂತಿ–ನೆಮ್ಮದಿ ಬದುಕಿಗಾಗಿ ಪಂಚಶೀಲ ತತ್ವಗಳನ್ನು ಪಾಲಿಸಬೇಕು ಎಂದು ಕೊಳ್ಳೇಗಾಲ ಜೇತವನ ಬುದ್ಧ ವಿಹಾರದ ಪೂಜ್ಯ ಮನೋರಕ್ಖಿತ ಭಂತೇಜಿ ಕಿವಿಮಾತು ಹೇಳಿದರು.

ಬೌದ್ಧ ಮಹಾ ಸಮ್ಮೇಳನದಲ್ಲಿ ಭಗವಾನ್ ಬುದ್ಧರ ಪಂಚಶೀಲ ತತ್ವಗಳನ್ನು ಬೋಧಿಸಿದ ಅವರು, ಬುದ್ಧರ 9 ಗುಣಗಳು, ಧಮ್ಮದ 6 ಗುಣಗಳು, ಸಂಘದ 6 ಗುಣಗಳು ಹಾಗೂ ತ್ರಿರತ್ನಗಳು ಸೇರಿದ ಬೌದ್ಧ ಧಮ್ಮದ 24 ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಬುದ್ಧ, ಧಮ್ಮ ಮತ್ತು ಸಂಘಕ್ಕೆ ಶರಣಾಗಬೇಕು ಎಂದರು.

ಸುಖ, ಶಾಂತಿ ಮತ್ತು ನೆಮ್ಮದಿಯ ಬದುಕಿಗಾಗಿ ಬುದ್ಧರ ಪಂಚಶೀಲ ತತ್ವಗಳನ್ನು ಪಾಲಿಸಬೇಕು. ಪ್ರಾಣಿಹತ್ಯೆ ಮಾಡಬಾರದು, ಕಳ್ಳತನ ಮಾಡಬಾರದು, ಸುಳ್ಳು ಹೇಳಬಾರದು, ದುಶ್ಚಟಗಳಿಂದ ದೂರವಿರಬೇಕು. ಜ್ಞಾನಗೆಟ್ಟಂತೆ ಬದುಕುವುದಲ್ಲ. ಜ್ಞಾನದ ಜೊತೆಗೆ ಎಚ್ಚರಿಕೆಯಿಂದ ಬದುಕಬೇಕು. ದುಃಖ ಮತ್ತು ಅಶಾಂತಿಯಿಂದ ಕೂಡಿರುವ ಮನೆಯಲ್ಲಿ ಸುಖ, ಶಾಂತಿ ನೆಲೆಸಿರಬೇಕು. ಪತಿ–ಪತ್ನಿಯರು ಪರಸ್ಪರ ಗೌರವದಿಂದ ವಿಶ್ವಾಸಯುತವಾಗಿ ಜೀವನ ನಡೆಸಬೇಕು ಎಂದು ಸಲಹೆ ನೀಡಿದರು.

ಬಾಬಾ ಸಾಹೇಬರ ಪ್ರಬುದ್ಧ ಭಾರತ ನಿರ್ಮಾಣವಾಗಲಿ

ಸಾಹಿತಿ ಹನಸೋಗೆ ಸೋಮಶೇಖರ್ ಅಭಿಮತ



ಬೌದ್ಧ ಮಹಾ ಸಮ್ಮೇಳನದ ಕವಿಗೋಷ್ಠಿಯನ್ನು ಸಾಹಿತಿ ಹನಸೋಗೆ ಸೋಮಶೇಖರ್ ಉದ್ಘಾಟಿಸಿದರು.

ಮೈಸೂರು, ಅ.14(ಎಂಕೆ)– ಬಾಬಾ ಸಾಹೇಬರ ಪ್ರಬುದ್ಧ ಭಾರತ ನಿರ್ಮಾಣದ ಕನಸನ್ನು ನನಸು ಮಾಡುವುದೇ ನಮ್ಮ ಏಕೈಕ ಗುರಿಯಾಗಿದೆ ಎಂದು ಸಾಹಿತಿ ಹನಸೋಗೆ ಸೋಮಶೇಖರ್ ಹೇಳಿದರು.

ಬೌದ್ಧ ಮಹಾ ಸಮ್ಮೇಳನದ ಸಾಮ್ರಾಟ್ ಅಶೋಕ ವೇದಿಕೆಯಲ್ಲಿ ಆಯೋಜಿಸಿದ್ದ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು, ನನ್ನ ಜನರು ಅಂದರೆ ದೇಶದ ಮೂಲ ನಿವಾಸಿಗಳಾದ ನಾವು ದೇಶದ ಆಳ್ವಿಕೆ ನಡೆಸಬೇಕು ಎಂಬುದು ಬಾಬಾ ಸಾಹೇಬರ ಕನಸಾಗಿತ್ತು. ಈ ನಿಟ್ಟಿನಲ್ಲಿ ನಾವೆಲ್ಲರೂ ಒಂದಾಗಿ ಸಾಗಬೇಕಿದೆ ಎಂದರು.

ಭಾರತ ಬುದ್ಧರ ನಾಡು. ಬೌದ್ಧ ಧಮ್ಮ ಇವತ್ತು ಜಗತ್ತನ್ನೇ ಆವರಿಸಿದೆ. ದೇಶದ ಮೂಲ ನಿವಾಸಿಗಳು ಮೂಲೆಗೆ ಸೇರಿಕೊಂಡಿದ್ದಾರೆ. ಹಾಗಾಗಿ ನಮ್ಮ ಹಕ್ಕುಗಳನ್ನು ಪಡೆದುಕೊಳ್ಳಬೇಕು. ಜೊತೆಗೆ ಬಾಬಾ ಸಾಹೇಬರ ಪ್ರಬುದ್ಧ ಭಾರತ ನಿರ್ಮಾಣ ಕನಸನ್ನು ನನಸು ಮಾಡುವುದೇ ನಮ್ಮ ಏಕೈಕ ಗುರಿಯಾಗಿದೆ ಎಂದರು.

ಕವಿ ಕೃಷ್ಣಮೂರ್ತಿ ಚಮರಂ ಕವಿಗೋಷ್ಠಿಯ ಆಶಯ ನುಡಿಗಳನ್ನಾಡಿದರು. ಬಳಿಕ 25ಕ್ಕೂ ಹೆಚ್ಚು ಕವಿಗಳು ಕವನ ವಾಚಿಸುವ ಮೂಲಕ ಬುದ್ಧ ಮತ್ತು ಧಮ್ಮದ ಸಂದೇಶ ಸಾರಿದರು. ದಸಂಸ ಮುಖಂಡ ವೆಂಕಟರಮಣಸ್ವಾಮಿ ಕವಿಗೋಷ್ಠಿ ಅಧ್ಯಕ್ಷತೆ ವಹಿಸಿದ್ದರು. ಕವಿಗಳಾದ ಗೋವಿಂದಸ್ವಾಮಿ ಗುಂಡಾಪುರ, ಸಿದ್ದಸ್ವಾಮಿ, ಸೋಸಲೆ ಗಂಗಾಧರ್, ಡಾ.ವಿಜಯಲಕ್ಷ್ಮಿ ಮಾನಾಪುರ ಮತ್ತಿತರರು ಉಪಸ್ಥಿತರಿದ್ದರು.

ಮಳೆಯಿಂದ ಬೆಳೆ ನಷ್ಟ: ಎಕರೆಗೆ 20 ಸಾವಿರ ಪರಿಹಾರಕ್ಕೆ ಎಎಪಿ ಆಗ್ರಹ



ಎಲ್.ರಂಗಯ್ಯ

ಮೈಸೂರು,ಅ.14(ಜಿಎ)–ರಾಜ್ಯದಲ್ಲಿ ಭಾರೀ ಮಳೆಯಿಂದ ಬೆಳೆಗಳಿಗೆ ನಷ್ಟ ಉಂಟಾಗಿದ್ದು, ಪಂಜಾಬ್ ರಾಜ್ಯ ಸರ್ಕಾರದ ಮಾದರಿಯಲ್ಲಿ ಪ್ರತಿ ಎಕರೆಗೆ 20 ಸಾವಿರ ರೂ. ಪರಿಹಾರ ಘೋಷಿಸುವಂತೆ ಆಮ್ ಆದ್ಮಿ ಪಕ್ಷದ (ಎಎಪಿ) ಜಿಲ್ಲಾ ಅಧ್ಯಕ್ಷ ಎಲ್.ರಂಗಯ್ಯ ಆಗ್ರಹಿಸಿದ್ದಾರೆ.

ಜಿಲ್ಲೆಯಲ್ಲಿ 2 ದಿನ ಸುರಿದ ಧಾರಾಕಾರ ಮಳೆ ಕಾರಣ ಸಾವಿರಾರು ಎಕರೆ ಬೆಳೆ ನೀರು ಪಾಲಾಗಿದೆ. ಇದರಿಂದ ರೈತರು ಸಂಕಷ್ಟಕ್ಕೊಳಗಾಗಿದ್ದಾರೆ. ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಗೆ ಬಂದಿದ್ದಾರೆ. ಇವರ ಬೆನ್ನಿಗೆ ಸರ್ಕಾರ ನಿಲ್ಲಬೇಕಿದೆ. ಈ ನಿಟ್ಟಿನಲ್ಲಿ ಶೀಘ್ರ ಜಂಟಿ ಸರ್ವೆ ನಡೆಸಿ ವೈಜ್ಞಾನಿಕವಾಗಿ ಬೆಳೆ ಪರಿಹಾರ ನೀಡಬೇಕು. ವಿಳಂಬ ಮಾಡದೆ ಈ ಕೂಡಲೇ ಈ ಸಂಬಂಧ ಕಾರ್ಯ ಪ್ರವೃತ್ತರಾಗಬೇಕು. ಮುಖ್ಯಮಂತ್ರಿ ಹಾಗೂ ಕೃಷಿ ಸಚಿವರು ಈ ನಿಟ್ಟಿನಲ್ಲಿ ಕ್ರಮ ವಹಿಸಬೇಕು ಎಂದು ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ. ಪಂಜಾಬ್ ರಾಜ್ಯದಲ್ಲಿ ಆಮ್ ಆದ್ಮಿ ಪಕ್ಷದ ಸರ್ಕಾರವಿದ್ದು, ಸಿಎಂ ಭಗವಂತ್‌ಮಾನ್ ಅವರು ಅತಿವೃಷ್ಟಿಯಿಂದ ಬೆಳೆ ನಷ್ಟ ಉಂಟಾದ ಪ್ರತಿ ಎಕರೆಗೆ 20 ಸಾವಿರ ಸಹಾಯಧನ ಘೋಷಿಸಿದ್ದಾರೆ. ಕ್ಷಿಪ್ರಗತಿಯಲ್ಲಿ ಸ್ಪಂದಿಸಿ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಿದ್ದಾರೆ. ಇದೇ ಮಾದರಿಯನ್ನು ರಾಜ್ಯದಲ್ಲೂ ಅನುಸರಿಸಿ ರೈತರ ಪರ ನಿಲ್ಲಬೇಕು ಎಂದು ಒತ್ತಾಯಿಸಿದ್ದಾರೆ.

ಐಪಿಸಿ ಅಧಿಕಾರಿ ಅಲೋಕ್‌ಕುಮಾರ್ ವಿರುದ್ಧದ ಇಲಾಖಾ ತನಿಖೆ ರದ್ದು



ಬೆಂಗಳೂರು, ಅ.14– ಕರ್ನಾಟಕದ ಹಿರಿಯ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ವಿರುದ್ಧದ ಫೋನ್ ಕದ್ದಾಲಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಆದೇಶಿಸಿದ್ದ ಇಲಾಖಾ ತನಿಖೆಯನ್ನು ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ ರದ್ದುಗೊಳಿಸಿದೆ.

ಕರ್ನಾಟಕದ ಐಪಿಎಸ್ ಹಿರಿಯ ಅಧಿಕಾರಿ, ಎಡಿಜಿಪಿ ಅಲೋಕ್ ಕುಮಾರ್ ಅವರಿಗೆ ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ ಬಿಗ್ ರಿಲೀಫ್ ನೀಡಿದ್ದು, ಅಲೋಕ್ ಕುಮಾರ್ ವಿರುದ್ಧದ ಫೋನ್ ಟ್ಯಾಪಿಂಗ್ ಪ್ರಕರಣದ ಇಲಾಖಾ ತನಿಖೆ ರದ್ದು ಮಾಡಿದೆ. ಮಾತ್ರವಲ್ಲದೇ ಅಲ್ಲದೇ ತಡೆಹಿಡಿಯಲಾಗಿದ್ದ ಅವರ ಬಡ್ತಿ ಮತ್ತು ಇತರ ಸೌಲಭ್ಯಗಳನ್ನು ನೀಡುವಂತೆ ಆದೇಶಿಸಿದೆ.

ಹೀಗಾಗಿ ಈ ಪ್ರಕರಣದ ಕಾನೂನು ಹೋರಾಟದಲ್ಲಿ ಅಲೋಕ್ ಕುಮಾರ್ ಗೆದ್ದು ಬೀಗಿದ್ದು, ರಾಜ್ಯ ಸರ್ಕಾರಕ್ಕೆ ಮುಖಭಂಗವಾದಂತಾಗಿದೆ. ಸರ್ಕಾರದ ಇಲಾಖಾವಾರು ತನಿಖೆಗೆ ಆದೇಶ ನೀಡಿದ ರಾಜ್ಯ ಸರ್ಕಾರದ ಆದೇಶ ಪ್ರಶ್ನಿಸಿ ಅಲೋಕ್ ಕುಮಾರ್ ಸಿಎಟಿ ಮೊರೆ ಹೋಗಿದ್ದರು.

ಬಳಿಕ ವಿಚಾರಣೆ ನಡೆದು ಇಬ್ಬರು ನ್ಯಾಯಮೂರ್ತಿಗಳ ನಡುವೆ ವಿಭಿನ್ನ ತೀರ್ಪು ಹಿನ್ನೆಲೆಯಲ್ಲಿ ಸಿಎಟಿ ಮುಖ್ಯಸ್ಥ ನ್ಯಾಯಮೂರ್ತಿ ರಣ್‌ಜೀತ್ ಬಳಿ ಹೋಗಿದ್ದು, ಎರಡೂ ಕಡೆಯ ವಾದ ಪ್ರತಿವಾದ ಆಲಿಸಿ ಇಂದು (ಅಕ್ಟೋಬರ್ 14) ಈ ಮಹತ್ವದ ತೀರ್ಪು ನೀಡಿದ್ದಾರೆ.

ಏನಿದು ಪ್ರಕರಣ: 2019ರಲ್ಲಿ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ಆಡಳಿತದಲ್ಲಿದ್ದಾಗ ಫೋನ್ ಟ್ಯಾಪಿಂಗ್ ಹಗರಣವು ಭಾರೀ ಸದ್ದು ಮಾಡಿತ್ತು. ಈ ಪ್ರಕರಣದಲ್ಲಿ ಅಂದಿನ ಗೃಹ ಇಲಾಖೆಯ ಕೆಲವು ಅಧಿಕಾರಿಗಳ ಪಾತ್ರದ ಕುರಿತು ತನಿಖೆ ನಡೆದಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ, ಅಲೋಕ್ ಕುಮಾರ್ ಸೇರಿದಂತೆ ಕೆಲವು ಅಧಿಕಾರಿಗಳ ವಿರುದ್ಧ ಇಲಾಖಾ ತನಿಖೆಗೆ ರಾಜ್ಯ ಸರ್ಕಾರ ಆದೇಶಿಸಿತ್ತು. ಸರ್ಕಾರದ ಈ ಆದೇಶವನ್ನು ಪ್ರಶ್ನಿಸಿ ಅಲೋಕ್ ಕುಮಾರ್ ಅವರು ಸಿಎಟಿ ಮೊರೆ ಹೋಗಿದ್ದರು.

ಬಿಹಾರ ಚುನಾವಣೆ–2025: ಬಿಜೆಪಿಯ 71 ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ

ಪಾಟ್ನಾ: ನವೆಂಬರ್ 6 ಮತ್ತು ನವೆಂಬರ್ 11ರಂದು ನಡೆಯಲಿರುವ ಬಿಹಾರ ವಿಧಾನಸಭಾ ಚುನಾವಣೆಗೆ ಭಾರತೀಯ ಜನತಾ ಪಕ್ಷ(ಬಿಜೆಪಿ) ಮಂಗಳವಾರ 71 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಈ ಪಟ್ಟಿಯನ್ನು ಬಿಜೆಪಿ ಕೇಂದ್ರ ಚುನಾವಣಾ ಸಮಿತಿ ಬಿಡುಗಡೆ ಮಾಡಿದೆ.

ಎನ್‌ಡಿಎ ಬಣದ ಬಿಜೆಪಿ ಎರಡು ಹಂತದ ಚುನಾವಣೆಗೆ ತನ್ನ ಅಭ್ಯರ್ಥಿಗಳನ್ನು ಘೋಷಿಸಿದ ಮೊದಲ ಪಕ್ಷವಾಗಿದೆ.

ಉಪಮುಖ್ಯಮಂತ್ರಿಗಳಾದ ಸಾಮ್ರಾಟ್ ಚೌಧರಿ ಮತ್ತು ವಿಜಯ್‌ಕುಮಾರ್ ಸಿನ್ಹಾ ಸೇರಿದಂತೆ ಹಲವಾರು ಪ್ರಮುಖ ನಾಯಕರು ಈ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಚೌಧರಿ ಅವರನ್ನು ಮುಂಗೇರ್‌ನ ತಾರಾಪುರದಿಂದ ಕಣಕ್ಕಿಳಿಸಲಾಗಿದ್ದರೆ, ಸಿನ್ಹಾ ಅವರನ್ನು ಲಖಿಸರಾಯ್ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ. ಜೆಡಿಯುನ ರಾಜೀವ್‌ಕುಮಾರ್ ಸಿಂಗ್ 2021ರಲ್ಲಿ ನಡೆದ ಉಪಚುನಾವಣೆಯಲ್ಲಿ ತಾರಾಪುರ ಕ್ಷೇತ್ರವನ್ನು ಗೆದ್ದಿದ್ದರು. 71 ಅಭ್ಯರ್ಥಿಗಳಲ್ಲಿ 9 ಮಹಿಳೆಯರಿದ್ದು, ಬಿಹಾರ ವಿಧಾನಸಭಾ ಸ್ಪೀಕರ್ ನಂದಕಿಶೋರ್ ಯಾದವ್ ಅವರ ಹೆಸರು ಪಟ್ಟಿಯಲ್ಲಿ ಇಲ್ಲ. ಯಾದವ್ ಅವರ ಬದಲಿಗೆ ಪಾಟ್ನಾ ಸಾಹೇಬ್‌ನ ಹೊಸ ಅಭ್ಯರ್ಥಿ ರತ್ನೇಶ್ ಕುಶ್ವಾಹ ಅವರನ್ನು ಕಣಕ್ಕಿಳಿಸಲಾಗಿದೆ.

ವಿಧಾನ ಪರಿಷತ್ ಸದಸ್ಯರಾಗಿರುವ ಆರೋಗ್ಯ ಸಚಿವ ಮಂಗಲ್ ಪಾಂಡೆ ಅವರನ್ನು ಸಹ ಕಣಕ್ಕಿಳಿಸಲಾಗಿದೆ. ಅವರು ತಮ್ಮ ಸ್ಥಳೀಯ ಜಿಲ್ಲೆಯಾದ ಸಿವಾನ್ ವಿಧಾನಸಭಾ ಕ್ಷೇತ್ರದಿಂದ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ.

ಮೈಸೂರು ಮಿತ್ರ ಬುಧವಾರ 15 ಅಕ್ಟೋಬರ್ 2025

ರವೀಂದ್ರ ಶ್ರೀಕಂಠಯ್ಯ ಹುಟ್ಟುಹಬ್ಬ ಆಚರಣೆ





ತಾಲೂಕಿನ ಪರಮಾಂಡನಹಳ್ಳಿ ಗ್ರಾಮದ ರವೀಂದ್ರ ಶ್ರೀಕಂಠಯ್ಯ ಅವರ ತೋಟದಲ್ಲಿ ಅಭಿಮಾನಿಗಳು, ಹಿತೈಷಿಗಳು ಹುಟ್ಟು ಹಬ್ಬವನ್ನು ಆಚರಿಸಿದರು. ಇನ್ನೊಂದು ಚಿತ್ರದಲ್ಲಿ ತಮ್ಮ ತಾಯಿ ಮಾಜಿ ಶಾಸಕಿ ಪಾರ್ವತಮ್ಮ ಶ್ರೀಕಂಠಯ್ಯ ಅವರನ್ನು ಗೌರವಿಸಿದರು. ಈ ವೇಳೆ ಅವರ ಪತ್ನಿ ಗೀತಾ ರವೀಂದ್ರ ಸೇರಿದಂತೆ ಅನೇಕ ಕಾರ್ಯಕರ್ತರು ಜೊತೆಯಲ್ಲಿದ್ದರು.

ಶ್ರೀರಂಗಪಟ್ಟಣ, ಅ.14–ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರ ಹುಟ್ಟು ಹಬ್ಬವನ್ನು ಅವರ ಅಭಿಮಾನಿಗಳು, ಹಿತೈಷಿ ಗಳು, ಬೆಂಬಲಿಗರು ಹಾಗೂ ಕಾರ್ಯ ಕರ್ತರು ಕೇಕ್ ಕತ್ತರಿಸುವ ಮೂಲಕ ಆಚರಿಸಿದರು.

ತಾಲೂಕಿನ ಪರಮಾಂಡನಹಳ್ಳಿ ಗ್ರಾಮ ದಲ್ಲಿನ ಅವರ ತೋಟದಲ್ಲಿ ಸಹಸ್ರಾರು ಅಭಿಮಾನಿಗಳು, ಹಿತೈಷಿಗಳು ಬೃಹತ್ ಗಾತ್ರದ ಹಾರ ಹಾಕಿ ಹಾಗೂ ಕೇಕ್ ಕತ್ತರಿಸಿ ಹುಟ್ಟು ಹಬ್ಬವನ್ನು ಆಚರಿಸಿದರು.

ಈ ವೇಳೆ ಮಾಜಿ ಶಾಸಕಿ ಪಾರ್ವತಮ್ಮ ಶ್ರೀಕಂಠಯ್ಯ, ರವೀಂದ್ರ ಅವರ ಪತ್ನಿ ಗೀತಾ ರವೀಂದ್ರ, ಪುತ್ರ ದೇವನಾಂಪ್ರಿಯ ಜೊತೆಯಲ್ಲಿದ್ದು ಶುಭಾಶಯ ಕೋರಿದರು.

ಜೆಡಿಎಸ್ ಕಾರ್ಯಾಧ್ಯಕ್ಷ ತಿಲಕ್, ಯುವ ಘಟಕ ಅಧ್ಯಕ್ಷ ಸಂಜಯ್ ರಾಮೇ ಗೌಡ, ನಿಖಿಲ್ ಕುಮಾರಸ್ವಾಮಿ ಸಂಘದ ಅಧ್ಯಕ್ಷ ಪ್ರೀತಮ್ ರಾಂಪುರ, ಜಿ.ಪಂ ಮಾಜಿ ಸದಸ್ಯೆ ಸವಿತ ಲೋಕೇಶ್, ಮುಖಂಡರಾದ ದಯಾನಂದ್, ಗ್ರಾಪಂ ಮಾಜಿ ಅಧ್ಯಕ್ಷ ಮೆಣಜಿಬೋರನಕೊಪ್ಪಲು ನಾರಾಯಣ, ಬೆಳಗೊಳ ಗ್ರಾ.ಪಂ ಮಾಜಿ ಅಧ್ಯಕ್ಷ ಬಿ.ವಿ ಲೋಕೇಶ್, ಕೆಆರ್‌ಎಸ್ ಗ್ರಾಪಂ ಸದಸ್ಯರಾದ ನಾಗೇಂದ್ರ ಕುಮಾರ್, ಮಂಜುನಾಥ್, ರವಿಶಂಕರ್, ವಿಜಯ್ ಕುಮಾರ್, ಕೆ.ನರಸಿಂಹ, ಮರಳಗಾಲ ಗ್ರಾ.ಪ ಸದಸ್ಯ ಶ್ಯಾಮ್, ದರಸಗುಪ್ಪೆ ಕೃಷಿ ಪತ್ತಿನ ಸಹಕಾರ ಸಂಘದ ಸದಸ್ಯ ಮನು, ಮುಖಂಡರಾದ ನವೀನ್, ವಿಕಾಶ್ ಸೇರಿಂತೆ ಸಹಸ್ರಾರು ಅಭಿಮಾನಿಗಳು, ಹಿತೈಷಿಗಳು ಹಾಗೂ ಕಾರ್ಯಕರ್ತರು ಹುಟ್ಟು ಹಬ್ಬದಲ್ಲಿ ಹಾಜರಿದ್ದರು.

ಗಣಪತಿ ವಿಸರ್ಜನೆ: ಬಿಗಿ ಪೊಲೀಸ್ ಬಂದೋಬಸ್ತ್

ನಾಗಮಂಗಲ, ಅ.14–ಪಟ್ಟಣದ ಡಿವೈಎಸ್‌ಪಿ ಕಚೇರಿಯಲ್ಲಿ ಹಿಂದೂ ಮುಸ್ಲಿಂ ಸಮುದಾಯದ ಮುಖಂಡರೊಂದಿಗೆ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡುತ್ತಾ ಪಟ್ಟಣದಲ್ಲಿ ಅ.17 ರಂದು ಐತಿಹಾಸಿಕ ಕೋಟೆ ವಿದ್ಯಾ ಗಣಪತಿ ಮೆರವಣಿಗೆ ಮತ್ತು ವಿಸರ್ಜನೆಗೆ ಸಮಯದಲ್ಲಿ ಅಹಿತಕರ ಘಟನೆಗೆ ಆಸ್ಪದ ನೀಡಿದರೆ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಕಡಕ್ ಎಚ್ಚರಿಕೆ ನೀಡಿದರು.

ಜಿಲ್ಲೆಯ ಮದ್ದೂರಿನಲ್ಲಿ ಗಣೇಶ ಮೆರವಣಿಗೆ ಸಂದರ್ಭದಲ್ಲಿ ಎರಡು ಕೋಮುಗಳ ನಡುವೆ ಸೌಹಾರ್ದತೆ ಹಾಳಾಯಿತು ಎರಡು ಸಮುದಾಯದ ಮುಖಂಡರು ಹಾಗೂ ಹಿರಿಯರು ರೈತರು ಇಂಥ ಘಟನೆಗಳನ್ನು ಮಾಡುತ್ತಿಲ್ಲ. ಜನರಿಗೆ ಸಾಮರಸ್ಯ ಕಾಪಾಡುವಂತೆ ತಿಳಿ ಹೇಳುವ ಜೊತೆಗೆ ಸೌಹಾರ್ದತೆಯ ಬೀಜವನ್ನು ಬಿತ್ತಬೇಕಿದೆ. ಮತೀಯ ಭಾವನೆ ಗಳಿಗೆ ಧಕ್ಕೆ ಉಂಟಾಗದಂತೆ ನಡೆದುಕೊಳ್ಳುವಂತೆ ಮುಖಂಡರಿಗೆ ಕಿವಿಮಾತು ಹೇಳಿದರು.

ಗಣೇಶ ಮೆರವಣಿಗೆಯಲ್ಲಿ 25 ಸಾವಿರಕ್ಕೂ ಹೆಚ್ಚು ಜನರು, ಜನಪದ ಕಲಾತಂಡ ಪಾಲ್ಗೊಳ್ಳುತ್ತವೆ. ಯಾವುದೇ ರೀತಿಯ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಆಗದಂತೆ ಶಾಂತಿಯುತವಾಗಿ ಗಣೇಶ ಮೆರವಣಿಗೆ ಮತ್ತು ವಿಸರ್ಜನೆ ನಡೆಸಲು ಸಾಕಷ್ಟು ರೀತಿಯಲ್ಲಿ ಮುನ್ನೆಚ್ಚರಿಕೆಯಾಗಿ ಅಗತ್ಯ ಬಂದೋಬಸ್ತ್ ಮಾಡಲಾಗಿದೆ ಎಂದರು. ಶುಕ್ರವಾರ ಬೆಳಗ್ಗೆ 6 ರಿಂದ ಶನಿವಾರ ಬೆಳಗ್ಗೆ 6ರವರೆಗೆ ಪಟ್ಟಣದ ಸುತ್ತಲಿನ 10 ಕಿ.ಮೀ ವ್ಯಾಪ್ತಿಯ ಎಲ್ಲಾ ಮದ್ಯ ಮಾರಾಟ ಅಂಗಡಿಗಳ ಬಂದ್ ಮಾಡಲಾಗುವುದು ಎಂದು ತಿಳಿಸಿದರು.

ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಮೆರವಣಿಗೆ ಬೆಳಗ್ಗೆ 10ಕ್ಕೆ ಆರಂಭಗೊಂಡು ರಾತ್ರಿ 9 ವರೆಗೂ ನಡೆಯಲಿದೆ ಬಂದೋಬಸ್ತ್‌ಗೆ ಎಸ್ಪಿ, ಇಬ್ಬರು ಎಎಸ್‌ಪಿ, 6 ಮಂದಿ ಡಿವೈಎಸ್‌ಪಿ, 25 ಮಂದಿ ಸಿಪಿಐ, 500ಕ್ಕೂ ಹೆಚ್ಚು ಪೋಲಿಸ್ ಹಾಗೂ ಹೋಮ್‌ಗಾರ್ಡ್, ಐದು ಕೆಎಸ್‌ಆರ್‌ಪಿ, ಹತ್ತು ಡಿಎಆರ್ ವಾಹನ, ಎರಡು ಡ್ರೋನ್ ಕ್ಯಾಮೆರಾ, ನೂರಕ್ಕೂ ಹೆಚ್ಚು ಸಿ.ಸಿ ಕ್ಯಾಮೆರಾ ಸೇರಿದಂತೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಮಸೀದಿ ದರ್ಗಾಗಳ ಬಳಿ ಪೋಲಿಸ್ ನಿಯೋಜಿಸಲಾಗುವುದು ಎಂದರು.

ಜಾಲತಾಣಗಳಲ್ಲಿ ಪೋಸ್ಟ್‌ಗಳನ್ನು ಹರಿಬಿಟ್ಟರೆ ಕಠಿಣ ಕ್ರಮ



ಜಿಲ್ಲಾಧಿಕಾರಿ ಡಾ.ಕುಮಾರ್ ಪೂರ್ವಭಾವಿ ಸಭೆ ನಡೆಸಿದರು.

ನಾಗಮಂಗಲ: ಕೋಮು ಭಾವನೆಗಳಿಗೆ ಧಕ್ಕೆ ತರುವ ಹಾಗೂ ಪ್ರಚೋದನೆ ನೀಡುವಂತಹ ಪೋಸ್ಟ್ ಅಥವಾ ವಿಡಿಯೋಗಳನ್ನು ಸಾಮಾಜಿಕ ಜಾಲ ತಾಣಗಳಲ್ಲಿ ಹರಿ ಬಿಟ್ಟವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸುವುದಾಗಿ ಜಿಲ್ಲಾಧಿಕಾರಿ ಡಾ.ಕುಮಾರ್ ಎಚ್ಚರಿಕೆ ನೀಡಿದ್ದಾರೆ.

ಸೋಶಿಯಲ್ ಮೀಡಿಯಗಳ ಬಗ್ಗೆ ಈಗಾಗಲೇ ಒಂದು ತಂಡವನ್ನು ರಚಿಸಲಾಗಿದೆ ಯಾರೇ ಪ್ರಚೋದನಕಾರಿ ವಿಡಿಯೋ ಅಥವಾ ಪೋಸ್ಟ್‌ಗಳನ್ನು ಹಾಕಿದರೂ ಅಂತವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕಾಗುವುದು ಎಂದು ಎಚ್ಚರಿಕೆ ನೀಡಿದರು. ಸುಪ್ರೀಂ ಕೋರ್ಟ್ ನಿಯಮದಂತೆ ಡಿ.ಜೆ ಬಳಕೆಗೆ ಅವಕಾಶ ನೀಡಲಾಗುವುದು.

ಪಾಂಡವಪುರ ಉಪವಿಭಾಗಾಧಿಕಾರಿ ಶ್ರೀನಿವಾಸ್, ಡಿವೈಎಸ್‌ಪಿ ಚೆಲುವರಾಜು, ಇನ್ಸ್‌ಪೆಕ್ಟರ್‌ಗಳಾದ ರಾಜೇಂದ್ರ, ಶಿವಕುಮಾರ್, ತಹಸಿಲ್ದಾರ್ ಆದರ್ಶ ಜಿ ಹಾಗೂ ಕೋಟೆ ಗಣಪತಿ ಸಮಿತಿಯ ಮುಖ್ಯಸ್ಥರು ಹಾಗೂ ಮುಸ್ಲಿಂ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

ಲೋಕಾಯುಕ್ತ ಬಲೆಗೆ ಬೆಕ್ಕಳಲೆ ಪಿಡಿಓ



ಮದ್ದೂರು, ಅ.14–ಲಂಚ ಪಡೆಯುತ್ತಿದ್ದ ವೇಳೆ ಗ್ರಾಮ ಅಭಿವೃದ್ಧಿ ಅಧಿಕಾರಿಯೊಬ್ಬರು ಲೋಕಾಯುಕ್ತ ಬಲೆಗೆ ಬಿದ್ದಿರುವ ಘಟನೆ ಸೋಮವಾರ ತಾಲೂಕಿನ ಕೊಪ್ಪ ಹೋಬಳಿಯ ಬೆಕ್ಕಳಲೆ ಗ್ರಾಮದಲ್ಲಿ ನಡೆದಿದೆ.

ಬೆಕ್ಕಳಲೆ ಗ್ರಾ.ಪಂನಲ್ಲಿ ಪ್ರಭಾರ ಪಿಡಿಓ ಆಗಿ ಕಾರ್ಯ ನಿರ್ವಹಿಸುತ್ತಿರುವ ಸಚಿನ್ ಎಂಬವರೇ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿ ಬಿದ್ದವರಾಗಿದ್ದು, ಮೂಲತಃ ಅವರು ತಾಲೂಕಿನ ತಗ್ಗಹಳ್ಳಿ ಗ್ರಾಮದ ಪಿಡಿಓ ಆಗಿದ್ದು ಬೆಕ್ಕಳಲೆ ಗ್ರಾಪಂನಲ್ಲಿ ಪ್ರಭಾರವಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎನ್ನಲಾಗಿದೆ.

ಗ್ರಾಮದ ಶಿವಲಿಂಗಯ್ಯ ಎಂಬುವರಿಂದ ಪೌತಿ ಖಾತೆ ಮಾಡಿಕೊಡುವ ಸಲುವಾಗಿ ಪಿಡಿಓ ಸಚಿನ್ ಲಂಚಕ್ಕೆ ಬೇಡಿಕೆಯಿಟ್ಟಿದ್ದರು ಎನ್ನಲಾಗಿದ್ದು ಅದಕ್ಕೆ ಸಂಬಂಧಪಟ್ಟಂತೆ ಶಿವಲಿಂಗಯ್ಯ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಸೋಮವಾರ ಶಿವಲಿಂಗಯ್ಯರಿಂದ 5 ಸಾವಿರ ರೂ. ಲಂಚ ಪಡೆಯುವ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಪಿಡಿಓ ಸಚಿನ್‌ರನ್ನು ವಶಕ್ಕೆ ಪಡೆದಿದ್ದಾರೆ. ಎಸ್ಪಿ ಸುರೇಶ್ ಬಾಬು, ಕುಮಾರ್ ಹಾಗೂ ಬ್ಯಾಟರಾಯಗೌಡ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.

ಗ್ರಾಪಂಗಳ ಕೇಂದ್ರ ಯೋಜನೆಗಳು ಉಳಿಸಿವೆ



ತೆಂಡೇಕೆರೆ ಗ್ರಾಮದಲ್ಲಿ ಸಭಾ ಭವನವನ್ನು ಶಾಸಕ ಹೆಚ್.ಟಿ.ಮಂಜು ಉದ್ಘಾಟಿಸಿದರು.

ಕೆ.ಆರ್.ಪೇಟೆ, ಅ.14–ನರೇಗಾ, 15ನೇ ಹಣಕಾಸು, ಪಿಎಂ ಆವಾಸ್ ಸೇರಿದಂತೆ ಹಲವು ಕೇಂದ್ರ ಸರ್ಕಾರದ ಯೋಜನೆಗಳು ಗ್ರಾಪಂಗಳನ್ನು ಉಳಿಸಿವೆ ಎಂದು ಶಾಸಕ ಹೆಚ್.ಟಿ.ಮಂಜು ಹೇಳಿದರು.

ತಾಲೂಕಿನ ತೆಂಡೇಕೆರೆ ಗ್ರಾಮದಲ್ಲಿ 15ನೇ ಹಣಕಾಸು ಯೋಜನೆ ಅಡಿಯಲ್ಲಿ ನಿರ್ಮಿಸಲಾದ ಸಭಾಭವನವನ್ನು ಉದ್ಘಾಟಿಸಿ, ಅಂಚೆ ಮುದ್ದನ ಹಳ್ಳಿಯಲ್ಲಿ ಅಂಗನವಾಡಿ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಿ, ಹಾದನೂರು ಗ್ರಾಮದಲ್ಲಿ ಕುಡಿಯುವ ನೀರಿನ ಯೋಜನೆ ಉದ್ಘಾಟಿಸಿ, ರಾಯಸಮುದ್ರ, ಶೀಳನೆರೆ ಗ್ರಾಮಗಳಲ್ಲಿ ರಸ್ತೆ, ಚರಂಡಿ ಅಭಿವೃದ್ಧಿ, ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದು ಸುಮಾರು ಎರಡೂವರೆ ವರ್ಷಗಳು ಕಳೆದಿವೆ. ಒಂದೇ ಒಂದು ಆಶ್ರಯ ಮನೆ ಮಂಜೂರು ಮಾಡಿಲ್ಲ. ಗ್ರಾ. ಪಂ.ಗಳಿಗೆ ಒಂದೇ ಒಂದು ರೂಪಾಯಿ ಅನುದಾನ ನೀಡಿಲ್ಲ. ಕೇವಲ ಸದಸ್ಯರಿಗೆ ಗೌರವ ಧನ ನೀಡಿ ಕಾಲ ಕಳೆಯುತ್ತಿದೆ. ಅದನ್ನೂ ಕೂಡ ಸರಿಯಾಗಿ ನೀಡುತ್ತಿಲ್ಲ ಎಂದು ಸದಸ್ಯರು ದೂರುತ್ತಿದ್ದಾರೆ. ಮಹಾತ್ಮಗಾಂಧೀಜಿಯವರು ಗ್ರಾಮಗಳ ಅಭಿವೃದ್ಧಿಯಾದರೆ ದೇಶದ ಅಭಿವೃದ್ಧಿ ಆದಂತೆ ಎಂದು ಹೇಳಿದ್ದರು. ಆದರೆ ರಾಜ್ಯ ಕಾಂಗ್ರೆಸ್ ಸರ್ಕಾರವು ಗ್ರಾಪಂಗಳಿಗೆ ಯಾವುದೇ ಅನುದಾನ ನೀಡದೆ ಕತ್ತು ಹಿಸುಕುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು.

ತೆಂಡೇಕೆರೆ ಗ್ರಾ. ಪಂ. ಸವಿತ ಇಂದ್ರೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ತಾ.ಪಂ. ಇಓ ಸುಷ್ಮಾ.ಕೆ, ತಾಲೂಕು ಯೋಜನಾಧಿಕಾರಿ ಮೋದೂರು ಶ್ರೀನಿವಾಸ್, ಪಿಆರ್‌ಇಡಿ ಕಾರ್ಯಪಾಲಕ ಇಂಜಿನಿಯರ್ ಎಂ.ಎಸ್.ಮಂಜುಳ, ಇಂಜಿನಿಯರ್ ಲೋಕೇಶ್, ಕೆಆರ್‌ಐಡಿಎಲ್ ಇಂಜಿನಿಯರ್ ಚೇತನ್, ತೆಂಡೇಕೆರೆ ಗ್ರಾ.ಪಂ. ಪಿಡಿಓ ಕೆ.ಎಸ್.ಕುಮಾರ್, ಸೌಮ್ಯ, ಗ್ರಾ.ಪಂ. ಉಪಾಧ್ಯಕ್ಷೆ ನಾಗರತ್ನ ಗಂಗಾಧರ್, ಸದಸ್ಯರಾದ ಹೆಚ್.ಎಂ. ಕಾಂತರಾಜು, ಗುಂಡಣ್ಣ, ಸ್ವಾಮೀಗೌಡ, ರವಿಕುಮಾರ್, ರಂಗರಾಜು, ಅಂಚನಹಳ್ಳಿ ರಾಜು, ಸೌಭಾಗ್ಯ, ಜ್ಯೋತಿ ಬಸವರಾಜು, ಗಂಗಮ್ಮ ಕುಮಾರ್, ರೋಹಿಣಿ ಮಹೇಶ್, ಶ್ರೀನಿವಾಸ್, ಜಯಮ್ಮಸಣ್ಣೇಗೌಡ, ಶಿಲ್ಪಶೇಖರ್, ಸವಿತ, ಮುಖಂಡರಾದ ಸ್ವಾಮೀಗೌಡ, ಅಂಚನಹಳ್ಳಿ ಸುಬ್ಬಣ್ಣ, ರಾಯಸಮುದ್ರ ಗೋಪಿನಾಥ್, ಹರಳಹಳ್ಳಿ ಗ್ರಾಪಂ. ಮಾಜಿ ಅಧ್ಯಕ್ಷ ಯೋಗೇಶ್, ಚೆಸ್ಕಾಂ ಇಂಜಿನಿಯರ್ ಸುನಿಲ್ ಕುಮಾರ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ನಾಳೆ ಲೋಕಾಯುಕ್ತರಿಂದ ಅಹವಾಲು ಸ್ವೀಕಾರ

ಮಂಡ್ಯ,ಅ.14–ಲೋಕಾಯುಕ್ತ ವಿಭಾಗದ ಅಧಿಕಾರಿಗಳು ಮದ್ದೂರು ತಾಲೂಕಿನಲ್ಲಿ ಅ. 16 ರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1:30 ರವರೆಗೆ ತಾಲೂಕು ಕಚೇರಿ ಆವರಣದಲ್ಲಿ ಸಾರ್ವಜನಿಕರ ಕುಂದುಕೊರತೆ ಸಭೆ ನಡೆಸಿ ದೂರು ಅಹವಾಲು ಸ್ವೀಕಾರ ಮತ್ತು ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತಹ ದೂರುಗಳ ಸ್ವೀಕಾರ ಮಾಡಲಿದ್ದಾರೆ.

ಡಿವೈಎಸ್‌ಪಿ ಹೆಚ್.ಟಿ.ಸುನಿಲ್ ಕುಮಾರ್ ಲೋಕಾಯುಕ್ತ ಪೋಲಿಸ್ ಇನ್ಸ್‌ಪೆಕ್ಟರ್‌ಗಳಾದ ಬ್ಯಾಟರಾಯಗೌಡ ಬಿ.ಪಿ, ಕುಮಾರ ಎಂ, ಲೇಪಾಕ್ಷ ಮೂರ್ತಿಯವರು ಸಭೆಯಲ್ಲಿ ಭಾಗವಹಿಸುವರು. ಸದರಿ ಸಭೆಯಲ್ಲಿ ಸರ್ಕಾರಿ ಮತ್ತು ಅರೆ ಸರ್ಕಾರಿ ಕಚೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ, ನೌಕರರುಗಳು ಸರ್ಕಾರಿ ಕೆಲಸ ಮಾಡಿಕೊಡಲು ಅನಗತ್ಯ ವಿಳಂಬ ಮಾಡಿದ ಬಗ್ಗೆ ಹಾಗೂ ಭ್ರಷ್ಟಾಚಾರದ ಬಗ್ಗೆ ದೂರು ಅಹವಾಲುಗಳು ಏನಾದರೂ ಇದ್ದಲ್ಲಿ ಸ್ವೀಕರಿಸಲಾಗುವುದು ಎಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಸ್ ಸುರೇಶ್ ಬಾಬು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ಅಪೂರ್ಣ ಕಾಮಗಾರಿ ವಾರದೊಳಗೆ ಆರಂಭಿಸಿ




ಶಾಸಕ ಕೆ.ಎಂ.ಉದಯ್ ಅಧಿಕಾರಿಗಳೊಂದಿಗೆ ಹೆದ್ದಾರಿ ಕಾಮಗಾರಿ ಪರಿಶೀಲಿಸಿದರು

ಮದ್ದೂರು, ಅ.14– ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ವಾರದೊಳಗೆ ಪ್ರಾರಂಭ ಮಾಡುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಶಾಸಕ ಕೆ.ಎಂ.ಉದಯ್ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ತಾಲೂಕಿನ ನಿಡಘಟ್ಟ ಗ್ರಾಮದಿಂದ ಮದ್ದೂರು ನಗರದ ಪ್ರವಾಸಿ ಮಂದಿರದ ವರೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು, ತಹಸೀಲ್ದಾರ್, ಭೂ ಸ್ವಾಧೀನ ಅಧಿಕಾರಿಗಳು, ಎಂಜಿನಿಯರ್, ಗುತ್ತಿಗೆದಾರರು ಸೇರಿದಂತೆ ಎಲ್ಲಾ ಇಲಾಖೆ ಅಧಿಕಾರಿಗಳ ಜೊತೆಗೂಡಿ ಅಪೂರ್ಣ ಕಾಮಗಾರಿಯನ್ನು ಪರಿಶೀಲನೆ ನಡೆಸಿ, ಸ್ಥಳಿಯ ನಿವಾಸಿಗಳಿಂದ ಮಾಹಿತಿ ಪಡೆದುಕೊಂಡು, ಹೆದ್ದಾರಿ ಮತ್ತು ಸರ್ವಿಸ್ ರಸ್ತೆಗಳ ಬಾಕಿಯಿರುವ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸುವಂತೆ ಭೂಸ್ವಾಧೀನ ಪ್ರಕ್ರಿಯೆ ಹಾಗೂ ಕಾನೂನು ಕಾರ್ಯವಿಧಾನಗಳನ್ನು ತ್ವರಿತಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅಪೂರ್ಣಗೊಂಡಿರುವ ಕಾಮಗಾರಿಯನ್ನು ಪೂರ್ಣಗೊಳಿಸಲು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ನಿರ್ಲಕ್ಷ್ಯತನ ತೋರುತ್ತಿದ್ದಾರೆ. ಈಗಾಗಲೇ ಕಾಮಗಾರಿ ಸಂಬಂಧ ಸಚಿವರ ನೇತೃತ್ವದಲ್ಲಿ ಸಭೆ ನಡೆಸಿ ಯೋಜನಾ ಪ್ರಾಧಿಕಾರದ ಅಧಿಕಾರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿತ್ತು ಎಂದು ತಿಳಿಸಿದರು.


ಕಾಳಯ್ಯ ನಿಧನ



ಭಾರತೀನಗರ, ಅ.14–ಇಲ್ಲಿಗೆ ಸಮೀಪದ ಮುಟ್ಟನಹಳ್ಳಿ ಗ್ರಾಮದ ಹಿರಿಯ ಮುಖಂಡ ಹಾಗೂ ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಕಾಳಯ್ಯ(94) ಅವರು ಅನಾರೋಗ್ಯದಿಂದ ನಿಧನ ಹೊಂದಿದ್ದಾರೆ.

ಮೃತರು ಪತ್ನಿ ಜಯಮ್ಮ, ಡಾ.ಎಂ.ಕೆ.ನಾಗರಾಜು ಸೇರಿದಂತೆ ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಮತ್ತು ಬಂಧುಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯ ಸಂಸ್ಕಾರ ಸ್ವಗ್ರಾಮದ ಮುಟ್ಟನಹಳ್ಳಿಯ ತಮ್ಮ ಜಮೀನಿನಲ್ಲಿ ಅಂತ್ಯಸಂಸ್ಕಾರ ನೆರವೇರಿತು.

ನಂಜೇಗೌಡ ನಿಧನ



ಕೆ.ಆರ್.ಪೇಟೆ, ಅ.14– ತಾಲೂಕಿನ ಅಕ್ಕಿಹೆಬ್ಬಾಳು ಗ್ರಾಮದ ಹಿರಿಯ ಮುಖಂಡ ಎ.ಬಿ.ನಂಜೇಗೌಡ (76) ವಯೋ ಸಹಜವಾಗಿ ನಿಧನ ಹೊಂದಿದ್ದಾರೆ. ಮೃತರು ಪುತ್ರ ಅಕ್ಕಿಹೆಬ್ಬಾಳು ಗ್ರಾಪಂ ಮಾಜಿ ಸದಸ್ಯ ಮೀಸೆ ಕಿಟ್ಟಣ್ಣ, ಇಬ್ಬರು ಪುತ್ರಿಯರು, ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಮಂಗಳವಾರ ಮಧ್ಯಾಹ್ನ ಅಕ್ಕಿಹೆಬ್ಬಾಳು ಗ್ರಾಮದ ಮೃತರ ಜಮೀನಿನಲ್ಲಿ ನಡೆಯಿತು.

ಮೂರನೇ ಪುಟದಿಂದ

ವಿಭಾಗ ಮಟ್ಟದ ಬೃಹತ್ ಉದ್ಯೋಗ ಮೇಳ

ನಿನ್ನೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಯೋಜಿಸಿದ್ದ ಡಿನ್ನರ್‌ಗೆ ವಿಶೇಷ ಅರ್ಥ ಕಲ್ಪಿಸುವುದು ಬೇಡ. ಅಧಿಕಾರ ಹಸ್ತಾಂತರ ಎಂಬುದು ಶುದ್ಧ ಸುಳ್ಳು ಎಂದು ಸ್ಪಷ್ಟಪಡಿಸಿದರು. ಆರ್ ಎಸ್‌ಎಸ್ ನಿರ್ಬಂಧ ಕುರಿತು ಹೇಳಿಕೆ ನೀಡಿರುವ ಪ್ರಿಯಾಂಕ್ ಖರ್ಗೆಗೆ ಬೆದರಿಕೆ ಕರೆ ಬಂದಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಹಾಗೇನಾದರೂ ಬೆದರಿಕೆ ಕರೆ ಬಂದಿದ್ದರೆ ಸೂಕ್ತ ಭದ್ರತೆ ಕಲ್ಪಿಸಲಾಗುವುದು ಎಂದರು.

ಮೈಸೂರಿನ ಅಲೆಮಾರಿ ಸಮುದಾಯದ ಮಗು ಹತ್ಯೆಯಾಗಿರುವ ಪ್ರಕರಣದ ಬಗ್ಗೆ ಸರ್ಕಾರ ತನಿಖೆ ನಡೆಸುತ್ತಿದೆ. ಕೇಂದ್ರ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಇಂತಹ ಘಟನೆ ಸಾಮಾನ್ಯವಾಗಿ ಬಿಟ್ಟಿದೆ. ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಮೇಲೆಯೇ ಶೂ ಎಸೆಯಲೆತ್ನಿಸಿರುವುದು ಇದಕ್ಕೊಂದು ನಿದರ್ಶನ ಎಂದು ಡಾ.ಶರಣ ಪ್ರಕಾಶ್ ಪಾಟೀಲ್ ದೂರಿದರು. ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತ ನಾಯಕ್, ನಿರ್ದೇಶಕ ಎಂ.ಎನ್.ನಾಗರಾಜ್, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ ರೆಡ್ಡಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಬಸ್ ನಿಲ್ದಾಣ ನಿರ್ಮಾಣ ಪ್ರಕ್ರಿಯೆ ಆರಂಭ

ಕಾರ್ಯವನ್ನು ಶೀಘ್ರದಲ್ಲೆ ಆರಂಭಿಸುವ ಗುರಿ ಹೊಂದಲಾಗಿದೆ. ಮೈಸೂರಿನ ಬೆಂಗಳೂರು–ನೀಲಗಿರಿ ರಸ್ತೆಯಲ್ಲಿರುವ ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣ ಸಂಕೀರ್ಣವಾಗಿತ್ತು. ಮೈಸೂರು ಸುತ್ತಮುತ್ತಲಿನ ತಾಲೂಕು, ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಗೆ ಇಲ್ಲಿಂದ ಎಲ್ಲಾ ಬಸ್‌ಗಳು ಸಂಚರಿಸಬೇಕಿತ್ತು. ಪ್ರತಿನಿತ್ಯ ಸಾವಿರಾರು ಬಸ್‌ಗಳ ಸಂಚಾರದಿಂದ ವಾಹನ ದಟ್ಟಣೆ ಉಂಟಾಗುತ್ತಿತ್ತು. ಬಸ್‌ಗಳು ನಿಲ್ದಾಣದಿಂದ ಹೊರ ಹೋಗುವ ಸಂದರ್ಭದಲ್ಲಿ ಅಪಘಾತಗಳು ಸಂಭವಿಸುತ್ತಿತ್ತು.

ಈ ಹಿನ್ನೆಲೆಯಲ್ಲಿ ಬನ್ನಿಮಂಟಪದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಿಸುವ ಯೋಜನೆ ರೂಪಿಸಲಾಯಿತು. ಕೆಎಸ್‌ಆರ್‌ಟಿಸಿಯ 61 ಎಕರೆ ಪ್ರದೇಶದಲ್ಲಿ 14 ಎಕರೆಯನ್ನು ನೂತನ ಬಸ್ ನಿಲ್ದಾಣಕ್ಕೆ ಬಳಸಿಕೊಳ್ಳಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜುಲೈ 19 ರಂದು ನೂತನ ಬಸ್ ನಿಲ್ದಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು.

ಎರಡು ವರ್ಷದೊಳಗೆ ಹೊಸ ಬಸ್ ನಿಲ್ದಾಣ ನಿರ್ಮಿಸುವ ಗುರಿ

ನೂತನ ಬಸ್ ನಿಲ್ದಾಣದಿಂದ ಹೊರ ಜಿಲ್ಲೆ ಹಾಗೂ ಅಂತರರಾಜ್ಯಗಳಿಗೆ ಬಸ್‌ಗಳು ಸಂಚರಿಸುತ್ತವೆ. ಇದರಿಂದ ಬನ್ನಿಮಂಟಪದ ಬೆಂಗಳೂರು ರಸ್ತೆಯಲ್ಲಿ ಸಂಚಾರ ದಟ್ಟಣೆ ಉಂಟಾಗುತ್ತದೆ ಎಂಬ ಆತಂಕ ಬೇಡ. ಬಸ್ ನಿಲ್ದಾಣದಲ್ಲಿ ಏಕಮುಖ (ಒನ್ ವೇ) ಪ್ರವೇಶ ಮತ್ತು ನಿರ್ಗಮನ ವ್ಯವಸ್ಥೆ ಜಾರಿ ಮಾಡುತ್ತೇವೆ. ದಸರಾ ಸಮಯದಲ್ಲಿ ಬನ್ನಿಮಂಟಪದ ಮುಖ್ಯ ರಸ್ತೆಯಲ್ಲಿ ವಾಹನ ದಟ್ಟಣೆ ಇರುವ ಕಾರಣ ನಿಲ್ದಾಣದ ಹಿಂಭಾಗದ ರಸ್ತೆ ಬಳಸಿಕೊಳ್ಳಲಾಗುತ್ತದೆ. ಈಗಿರುವ ಗ್ರಾಮಾಂತರ ಬಸ್ ನಿಲ್ದಾಣದಿಂದ ಮೈಸೂರು ಸುತ್ತಮುತ್ತಲಿನ ತಾಲೂಕುಗಳಿಗೆ ಬಸ್‌ಗಳು ಸಂಚರಿಸುತ್ತವೆ. ಇದರಿಂದ ಮೈಸೂರು ನಗರದಲ್ಲಿ ಬಸ್‌ಗಳ ಸಂಚಾರಕ್ಕೆ ಯಾವುದೇ ತೊಂದರೆ ಆಗುವುದಿಲ್ಲ. - ಬಿ.ಶ್ರೀನಿವಾಸ್, ವಿಭಾಗೀಯ ನಿಯಂತ್ರಣಾಧಿಕಾರಿ, ಕೆಎಸ್‌ಆರ್‌ಟಿಸಿ

ರಿಂಗ್ ರೋಡ್ ಯೋಜನೆಗೆ ಚಾಲನೆ

ಅಗಲದ ಎರಡೂ ಕಡೆ ಸರ್ವಿಸ್ ರೋಡ್ ಮತ್ತು 6 ಮೇನ್ ಕಾರಿಡಾರ್ ಹೊಂದಿರುವ ಪೆರಿಫೆರಲ್ ರಿಂಗ್ ರಸ್ತೆಗೆ ಡಿಪಿಆರ್ ತಯಾರಿಸಲು 6 ತಿಂಗಳ ಕಾಲಾವಕಾಶ ನೀಡಲಾಗುವುದು. ಯೋಜನೆಗೆ ಅಗತ್ಯವಿರುವ ಭೂಮಿ ಸ್ವಾಧೀನ ಮತ್ತು ಅದರ ವೆಚ್ಚ, ರಸ್ತೆ ಅಭಿವೃದ್ಧಿಗೆ ತಗಲುವ ರೇಖಾ ಚಿತ್ರಗಳು, ಮಾರ್ಗ ಮಧ್ಯೆ ಬರುವ ಗ್ರಾಮಗಳು, ಚರಂಡಿ, ಸೇತುವೆ, ನಾಲೆ, ಕೆರೆ, ಅರಣ್ಯಪ್ರದೇಶ, ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಹಾಗೂ ಇನ್ನಿತರ ಅಂಶಗಳನ್ನು ಅಧ್ಯಯನ ನಡೆಸಿ ಪೆರಿಫೆರಲ್ ರಿಂಗ್ ರಸ್ತೆಯ ಸಂಪೂರ್ಣ ಚಿತ್ರಣ ಮತ್ತು ಮಾಹಿತಿಯನ್ನೊಳಗೊಂಡ ಸಮಗ್ರ ಯೋಜನಾ ವರದಿಯನ್ನು ಕಂಪನಿಯು ಸಲ್ಲಿಸಬೇಕಾಗಿದೆ ಎಂದು ಪ್ರಾಧಿಕಾರದ ಆಯುಕ್ತರು ತಿಳಿಸಿದ್ದಾರೆ. ಎಲ್ಲವೂ ನಿರೀಕ್ಷೆಯಂತೆ ಆದಲ್ಲಿ ಮುಂದಿನ ವರ್ಷ ಈ ಬಹು ನಿರೀಕ್ಷಿತ ಯೋಜನೆಗೆ ಚಾಲನೆ ದೊರೆಯಲಿದೆ. ಆರಂಭದಲ್ಲಿ ಭೂಸ್ವಾಧೀನ ಪ್ರಕ್ರಿಯೆ ನಡೆಸಿ ರೈತರಿಗೆ ಪರಿಹಾರದ ಹಣ ಮಂಜೂರು ಮಾಡಿದ ಬಳಿಕ ಎಂಡಿಎ ಅಥವಾ ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (NHAI) ಕಾಮಗಾರಿಯನ್ನು ಅನುಷ್ಠಾನಗೊಳಿಸಲಿದೆ. ಪ್ರಸ್ತುತ ಇರುವ ಮೈಸೂರು ರಿಂಗ್ ರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೆ ಅಧಿಕವಾಗಿದ್ದು ಭವಿಷ್ಯದಲ್ಲಿ ವಾಹನಗಳ ಸಂಖ್ಯೆ ಹೆಚ್ಚಳವಾಗುವ ನಿರೀಕ್ಷೆ ಇರುವುದರಿಂದ ಒತ್ತಡ ನಿಭಾಯಿಸಲು ಪೆರಿಫೆರಲ್ ರಿಂಗ್ ರಸ್ತೆ ಯೋಜನೆಯನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಕೈಗೆತ್ತಿಕೊಂಡಿದೆ ಎಂದು ರಕ್ಷಿತ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಬೌದ್ಧ ಧಮ್ಮ ಸಮ್ಮೇಳನವೇ ನಿಜವಾಗಿಯೂ ನಾಡಹಬ್ಬ

● ಹಿರಿಯ ದಲಿತ ಹೋರಾಟಗಾರ ಮಾವಳ್ಳಿ ಶಂಕರ್ ಅಭಿಮತ ● ನಾಡು–ನುಡಿಗೆ ಅಪಚಾರವೆಸಗುವಾಗ ಬುದ್ಧ ಜನರನ್ನು ಎಚ್ಚರಿಸುತ್ತಾ ಬಂದಿದ್ದಾನೆ



ಹಿರಿಯ ಹೋರಾಟಗಾರ ಮಾವಳ್ಳಿ ಶಂಕರ್ ಅವರು ಬುದ್ಧ, ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಮೈಸೂರು, ಅ.14(ವಿವಿಹೆಚ್)–ಮೈಸೂರು ಕೆಲವು ದಿನಗಳ ಹಿಂದೆ ನಾಡಹಬ್ಬವನ್ನು ಆಚರಿಸಿಕೊಂಡಿದೆ. ಆದರೆ ಅದು ನಿಜವಾದ ನಾಡಹಬ್ಬವಲ್ಲ. ಬೌದ್ಧ ಧಮ್ಮ ಸಮ್ಮೇಳನವೇ ನೈಜ ನಾಡಹಬ್ಬ ಎಂದು ದಲಿತ ಸಂಘರ್ಷ ಸಮಿತಿಯ ಹಿರಿಯ ಹೋರಾಟಗಾರ ಮಾವಳ್ಳಿ ಶಂಕರ್ ಅಭಿಪ್ರಾಯಪಟ್ಟರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿರುವ ಬೌದ್ಧ ಸಮ್ಮೇಳನದ 'ಸಾಮ್ರಾಟ್ ಅಶೋಕ' ವೇದಿಕೆಯಲ್ಲಿ ಮಂಗಳವಾರ ನಡೆದ ಪ್ರಾಚೀನ ಬೌದ್ಧ ಸಮ್ಮೇಳನಗಳು ಹಾಗೂ ಅಶೋಕ ಶಾಸನಗಳು ಮತ್ತು ಧರ್ಮ ಎಂದರೇನು ವಿಚಾರಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜನರ ಚಿಂತನೆಗಳು, ವಿಚಾರಧಾರೆಗಳನ್ನು ಹತ್ತಿಕ್ಕುವ ಚಾರಿತ್ರ್ಯಹೀನ, ನಾಡು–ನುಡಿಗೆ ಅಪಚಾರ ಎಸಗುವ ಕ್ರಿಯೆಗಳು ನಡೆಯುವಾಗೆಲ್ಲಾ ಬುದ್ಧ ಜನರನ್ನು ಮತ್ತೆ–ಮತ್ತೆ ಎಚ್ಚರಿಸುತ್ತಾ ಬಂದಿದ್ದಾನೆ. ಇದಕ್ಕೆ ಸಾಕ್ಷಿ ಎಂಬಂತೆ ಈ ನವ ಮನ್ವಂತರ ಸಮ್ಮೇಳನ ಆಯೋಜನೆಯಾಗಿದೆ ಎಂದು ತಿಳಿಸಿದರು.

ಅಯೋಧ್ಯೆ, ಮಥುರಾ, ರಾಮೇಶ್ವರದಲ್ಲಿ ಯಾವ ಮಾದರಿಯ ಮೂರ್ತಿಗಳಿವೆ. ಯಾರ್‍ಯಾರು ಎಲ್ಲಿ ಹುಟ್ಟಿದರು ಎಂದು ಹೇಳಬೇಕಿಲ್ಲ. ಈ ದೇಶದ ಭೂ ತಾಯಿಯ ಒಡಲನ್ನು ಬಗೆದರೆ ಬುದ್ಧ ಮೂರ್ತಿಗಳೇ ಸಿಗಲಿವೆ. ಹೀಗಾಗಿ ನರಿಗಳು ಬರೆದಿರುವ ಚರಿತ್ರೆಯನ್ನು ತೆಗೆದು ಸಿಂಹಗಳು ಚರಿತ್ರೆ ಬರೆಯುವಂತೆ ಆಗಬೇಕು. ಈ ದೇಶಕ್ಕೆ ಚರಿತ್ರೆಯೇ ಇರಲಿಲ್ಲ. ಒಂದು ಚರಿತ್ರೆ ಕೊಟ್ಟವರು ಪಾಶ್ಚಾತ್ಯ ವಿದ್ವಾಂಸರು, ಅನೇಕ ಪ್ರಜ್ಞಾವಂತ ಇಂಗ್ಲಿಷ್ ಜ್ಞಾನಿಗಳು, ಪ್ರಾಧ್ಯಾಪಕರು ಈ ನೈಜ ಸತ್ಯವನ್ನು ನಮ್ಮ ಮುಂದೆ ಇಟ್ಟರು. ಈ ವಿದ್ವಾಂಸರಿಗೆ ಕೃತಜ್ಞರಾಗಿರಬೇಕು ಎಂದರು. ಹಣ ಸಂಪಾದನೆಯ ಉದ್ದೇಶದಿಂದ ಗುಡಿ–ಗುಂಡಾರಗಳು ತಲೆ ಎತ್ತುತ್ತಿವೆ. ದೇವಸ್ಥಾನಗಳ ಮೇಲೆ ಕೋಟಿಗಟ್ಟಲೆ ಬಂಡವಾಳ ಹಾಕಲಾಗುತ್ತಿದೆ. ರಾಮ ಹುಟ್ಟಿರುವುದಕ್ಕೆ ಸಾಕ್ಷಿಯು ಇಲ್ಲ. ಹೆರಿಗೆ ಮಾಡಿಸಿದ ಸೂಲಗಿತ್ತಿಯ ಪುರಾವೆ ಇಲ್ಲ. ಇಲ್ಲವಾದುದ್ದನ್ನು ಸೃಷ್ಟಿ ಮಾಡಿ ನಿಜ ಚರಿತ್ರೆಯನ್ನು ವಿರೂಪಗೊಳಿಸಲಾಗುತ್ತಿದೆ. ನಮ್ಮಲ್ಲಿನ ಚರಿತ್ರಕಾರರು ತಮ್ಮ ಜವಾಬ್ದಾರಿಯನ್ನು ಮನನ ಮಾಡಿಕೊಳ್ಳಬೇಕು ಎಂದು ಹೇಳಿದರು.

ಭಾರತದ್ದು ಬೆಂಕಿ ಚರಿತ್ರೆ: ಪ್ರಾಚೀನ ಬೌದ್ಧ ಸಮ್ಮೇಳನಗಳು ಹಾಗೂ ಅಶೋಕ ಶಾಸನಗಳು ವಿಷಯ ಕುರಿತು ಮಾತನಾಡಿದ ಹಂಪಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಪ್ರೊ.ಸೋಸಲೆ ಸಿದ್ದರಾಜು, ಭಾರತ ಚರಿತ್ರೆ ಬೆಂಕಿಯ ಚರಿತ್ರೆಯಾಗಿದೆ. ಇದನ್ನು ಬೆವರಿನಿಂದ ಬರೆಯಲಾಗಿದೆ. ಆದರೆ ಮನುವಾದಿಗಳು ನಮ್ಮ ಚರಿತ್ರೆ ಯನ್ನು ಮರೆಮಾಚಿ, ತಮ್ಮ ತೀರ್ಥದ ಚರಿತ್ರೆಯನ್ನಾಗಿ ಬರೆದುಕೊಂಡಿದ್ದಾರೆ ಎಂದು ಕಿಡಿಕಾರಿದರು.

ಭಾರತದಲ್ಲಿ ಜೈನರ ಪವಿತ್ರವಾದ ಸ್ಥಳ ಕರ್ನಾಟಕದಲ್ಲಿನ ಶ್ರವಣಬೆಳಗೊಳ. ಇದು ಚಂದ್ರಗುಪ್ತ ಮೌರ್ಯ ಕಾಲವಾದ ಸ್ಥಳವೂ ಆಗಿದೆ. ಈ ಸ್ಥಳಕ್ಕೆ ಅಂತಾರಾಷ್ಟ್ರೀಯ ಮನ್ನಣೆಯೂ ಸಿಕ್ಕಿದೆ. ಆದರೆ ಇದೇ ಕರ್ನಾಟಕದ ಭೀಮಾ ತೀರದ 'ಸನ್ನತಿ' ಅಶೋಕ ಮಹಾರಾಜನ ಕೊನೆಯ ದಿನಗಳ ನೆಚ್ಚಿನ ಸ್ಥಳವಾಗಿತ್ತು. ಅಲ್ಲದೇ 'ದೇವಾನಾಂ ಪ್ರಿಯ ಪ್ರಿಯದರ್ಶಿನಿ ಅಶೋಕ' ಎಂದು ಉಲ್ಲೇಖಿತವಾದ ಶಾಸನ ಇದೇ 'ಮಸ್ಕಿ'ಯಲ್ಲಿ ದೊರೆತಿರುವುದು ಕನ್ನಡಿಗರ ಹೆಮ್ಮೆ. ಈ ಎಲ್ಲಾ ವಿಶೇಷತೆಗಳಿದ್ದರೂ ಅಶೋಕ ಬೌದ್ಧ ಧಮ್ಮದ ಪಾಲಕ ಎಂಬ ಹಿನ್ನೆಲೆಯಲ್ಲಿ ಅದನ್ನು ಮುಚ್ಚಿಡಲಾಗಿದೆ. ಇದು ವೈದಿಕರು ಜೈನರೊಂದಿಗೆ ಸೇರಿ ಬೌದ್ಧ ಧರ್ಮವನ್ನು ಹತ್ತಿಕ್ಕಲು ಮಾಡಿರುವ ಸಂಚಾಗಿದೆ ಎಂದು ಬೇಸರಿಸಿದರು.

ಅಶೋಕನ ಕಾಲಕ್ಕಿಂತಲೂ ಹಿಂದಿನಿಂದಲೂ ಬೌದ್ಧ ಧಮ್ಮ ಸಮ್ಮೇಳನಗಳು, ಬುದ್ಧನ ಅಸ್ತಿತ್ವದ ಬಗ್ಗೆ ಉಲ್ಲೇಖವಿರುವ, ಇದಕ್ಕೆ ಪೂರಕವಾದ ಸಾವಿರಾರು ಶಿಲಾಶಾಸನಗಳು ನಮಗೆ ಸಿಕ್ಕಿವೆ. ಆದರೆ ಯಾವೊಬ್ಬ ವೈದಿಕ ನಾಯಕನು ತಾನು ಕೃಷ್ಣ, ರಾಮನ ಹೆಸರಿನಲ್ಲಿ ಆಳ್ವಿಕೆ ಮಾಡಿರುವುದನ್ನು, ಅದರ ಉಲ್ಲೇಖಗಳನ್ನು ನಾವು ಕಂಡಿಲ್ಲ ಪುರಾವೆಗಳೂ ಇಲ್ಲ ಇವೆಲ್ಲಾ ತದನಂತರ ಹುಟ್ಟಿಕೊಂಡ ವೈದಿಕರ ಸಂಚಾಗಿದೆ ಎಂದು ಸ್ಪಷ್ಟಪಡಿಸಿದರು.

ಧಮ್ಮದೀವಿಗೆ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಮಲ್ಲಿಕಾರ್ಜುನ್ ಕನಕಪುರ; ಧಮ್ಮ ಎಂದರೇನು? ವಿಷಯದ ಕುರಿತು ಮಾತನಾಡಿದರು. ಗುಲ್ಬರ್ಗಾದ ಭಂತೆ ದಮ್ಮದೀಪ, ಕಲಬುರಗಿಯ ಭೂಮಿ ಬುದ್ಧ ವಿಹಾರದ ಭಂತೆ ಅಮರಜ್ಯೋತಿ ಉಪಸ್ಥಿತರಿದ್ದರು.

ಕುವೆಂಪು ನಾಡಗೀತೆಯಿಂದ ಬೌದ್ಧರುದ್ಯಾನ ತೆಗೆದವರ್‍ಯಾರು?:

"ಕರ್ನಾಟಕ ನಾಡಗೀತೆಯಲ್ಲಿ ಬೌದ್ಧರುದ್ಯಾನ ಕೈ ಬಿಟ್ಟು ಜೈನರುದ್ಯಾನ ಸೇರಿಸಲಾಗಿದೆ. ಬೌದ್ಧರುದ್ಯಾನ ಪದವನ್ನು ತೆಗೆದು ಹಾಕಿದವರು ಯಾರು? ಜೊತೆಗೆ ಶಂಕರ ಚಾರ್ಯ, ಮಾಧ್ವಾಚಾರ್ಯರು ನಾಡಗೀತೆಯಲ್ಲಿ ಯಾಕೆ ಬಂದರು. ಮನುಷ್ಯ ವಿರೋಧಿಗಳನ್ನು ತಮ್ಮ ಜೀವನದಾದ್ಯಂತ ನಿಂದಿಸಿಕೊಂಡು ಬಂದ ಕುವೆಂಪು ನಾಡಗೀತೆಯಲ್ಲಿ ಇವೆಲ್ಲಾ ಹೇಗೆ ನುಸುಳಿದವು. ಈ ಅಪವ್ಯಾಖ್ಯಾನಕ್ಕೆ ಕಾರಣ ಯಾರು? ಈ ನುಸುಳುಕೋರರನ್ನು ನಾವು ಪತ್ತೆ ಹಚ್ಚಬೇಕು. ಆ ಮೂಲಕ ನಮ್ಮ ಬೆನ್ನ ಹಿಂದಿನ ಚರಿತ್ರೆಯನ್ನು ಭವಿಷ್ಯದ ಮಕ್ಕಳಿಗೆ ತಲುಪಿಸುವ ಕೆಲಸ ಆಗಬೇಕು. –ಮಾವಳ್ಳಿ ಶಂಕರ್

ಕಾರ್ಮಿಕರ ಸಾವು

ಮಧ್ಯಾಹ್ನದ ವೇಳೆಗೆ ತೆಂಗಿನಕಾಯಿ ಕೀಳಲು ಮುಂದಾಗಿದ್ದಾರೆ. ಕೃಷ್ಣ ತೆಂಗಿನ ಮರ ಹತ್ತಿ ಕಾಯಿಯನ್ನು ಕಿತ್ತು ನೆಲಕ್ಕೆ ಹಾಕುತ್ತಿದ್ದರೆ ಸ್ವಾಮಿ ಕಾಯಿಗಳನ್ನು ಒಂದೆಡೆ ಸಂಗ್ರಹಿಸುತ್ತಿದ್ದ.

ಈ ವೇಳೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದ ತಂತಿ ಬೇಲಿಯನ್ನು ಅರಿವಿಲ್ಲದೆ ಸ್ವಾಮಿ ಸ್ಪರ್ಶಿಸಿ ಜೋರಾಗಿ ಚೀರಲಾರಂಭಿಸಿದ್ದಾನೆ. ಇದನ್ನು ಕಂಡ ಕೃಷ್ಣ ಮರದಿಂದ ಕೆಳಗೆ ಹಾರಿ ಸ್ವಾಮಿ ರಕ್ಷಣೆಗೆ ಧಾವಿಸಿದ್ದಾನೆ ಈ ವೇಳೆ ಆತನಿಗೂ ವಿದ್ಯುತ್ ಸ್ಪರ್ಶಿಸಿ ಸ್ಥಳದಲ್ಲೇ ಇಬ್ಬರು ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಚಾಮರಾಜನಗರ ಗ್ರಾಮಾಂತರ ಠಾಣೆಯ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸೂಕ್ತ ಪರಿಹಾರಕ್ಕೆ ಒತ್ತಾಯ: ಘಟನೆಯಿಂದ ಕಂಗಾಲಾಗಿರುವ ಸಂತ್ರಸ್ತ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು. ಜಮೀನು ಗುತ್ತಿಗೆ ಪಡೆದಿರುವವರು ಸ್ಥಳಕ್ಕೆ ಬರಬೇಕು ಎಂದು ಗ್ರಾಮಸ್ಥರು ಪಟ್ಟು ಹಿಡಿದು ಮೃತದೇಹವನ್ನು ಸ್ಥಳದಿಂದ ಎತ್ತಲು ಒಪ್ಪದೆ ಪ್ರತಿಭಟನೆ ಮುಂದುವರೆಸಿದ್ದಾರೆ. ಪೊಲೀಸರು ಮತ್ತು ಗ್ರಾಮದ ಮುಖಂಡರು ಎಷ್ಟೇ ಮನವೊಲಿಸಿದರೂ ಕೇಳದೆ ಪ್ರತಿಭಟನೆ ನಡೆಸುತ್ತಿದ್ದಾರೆ.

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ತಮಿಳ್ನಾಡು ಎಸ್‌ಐ ಕುಟುಂಬ ದೋಚಿದ್ದ ಖದೀಮರ ಬಂಧನ



ಬಂಧಿತ ಮೂವರು ದರೋಡೆ ಆರೋಪಿಗಳು

ಮೈಸೂರು, ಅ. 14 (ಆರ್‌ಕೆ)–ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಚನ್ನಪಟ್ಟಣ ಬಳಿ ತಮಿಳುನಾಡಿನ ಸಬ್‌ಇನ್ಸ್‌ಪೆಕ್ಟರ್ ಕುಟುಂಬದ ಕಾರು ತಡೆದು ದೋಚಿದ್ದ ಮೂವರನ್ನು ಬಂಧಿಸಲಾಗಿದೆ.

ಚನ್ನಪಟ್ಟಣ ನಿವಾಸಿ ಸೈಯದ್ ಅಲೀಂ ಮಗ ಸೈಯದ್ ತನ್ವೀರ್ ಅಲಿಯಾಸ್ ತನ್ನು, ರಾಮನಗರ ನಿವಾಸಿ ಜಬಿವುಲ್ಲಾ ಮಗ ಫೈರೋಜ್ ಪಾಷ ಹಾಗೂ ಕೆಜ್ಜಲ ಗುಡ್ಡೆಯ ರಿಷಾದ್‌ಪಾಷ ಮಗ ತನ್ವೀರ್ ಪಾಷ ಬಂಧಿತ ಹೈವೇ ಖದೀಮರು. ಪ್ರಕರಣದ ತನಿಖೆ ನಡೆಸುತ್ತಿದ್ದ ಚನ್ನಪಟ್ಟಣ ಗ್ರಾಮಾಂತರ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಕೆ. ಪ್ರಕಾಶ್, ಸಬ್‌ಇನ್ಸ್‌ಪೆಕ್ಟರ್ ಬಿ. ಮನೋಹರ್, ಪ್ರೊಬೆಷನರಿ ಸಬ್‌ಇನ್ಸ್‌ಪೆಕ್ಟರ್ ಅಜಯ್‌ಗೌಡ, ಅಕ್ಕೂರು ಠಾಣೆ ಪ್ರೊಬೆಷನರಿ ಸಬ್‌ಇನ್ಸ್‌ಪೆಕ್ಟರ್ ಪ್ರಜ್ವಲ್ ಸಿಬ್ಬಂದಿಗಳಾದ ಶಿವಕುಮಾರ್, ಹನುಮಂತ ಶೆಟ್ಟಿ, ಎನ್.ಪಿ. ಶಿವು, ಪವನ್ ಕುಮಾರ್, ಪ್ರವೀಣ್ ಹಾಗೂ ಜಿಲ್ಲಾ ತಾಂತ್ರಿಕ ವಿಭಾಗದ ಮಹದೇವ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಆರೋಪಿಗಳನ್ನು ಬಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ತಮಿಳುನಾಡಿನ ನೀಲಗಿರಿ ಜಿಲ್ಲೆ ಚೇರಂಬಾಡಿ ಪೊಲೀಸ್ ಠಾಣೆಯಲ್ಲಿ ವಿಶೇಷ ಸಬ್ ಇನ್ಸ್‌ಪೆಕ್ಟರ್ ಆಗಿರುವ ಪಿ.ಜೆ. ಶಾಜಿಯವರು ತಮ್ಮ ಹಿರಿಯ ಪುತ್ರನನ್ನು ಕರೆದುಕೊಂಡು ಬರಲೆಂದು ಪತ್ನಿ ಮರ್ಲಿನ್ ಶಾಜಿ ಅವರೊಂದಿಗೆ ಅ. 7ರಂದು ಕಾರಿನಲ್ಲಿ ಬೆಂಗಳೂರಿಗೆ ಪ್ರಯಾಣಿಸುತ್ತಿದ್ದಾಗ ಮುಂಜಾನೆ ಎರಡು ಗಂಟೆ ವೇಳೆಗೆ ಚನ್ನಪಟ್ಟಣ ಬೈಪಾಸ್ ಬಳಿ ಸ್ಕೂಟರ್‌ನಲ್ಲಿ ಬಂದ ಮೂವರು ಕಾರು ಅಡ್ಡಗಟ್ಟಿ, ಚಾಕು ತೋರಿಸಿ, ಚಿನ್ನದ ಸರ, 10,000 ರೂ. ನಗದು ಹಾಗೂ ಎರಡು ಮೊಬೈಲ್ ಫೋನ್‌ಗಳನ್ನು ಕಿತ್ತುಕೊಂಡು ಪರಾರಿಯಾಗಿದ್ದರು. ಶಾಜಿಯವರು ಸ್ಥಳದಲ್ಲಿ ಗಸ್ತು ತಿರುಗುತ್ತಿದ್ದ ಪೊಲೀಸರಿಗೆ ನೀಡಿದ ಮಾಹಿತಿ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಿಕೊಂಡ ಚನ್ನಪಟ್ಟಣ ಗ್ರಾಮಾಂತರ ಠಾಣೆ ಪೊಲಿಸರು ಕಾರ್ಯಾಚರಣೆ ನಡೆಸಿ, ದೋಚಿದ್ದ ಮೊಬೈಲ್‌ಗಳು ರಾಮನಗರದವರೆಗೆ ಸಕ್ರಿಯವಾಗಿದ್ದನ್ನು ಗಮನಿಸಿ, ಆರೋಪಿಗಳ ಚಲನ–ವಲನಗಳ ಸುಳಿವು ಪಡೆದು. ನಂತರ ಅಲ್ಲಿನ ಸಿಸಿ ಟಿವಿ ದೃಶ್ಯಾವಳಿಗಳ ಆಧಾರದ ಮೇಲೆ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನಾಳೆಯಿಂದ ಸಾರಿಗೆ ನೌಕರರ ಮುಷ್ಕರ

ಬೆಂಗಳೂರು, ಅ.14–ವಿವಿಧ ಬೇಡಿಕೆಗಳ ಈಡರಿಕೆಗೆ ಆಗ್ರಹಿಸಿ ಆಗಸ್ಟ್‌ನಲ್ಲಿ ಸಾರಿಗೆ ನೌಕರರು ಮುಷ್ಕರಕ್ಕೆ ಮುಂದಾಗಿದ್ದರು. ಆದರೆ ಹೈಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಮುಷ್ಕರ ಕೈಬಿಟ್ಟಿದ್ದರು. ಆದರೆ, ಇದೀಗ ಮತ್ತೆ ನಾಳೆಯಿಂದ (ಅ.15) ಮುಷ್ಕರಕ್ಕೆ ಸಜ್ಜಾಗಿದ್ದಾರೆ. ಹೀಗಾಗಿ ದೀಪಾವಳಿ ಹಬ್ಬದ ನಡುವೆಯೇ ಸಾರಿಗೆ ಬಸ್ ಸಂಚಾರದಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆಗಳಿವೆ. ಇದರಿಂದ ನಾಳೆ ಬೇರೆ ಬೇರೆ ಊರಿಗೆ ಹೋಗುವವರು ಮನೆ ಬಿಡುವ ಮುನ್ನ ಬಸ್ ಸಂಚಾರ ಖಚಿತಪಡಿಸಿಕೊಳ್ಳುವುದು ಉತ್ತಮ.

ಆಗಸ್ಟ್ 5ರಂದು ಬಸ್ ನಿಲ್ಲಿಸಿ ಪ್ರತಿಭಟನೆ ನಡೆಸಲು ಸಾರಿಗೆ ನೌಕರರು ಮುಂದಾಗಿದ್ದರು. ಅದ್ರೆ, ಹೈಕೋರ್ಟ್ ಮುಷ್ಕರ ಮುಂದೂಡುವಂತೆ ಸೂಚಿಸಿತ್ತು. ಇದರಿಂದ ಮುಷ್ಕರ ಕೈಬಿಟ್ಟಿದ್ದರು. ಆದರೂ ಇಲ್ಲಿಯವರೆಗೂ ಸರ್ಕಾರ ಯಾವುದೇ ಬೇಡಿಕೆ ಈಡೇರಿಸಲು ಕ್ರಮಕೈಗೊಂಡಿಲ್ಲವೆಂದು ಆಕ್ರೋಶಗೊಂಡಿರುವ ಸಾರಿಗೆ ನೌಕರರು ಮತ್ತೆ ನಾಳೆಯಿಂದ (ಅ.14) ಹೋರಾಟ ನಡೆಸಲು ತೀರ್ಮಾನಿಸಿದ್ದಾರೆ. ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಬಸ್ ಬಂದ್ ಮಾಡಿ ಬೆಂಗಳೂರು,ಹುಬ್ಬಳಿ, ಹಾಗೂ ಕಲುಬುರಗಿಯಲ್ಲಿ ಸಾರಿಗೆ ನೌಕರರಿಂದ ಐದು ದಿನ ಉಪವಾಸ ಸತ್ಯಾಗ್ರಹ ನಡೆಸಲು ಸಜ್ಜಾಗಿದ್ದಾರೆ.

ಅತಿಥಿಗಳಿಗೆ ವಿಶೇಷ ಸ್ವಾಗತ...



ಮೈಸೂರಿನಲ್ಲಿ ನಡೆದ 50ನೇ ಸೀನಿಯರ್ ನ್ಯಾಷನಲ್ ಯೋಗ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಮೈಸೂರಿನ ಶ್ರೀನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಶಾಲಾ ಮಕ್ಕಳು ಉದ್ಘಾಟನಾ ನೃತ್ಯದಿಂದ ಅತಿಥಿ ಗಣ್ಯರನ್ನು ಸ್ವಾಗತಿಸಿದರು. ಈ ವೇಳೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಟಿ.ದೇವೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಶಾರ್ಜಾದಲ್ಲಿ ಬಂಡವಾಳ ಹೂಡಿದರೆ ಸ್ಥಳಾವಕಾಶದ ಜೊತೆಗೆ ಎಲ್ಲಾ ಮೂಲ ಸೌಕರ್ಯ ಭರವಸೆ

ಮೈಸೂರಿನಲ್ಲಿ ಬಿ2ಬಿ ಸಮಾವೇಶ; ಯುಎಇ ಸರ್ಕಾರದ ಪ್ರತಿನಿಧಿಗಳು ಭಾಗಿ



ಮೈಸೂರಿನ ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಮಂಗಳವಾರದಿಂದ ಎರಡು ದಿನಗಳ ಬಿ2ಬಿ (ಬಿಜಿನೆಸ್ ಟು ಬಿಜಿನೆಸ್) ಸಮಾವೇಶ ಆರಂಭಗೊಂಡಿದೆ. ಶಾರ್ಜಾ ವಾಣಿಜ್ಯ ಪ್ರತಿನಿಧಿಗಳನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಅ.14(ಬಿಎಲ್‌ಯು)– ಶಾರ್ಜಾದಲ್ಲಿ ಬಂಡವಾಳ ಹೂಡಲು ಯುಎಇ (ಯುನೈಟೆಡ್ ಅರಬ್ ಎಮಿರೇಟ್ಸ್) ಸರ್ಕಾರದ ಪ್ರತಿನಿಧಿಗಳು ಮೈಸೂರು, ಬೆಂಗಳೂರು ಸೇರಿದಂತೆ ಭಾರತದ ಉದ್ಯಮಿಗಳಿಗೆ ಮುಕ್ತ ಆಹ್ವಾನ ನೀಡಿದ್ದಾರೆ.

ಮೈಸೂರಿನ ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಇಂದಿನಿಂದ ಆರಂಭವಾಗಿರುವ ಎರಡು ದಿನಗಳ ಬಿ2ಬಿ (ಬಿಜಿನೆಸ್ ಟು ಬಿಜಿನೆಸ್) ಸಮಾವೇಶದಲ್ಲಿ ಭಾರತದ ಉದ್ಯಮಿಗಳು ಹಾಗೂ ಶಾರ್ಜಾ ಸರ್ಕಾರದ ಪ್ರತಿನಿಧಿಗಳು ಈ ಸಂಬಂಧ ಚರ್ಚೆ ನಡೆಸುತ್ತಿದ್ದಾರೆ.

ವಸ್ತುಗಳ ಉತ್ಪಾದನೆ, ಐಟಿ, ಬಿಟಿ ಸೇವೆ ಸೇರಿದಂತೆ ಇತರೆ ಕೈಗಾರಿಕೆಗಳ ಸ್ಥಾಪನೆಗೆ ಯುಎಇ ಯಲ್ಲಿ ಬಂಡವಾಳ ಹೂಡಿದರೆ ಸ್ಥಳಾವಕಾಶದ ಜೊತೆಗೆ ಮೂಲ ಸೌಕರ್ಯ ಕೂಡ ಕಲ್ಪಿಸುತ್ತೇವೆ. ಯುಎಇ ಯಲ್ಲಿ ಭಾರತದ ಉದ್ಯಮಿಗಳು ನಿರ್ಮಿಸುವ ಕೈಗಾರಿಕೆಗಳಲ್ಲಿ ಸ್ಥಳೀಯ ಕಾರ್ಮಿಕರ ನೇಮಕಕ್ಕೆ ಮುಕ್ತ ಅವಕಾಶ ನೀಡುತ್ತೇವೆ ಎಂದು ಭರವಸೆ ನೀಡಿದ್ದಾರೆ.

ಈ ಸಂಬಂಧ ಮೈಸೂರು, ಬೆಂಗಳೂರು ಸೇರಿದಂತೆ ಭಾರತದ ಉದ್ಯಮಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಎಫ್‌ಐಸಿಸಿಐ ಸಂಯೋಜಕ ಎಂ.ಸುನೀಲ್ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ವ್ಯಾಪಾರ ಮತ್ತು ವ್ಯವಹಾರವನ್ನು ಉತ್ತೇಜಿಸಲು ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಘ (ಎಫ್‌ಐಸಿಸಿಐ) ಮತ್ತು ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಘಗಳು ಈ ಸಮಾವೇಶ ಆಯೋಜಿಸಿವೆ. ಯುಎಇ ಮೂಲಕ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಿಮ್ಮ ವ್ಯಾಪಾರ ವಿಸ್ತರಿಸಿ ಎಂಬ ಧ್ಯೇಯವಾಕ್ಯ ಇಟ್ಟುಕೊಂಡು ಈ ಸಮಾವೇಶ ನಡೆಸಲಾಗುತ್ತಿದೆ. ಇಂದಿನ ಸಮಾವೇಶ ಯಶಸ್ವಿಗೊಂಡು ವ್ಯಾಪಾರ, ವ್ಯವಹಾರದಲ್ಲಿ ಪರಸ್ಪರ ಒಪ್ಪಂದ ಏರ್ಪಟ್ಟರೆ ಶೇಕಡ 97ರಷ್ಟು ಭಾರತದ ಸರಕುಗಳಿಗೆ ಆಫ್ರಿಕಾ, ಯೂರೋಪ್ ಮತ್ತು ಇತರೆ ದೇಶಗಳಲ್ಲಿ ವಿಸ್ತರಣೆ ಗೊಳ್ಳುತ್ತದೆ. ಶಾರ್ಜಾವನ್ನು ಅಲಿ ಮೊಹಮ್ಮದ್ ಅಬ್ದುಲ್ಲಾ ಅಲ್ ಮುಲ್ಲಾಥ್ವಾ ಅಲ್ ಅಲಿ ಹಾಗೂ ಅನೂಪ್ ಅಪ್ಪು ವಾರೀರ್ ಪ್ರತಿನಿಧಿಸಿದ್ದಾರೆ. ಮೈಸೂರು, ಬೆಂಗಳೂರು ಸೇರಿದಂತೆ ಭಾರತದ ಹಲವು ಉದ್ಯಮಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದು, ಸಮಾವೇಶ ನಾಳೆಯೂ ಮುಂದುವರೆಯುತ್ತದೆ.

ಈಜು: ಚಿನ್ನ ಗೆದ್ದ ಪ್ರತಿಭಾ ಗೌತಮ್



ಮೈಸೂರು, ಅ. 14– ಮಂಗಳೂರಿನ ಲೇಡಿಹಿಲ್‌ನಲ್ಲಿರುವ ಸಿಟಿ ಕಾರ್ಪೊರೇಷನ್ ಈಜುಕೊಳದಲ್ಲಿ ಮಂಗಳೂರಿನ ಮಂಗಳ ಈಜು ಕ್ಲಬ್ ಆಯೋಜಿಸಿದ್ದ ರಾಜ್ಯ ಮಟ್ಟದ ಈಜು ಸ್ಪರ್ಧೆ–2025ರ'ಲ್ಲಿ ಮೈಸೂರಿನ ಪ್ರತಿಭಾ ಗೌತಮ್ ಎರಡು ಪದಕಗಳನ್ನು ಗೆದ್ದಿದ್ದಾರೆ.

50 ಮೀಟರ್ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಮಾಸ್ಟರ್ಸ್ ವಿಭಾಗದಲ್ಲಿ ಚಿನ್ನದ ಪದಕ ಮತ್ತು 50 ಮೀಟರ್ ಫ್ರೀಸ್ಟೈಲ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದಾರೆ. ಕರ್ನಾಟಕ ಈಜು ಸಂಘ (ಕೆಎಸ್‌ಎ) ವತಿಯಿಂದ ಬೆಂಗಳೂರಿನಲ್ಲಿ ನಡೆಯಲಿರುವ 26ನೇ ರಾಜ್ಯ ಮಾಸ್ಟರ್ಸ್ ಈಜು ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸುವ ಗುರಿ ಹೊಂದಿದ್ದಾರೆ. ಅವರು ಪ್ರಸ್ತುತ ಮೈಸೂರಿನ MASP ಅಕ್ವಾಟಿಕ್ ಕ್ಲಬ್‌ನಲ್ಲಿ ಹಿರಿಯ ತರಬೇತುದಾರ ಆಲ್ಬರ್ಟ್ ಸೆಬಾಸ್ಟಿಯನ್ ಮತ್ತು ಸಹಾಯಕ ತರಬೇತುದಾರ ಮನೋಜ್ (ಮನು) ಮತ್ತು ಶ್ರೀ ಸಾಯಿ ಸಮರ್ಥ್ ಅವರ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಗಣತಿದಾರರ ಸಮಸ್ಯೆ ನಿವಾರಣೆಗೆ ಆಗ್ರಹಿಸಿ ಡಿಸಿಗೆ ಶಿಕ್ಷಕರ ಪ್ರತಿನಿಧಿಗಳ ಮನವಿ



ಪಡಿತರ ಚೀಟಿ ಆಧಾರದಲ್ಲಿ ಸಮೀಕ್ಷೆ ನಡೆಸುವ ವೇಳೆ ಗಣತಿದಾರರಿಗೆ ಆಗುತ್ತಿರುವ ಸಮಸ್ಯೆ ಬಗೆಹರಿಸುವಂತೆ ಶಿಕ್ಷಕ ಸಂಘಟನೆ ಮುಖಂಡರು ಒತ್ತಾಯಿಸಿದರು.

ಮೈಸೂರು,ಅ.14(ಎಸ್‌ಪಿಎನ್)– ಪಡಿತರ ಚೀಟಿ ಆಧಾರದಲ್ಲಿ ಸಮೀಕ್ಷೆ ನಡೆಸುವ ವೇಳೆ ಗಣತಿದಾರರಿಗೆ ಆಗುತ್ತಿರುವ ಸಮಸ್ಯೆಯನ್ನು ಬಗೆಹರಿಸುವಂತೆ ಒತ್ತಾಯಿಸಿ ಮೈಸೂರು ಜಿಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಪ್ರೌಢಶಾಲಾ ಶಿಕ್ಷಕರ ಸಂಘ, ಸರ್ಕಾರಿ ನೌಕರರ ಸಂಘ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಪದಾಧಿಕಾರಿಗಳು, ಜಿಲ್ಲಾಧಿಕಾರಿ ಜೆ.ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಮೈಸೂರು ಜಿಲ್ಲೆಯಲ್ಲಿ ವಿತರಣೆಯಾಗಿರುವ ರೇಷನ್ ಕಾರ್ಡ್‌ನಲ್ಲಿ 33 ಲಕ್ಷ ಮಂದಿ ಸದಸ್ಯರು ನೋಂದಣಿಯಾಗಿದ್ದು, ಇದರಲ್ಲಿ 27 ಲಕ್ಷ ಮಂದಿ ಸಮೀಕ್ಷೆಗೊಳಪಟ್ಟಿದ್ದಾರೆ. ಆದರೆ, ಇನ್ನುಳಿದ 6 ಲಕ್ಷ ಮಂದಿ ಸಮೀಕ್ಷೆಯಿಂದ ದೂರ ಉಳಿದಿದ್ದು, ಈ ಸದಸ್ಯರನ್ನು ಸಹಿತ ಸಮೀಕ್ಷೆಗೊಳಪಡಿಸುವಂತೆ ಸೂಪರ್ ವೈಸರ್‌ಗಳು, ಗಣತಿದಾರರ ಮೇಲೆ ಒತ್ತಡ ಹಾಕುತ್ತಿದ್ದಾರೆ. ಈ ಸಮೀಕ್ಷೆಗೆ ಯಾವುದೇ ಸದಸ್ಯರ ಮನೆ ವಿಳಾಸಪಟ್ಟಿಗಳನ್ನೂ ಗಣತಿದಾರರಿಗೆ ಒದಗಿಸದೇ ಅವೈಜ್ಞಾನಿಕವಾಗಿ ಸಮೀಕ್ಷೆ ಮಾಡುವಂತೆ ಗಣತಿದಾರರ ಮೇಲೆ ಒತ್ತಡ ಹಾಕುತ್ತಿರುವುದಕ್ಕೆ ಶಿಕ್ಷಕ ಸಂಘಟನೆಗಳ ಮುಖಂಡರು ವಿರೋಧ ವ್ಯಕ್ತಪಡಿಸಿದ್ದಾರೆ.

ರೇಷನ್ ಕಾರ್ಡ್ ನೋಂದಣಿ ಪ್ರಕಾರ ಸದಸ್ಯರನ್ನು ಸಮೀಕ್ಷೆಗೊಳಪಡಿಸಲು ವೈಜ್ಞಾನಿಕ ಪಟ್ಟಿಯನ್ನು ಗಣತಿದಾರರಿಗೆ ಒದಗಿಸಬೇಕು ಹಾಗೂ ಆ ಮನೆಗಳನ್ನು ಗುರುತಿಸುವ ಜವಾಬ್ದಾರಿಯನ್ನು ಕಂದಾಯ ಇಲಾಖೆಗೆ ವಹಿಸಿಕೊಡಬೇಕು ಎಂದು ಒತ್ತಾಯಿಸಿದ್ದರು. ಜಿಪಂ ಆವರಣದಲ್ಲಿ ಜಮಾವಣೆಗೊಂಡಿದ್ದ ಶಿಕ್ಷಕರ ಸಂಘಟನೆಗಳ ಮುಖಂಡರಿದ್ದ ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿ ಜೆ.ಲಕ್ಷ್ಮೀಕಾಂತರೆಡ್ಡಿ, ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್ ಗಣತಿದಾರರ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರು.

ಈ ವೇಳೆ ಮೈಸೂರು ಜಿಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸೋಮೇಗೌಡ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಅರುಣ್‌ಕುಮಾರ್, ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ರವಿಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪ್ರತಾಪ್‌ಸಿಂಹ ವಿರುದ್ಧ ಭಾರತ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ ಪ್ರತಿಭಟನೆ



ಭಾರತ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ ವತಿಯಿಂದ ಮೈಸೂರಿನ ಅಗ್ರಹಾರ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಅ.14(ಎಂಕೆ)–ರಾಜ್ಯ ಕಾಂಗ್ರೆಸ್ ನಾಯಕರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಮಾಜಿ ಸಂಸದ ಪ್ರತಾಪ್‌ಸಿಂಹ ನಡೆ ಖಂಡಿಸಿ, ಭಾರತ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ ವತಿಯಿಂದ ಮೈಸೂರಿನ ಅಗ್ರಹಾರ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮಾಜಿ ಸಂಸದ ಪ್ರತಾಪ್‌ಸಿಂಹ ಭಾವಚಿತ್ರಗಳನ್ನು ಹಿಡಿದು ಧಿಕ್ಕಾರ ಕೂಗಿದ ಪ್ರತಿಭಟನಾಕಾರರು, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಹಾಗೂ ಸಚಿವರಾದ ಸಂತೋಷ್‌ಲಾಡ್ ಮತ್ತು ಪ್ರಿಯಾಂಕ್‌ಖರ್ಗೆ, ಶಾಸಕ ಪ್ರದೀಪ್ ಈಶ್ವರ್, ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಮಾಜಿ ಸಂಸದ ಪ್ರತಾಪ್‌ಸಿಂಹ, ಕೂಗುಮಾರಿಯಂತೆ ವರ್ತಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ನಾಯಕರ ತೇಜೋವಧೆ ಮಾಡುತ್ತಿರುವ ಪ್ರತಾಪ್‌ಸಿಂಹ ವರ್ತನೆ ಮಿತಿಮೀರಿದೆ. ಇದೇ ರೀತಿ ಕಾಂಗ್ರೆಸ್ ನಾಯಕರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದರೆ, ಮುಂದಿನ ದಿನಗಳಲ್ಲಿ ತಕ್ಕಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಭಾರತ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ ಯೂತ್ ವಿಂಗ್‌ನ ಉಪಾಧ್ಯಕ್ಷ ನಾಗರಾಜ್, ಕಾರ್ಯದರ್ಶಿ ಪುಟ್ಟರಾಜು, ಮೈಸೂರು ಗ್ರಾಮಾಂತರ ಅಧ್ಯಕ್ಷ ಮಧು, ನಗರಾಧ್ಯಕ್ಷ ಎಸ್.ಮದನ್‌ಕುಮಾರ್, ಉಪಾಧ್ಯಕ್ಷ ಧನಗಳ್ಳಿ ನಾರಾಯಣ್, ಪ್ರಶಾಂತ್, ರಹೀಂ, ಚಂದ್ರಶೇಖರ್, ಸುನೀಲ್, ನಾರಾಯಣ್, ಬಾಬು, ಬಸವಣ್ಣ, ಹೇಮಂತ್, ಸುನೀಲ್ ಮತ್ತಿತರರಿದ್ದರು.

ಬಾಲಕಿ ಅತ್ಯಾಚಾರ–ಕೊಲೆ ಖಂಡಿಸಿ ಕನ್ನಡಾಂಬೆ ರಕ್ಷಣಾ ವೇದಿಕೆ ಪ್ರತಿಭಟನೆ



ಮೈಸೂರಿನ ಗಾಂಧಿಚೌಕದ ಮುಂಭಾಗ ಬಲೂನ್ ಮಾರಾಟ ಮಾಡಲು ಬಂದಿದ್ದ ಬಾಲಕಿ ಮೇಲೆ ಅತ್ಯಚಾರವೆಸಗಿ ಕೊಲೆಗೈದಿರುವ ಪ್ರಕರಣ ಖಂಡಿಸಿ, ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಅ.14(ಜಿಎ)–ಮೈಸೂರಿನಲ್ಲಿ ಬಲೂನ್ ಮಾರಾಟ ಮಾಡಲು ಬಂದಿದ್ದ ಬಾಲಕಿ ಮೇಲೆ ಅತ್ಯಚಾರವೆಸಗಿ ಕೊಲೆಗೈದಿರುವ ಘಟನೆ ಖಂಡಿಸಿ, ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಗಾಂಧಿಚೌಕದ ಮುಂಭಾಗ ಜಮಾವಣೆಗೊಂಡ ವೇದಿಕೆಯ ಪದಾಧಿಕಾರಿಗಳು 'ಕಾರ್ಮಿಕ ಇಲಾಖೆ ಬಾಲಕಿ ಕುಟುಂಬದೊಂದಿಗೆ ಇರಬೇಕು', 'ಕೃತ್ಯ ಎಸಗಿದ ಅಪರಾಧಿಗೆ ಗಲ್ಲು ಶಿಕ್ಷೆ ವಿಧಿಸಬೇಕು' ಎಂದು ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ವೇದಿಕೆ ರಾಜ್ಯಾಧ್ಯಕ್ಷ ರಾಜಶೇಖರ್ ಮಾತನಾಡಿ, ಮೈಸೂರು ಎಂದರೆ ವಿಶ್ವದ ಮಟ್ಟದಲ್ಲಿ ವಿಶೇಷ ಗೌರವವಿದೆ. ಆದರೆ, ಇಂತಹ ನಗರದಲ್ಲಿ ಬಾಲಕಿ ಮೇಲೆ ಅತ್ಯಚಾರ ಎಸಗಿ ಕೊಲೆ ಮಾಡಿರುವುದು ಖಂಡನಾರ್ಹ. ಮೈಸೂರಿನ ಪೊಲೀಸರ ಬಗ್ಗೆ ಯಾರು ಪ್ರಶ್ನಿಸುವಂತಿಲ್ಲ. ಕೃತ್ಯ ಎಸಗಿದ ಪಾಪಿಯನ್ನು ಕೆಲವೇ ಗಂಟೆಯಲ್ಲಿ ಸೆರೆ ಹಿಡಿದು, ಮತ್ತೊಂದೆಡೆ ಇದೇ ಸ್ಥಳದಲ್ಲಿ ಕೊಲೆ ಮಾಡಿದ ಆರೋಪಿಗಳನ್ನು ಸೆರೆ ಹಿಡಿಯುವ ಮೂಲಕ ತಮ್ಮ ದಕ್ಷತೆ ಪ್ರದರ್ಶಿಸಿದ್ದಾರೆ ಎಂದು ತಿಳಿಸಿದರು.

ಕೃತ್ಯ ಎಸಗಿದ ಪಾಪಿಗೆ ಮೂರು ತಿಂಗಳೊಳಗೆ ಗಲ್ಲು ಶಿಕ್ಷೆಗೆ ಒಳಪಡಿಸಬೇಕು. ರಾಜ್ಯ ಸರ್ಕಾರ ಆರ್ಥಿಕ ಸಹಕಾರ ನೀಡಬೇಕು, ಕಾರ್ಮಿಕ ಇಲಾಖೆ ಕುಟುಂಬದ ಜೊತೆ ನಿಂತು ಆರ್ಥಿಕವಾಗಿ ಸಹಾಯ ಮಾಡಬೇಕು. ಮೈಸೂರು ಜಿಲ್ಲೆಯಲ್ಲಿ ಈ ರೀತಿ ಪ್ರಕರಣಗಳು ಮರುಕಳಿದಂತೆ ಪೊಲೀಸ್ ಇಲಾಖೆ ಕ್ರಮ ವಹಿಸಬೇಕು ಮತ್ತು ಮೈಸೂರಿನ ಘನತೆ ಉಳಿಸಿ ಉಳಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ವೇದಿಕೆಯ ಡಿಪಿಕೆ ಪರಮೇಶ್, ರಾಜ್ಯ ಖಜಾಂಚಿ ನಂಜುಂಡ, ಮೈಸೂರು ಜಿಲ್ಲಾ ಅಧ್ಯಕ್ಷ ಸಂತೋಷ್, ಜಿಲ್ಲಾ ಮಹಿಳಾ ವಿಭಾಗದ ಅಧ್ಯಕ್ಷೆ ಮಂಜುಳ, ಪದಾಧಿಕಾರಿಗಳಾದ ಸಿಂಧುವಳ್ಳಿ ಶಿವಕುಮಾರ್, ಮನುಗೌಡ, ಸೋಮಶೇಖರ, ಗೌತಮ್, ಅನುರಾಜ್‌ಗೌಡ, ಮಂಜುನಾಥ್, ಸಿದ್ದೇಗೌಡ, ಕಿಕ್ಕೇರಿ ಕಿರಣ, ಶಿವಕುಮಾರ್, ಹೊನ್ನೇಗೌಡ, ರವಿಗೌಡ, ನಾಗರಾಜು, ರಾಜೇಗೌಡ, ಮಹದೇವಸ್ವಾಮಿ, ನೇಹ, ಗುಂಗ್ರಾಲ್ ಛತ್ರ ಲೋಕೇಶ್, ಕಿರಣ ಮತ್ತಿತರರು ಪಾಲ್ಗೊಂಡಿದ್ದರು.

ಸಿಜೆಐ ಮೇಲೆ ಶೂ ಎಸೆಯಲೆತ್ನ ಖಂಡಿಸಿ ಕಾಂಗ್ರೆಸ್ ಸಂಶೋಧನಾ ವಿಭಾಗದಿಂದ ಪ್ರತಿಭಟನೆ



ಮೈಸೂರು ಜಿಲ್ಲಾ ಕಾಂಗ್ರೆಸ್ ಸಂಶೋಧನಾ ಮತ್ತು ತರಬೇತಿ ವಿಭಾಗದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಅ.14(ಎಂಕೆ)–ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ವಕೀಲ ರಾಕೇಶ್ ಕಿಶೋರ್ ಶೂ ಎಸೆಯಲೆತ್ನಿಸಿದ್ದನ್ನು ಖಂಡಿಸಿ, ಮೈಸೂರು ಜಿಲ್ಲಾ ಕಾಂಗ್ರೆಸ್ ಸಂಶೋಧನಾ ಮತ್ತು ತರಬೇತಿ ವಿಭಾಗದ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಬನ್ನೂರು ರಸ್ತೆಯಲ್ಲಿರುವ ಮೈಮುಲ್‌ನ ಹಳೇ ಡೈರಿ ಬಳಿಯಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಕಾಲ್ನಡಿಗೆ ಜಾಥಾ ನಡೆಸಿದ ಪ್ರತಿಭಟನಾಕಾರರು, ವಕೀಲ ರಾಕೇಶ್ ಕಿಶೋರ್ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸದರಲ್ಲದೆ ಕೂಡಲೇ ಆತನನ್ನು ಬಂಧಿಸುವಂತೆ ಆಗ್ರಹಿಸಿದರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಸಂಶೋಧನಾ ವಿಭಾಗದ ಅಧ್ಯಕ್ಷ ಡಾ.ಎಂ.ನಾಗರಾಜು ಮಾತನಾಡಿ, ವಕೀಲ ರಾಕೇಶ್ ಕಿಶೋರ್, ಸಿಜೆಐ ಗವಾಯಿ ಅವರನ್ನು ಗುರಿಯಾಗಿಟ್ಟುಕೊಂಡು ಶೂ ಎಸೆದದ್ದು ಆಘಾತಕಾರಿ ಘಟನೆಯಾಗಿದ್ದು, ನ್ಯಾಯಾಂಗ ವ್ಯವಸ್ಥೆಯ ಮೇಲೆ ನಡೆದ ಕೃತ್ಯವಾಗಿದೆ. ಇತಿಹಾಸದಲ್ಲಿಂಯೇ ಇಂದೊಂದು ಕಪ್ಪುಚುಕ್ಕೆಯಾಗಿದ್ದು, ಕೂಡಲೇ ಆತನನ್ನು ಬಂಧಿಸಬೇಕು. ಇಲ್ಲವೇ ದೇಶದಿಂದಲೇ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು.

ರಾಷ್ಟ್ರಪತಿಗೆ ಮನವಿ: ಬಳಿಕ ವಕೀಲ ರಾಕೇಶ್‌ಕುಮಾರ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗೆ ಮನವಿ ಪತ್ರ ಸಲ್ಲಿಸಲಾಯಿತು. ಮುಖಂಡರಾದ ಎಸ್.ವಿ. ಶಂಕರ್, ಸಿದ್ದರಾಜು, ಪ್ರೊ.ಮಹೇಶ್, ಚಿಕ್ಕಂದಾನಿ, ಲಿಂಗರಾಜು, ವಸಂತ್ ಕುಮಾರ್, ರಾಮಚಂದ್ರ, ಲೋಕೇಶ್ವರ್, ಶಂಭುಲಿಂಗಸ್ವಾಮಿ, ಕೆ.ಪಿ.ವೆಂಕಟೇಶ್, ಭರತ್‌ರಾಜ್, ವೆಂಕಟರಾಜು, ಮಲ್ಲೇಶ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಗಾಂಧೀಜಿ ವಿಚಾರಧಾರೆ ದ್ವೇಷ ಹರಡಲು ಬಳಕೆ!

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ನಿರ್ದೇಶಕ ಪ್ರೊ.ಜಿ.ಬಿ.ಶಿವರಾಜು ಎಚ್ಚರಿಕೆ



ಮೈಸೂರು ವಿವಿ ಮಾನಸ ಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ಮಹಾತ್ಮ ಗಾಂಧೀಜಿ ಅವರ 156ನೇ ಜಯಂತಿ ಕಾರ್ಯಕ್ರಮವನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ನಿರ್ದೇಶಕ ಪ್ರೊ.ಜಿ.ಬಿ.ಶಿವರಾಜು ಉದ್ಘಾಟಿಸಿದರು. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮತ್ತಿತರರಿದ್ದರು.

ಮೈಸೂರು, ಅ.14(ಎಂಕೆ)– ಅಸ್ಪೃಶ್ಯರ ಮೇಲೆ ಇಷ್ಟು ವರ್ಷಗಳ ಕಾಲ ನಾವು ನಡೆಸಿರುವ ದೌರ್ಜನ್ಯವೇ ಸಾಕು. ಅದನ್ನು ನಿಲ್ಲಿಸಬೇಕು ಎಂದು ಕರೆ ಕೊಟ್ಟ ಮಹಾತ್ಮ ಗಾಂಧೀಜಿ ಅವರ ವಿಚಾರಧಾರೆಯನ್ನು ಘರ್ಷಣೆಗೆ ಬಳಕೆ ಮಾಡುತ್ತಿರುವುದು ಅಪಾಯಕಾರಿ ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ನಿರ್ದೇಶಕ ಪ್ರೊ.ಜಿ.ಬಿ.ಶಿವರಾಜು ಎಚ್ಚರಿಸಿದರು.

ಮೈಸೂರು ವಿವಿ ಮಾನಸ ಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ಗಾಂಧಿ ಅಧ್ಯಯನ ಕೇಂದ್ರ, ಸಮಾಜಕಾರ್ಯ ಅಧ್ಯಯನ ವಿಭಾಗ ಹಾಗೂ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಸಹಯೋಗದೊಂದಿಗೆ ಆಯೋಜಿಸಿದ್ದ ಮಹಾತ್ಮ ಗಾಂಧೀಜಿ ಅವರ 156ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ 'ರಾಷ್ಟ್ರ ನಿರ್ಮಾಣದಲ್ಲಿ ಅಸ್ಪೃಶ್ಯತಾ ನಿವಾರಣೆಯ ಹೊಣೆಗಾರಿಕೆ; ಗಾಂಧೀಜಿ ಚಿಂತನೆ, ಪ್ರಯೋಗ ಮತ್ತು ಪ್ರಸ್ತುತತೆ ವಿಚಾರ ಕುರಿತು ಮಾತನಾಡಿದ ಅವರು, ಸಂತರು, ದಾರ್ಶನಿಕರು, ಸಮಾಜಕ್ಕೆ ದಿಕ್ಕು ತೋರಿದ ನಾಯಕರ ಗೋರಿ ಅಗೆಯುವುದನ್ನು ನಿಲ್ಲಿಸಬೇಕು ಎಂದರು.

> ಸರಳತೆ, ಅಹಿಂಸೆ ಮತ್ತು ಸಭ್ಯತೆ ಮಾರ್ಗದಿಂದ ಜಗತ್ತನ್ನು ಗೆಲ್ಲಬಹುದು ಎಂದ ಗಾಂಧೀಜಿ ಮತ್ತು ಅಂಬೇಡ್ಕರ್ ಆದರ್ಶ ಎಲ್ಲಾ ಕಾಲಕ್ಕೂ ಪ್ರಸ್ತುತತೆಯಾಗಿವೆ. ಇಂತಹ ಮಹನೀಯರ ನುಡಿಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. –ಪ್ರೊ.ಶಿವರಾಜು.

ಗಾಂಧೀಜಿ ಬಗ್ಗೆ ಸಾಮಾನ್ಯ ಮಾಹಿತಿ ಇಲ್ಲದವರು ಟೀಕೆ ಮಾಡುತ್ತಾರೆ. ಸಾಮಾಜಿಕ ಜಾಲತಾಣದಲ್ಲಿ ಅಂಬೇಡ್ಕರ್, ಗಾಂಧೀಜಿ ಬಗ್ಗೆ ಕೆಟ್ಟದಾಗಿ ಬಿಂಬಿಸಲಾಗುತ್ತಿದೆ. ಟಿಆರ್‌ಪಿಗಾಗಿ ಸಾಮಾಜಿಕ ಜಾಲತಾಣದಲ್ಲಿ ಆಕರ್ಷಿಸುವ ವಿಡಿಯೋಗಳಿಂದ ಮಕ್ಕಳ ಮುಗ್ಧ ಮನಸ್ಸನ್ನು ಹಾಳು ಮಾಡುತ್ತಿದ್ದಾರೆ ಎಂದು ವಿಷಾಧ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಮಾತನಾಡಿ, ಗಾಂಧೀಜಿ ಅವರದ್ದು ಮೇರು ವ್ಯಕ್ತಿತ್ವ, ಅವರ ಆದರ್ಶಗಳು, ಚಿಂತನೆ ಸದಾ ಸ್ಮರಣೀಯ. ಪ್ರೀತಿ, ಅಹಿಂಸೆ ತತ್ವಗಳನ್ನು ಅಳವಡಿಸಿಕೊಂಡು ಮುನ್ನಡೆಯಬೇಕು. ಒಗ್ಗಟ್ಟಿನಿಂದ ಬಾಳಿ ಎಂದ ಮಹನೀಯರ ಕೊಡುಗೆಯ ಫಲದಲ್ಲಿ ನಾವಿದ್ದೇವೆ ಎಂದು ಸ್ಮರಿಸಿದರು.

ಸಮಾಜ ಕಾರ್ಯ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಆರ್.ಶಿವಪ್ಪ, ಸಮಾಜಶಾಸ್ತ್ರ ಅಧ್ಯಯನ ವಿಭಾಗ ಮುಖ್ಯಸ್ಥೆ ಡಾ.ಎಸ್.ಯಶೋಧ, ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ನರೇಂದ್ರಕುಮಾರ್ ಮತ್ತಿತರರಿದ್ದರು.

ಆರೂಣಿ ಗಹನ್ ಗಣಪತಿಗೆ ಬಹುಮಾನ



ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ಆಯೋಜಿಸಿದ್ದ ಪಾಜೊ ಅಂತರ ಶಾಲಾ ಚೆಸ್ ಸ್ಪರ್ಧೆಯಲ್ಲಿ ಮೈಸೂರಿನ ಶ್ರೀನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಆರೂಣಿ ಗಹನ್ ಗಣಪತಿ ಭಾಗವಹಿಸಿ 1ರಿಂದ 4ನೇ ತರಗತಿ ವಿಭಾಗದಲ್ಲಿ 2ನೇ ಸ್ಥಾನವನ್ನು ಗಳಿಸಿದ್ದಾನೆ. ಆತನಿಗೆ ಪ್ರಮಾಣಪತ್ರ, ಟ್ರೋಫಿ ಹಾಗೂ ಪಾಜೊ ಬ್ಯಾಗ್ ನೀಡಿ, ಗೌರವಿಸಲಾಗಿದೆ.

ದೇಶ - ವಿದೇಶ

ಹಿರಿಯ ನಕ್ಸಲೀಯ ನಾಯಕ ಭೂಪತಿ ಸೇರಿ 60 ಮಂದಿ ಶರಣಾಗತಿ!



ಮುಂಬೈ: ಮಹಾರಾಷ್ಟ್ರದಲ್ಲಿ ನಕ್ಸಲ್ ನಿಗ್ರಹ ಕಾರ್ಯಾಚರಣೆಯಲ್ಲಿ ಮಹತ್ವದ ಬೆಳವಣಿಗೆ ನಡೆದಿದ್ದು, ನಕ್ಸಲರ ಗುಂಪೊಂದು ಸಾಮೂಹಿಕ ಶರಣಾಗತಿಯಾಗಿದೆ.

ಮಹಾರಾಷ್ಟ್ರದ ಗಡ್ಚಿರೋಲಿಯಲ್ಲಿ ಹಿರಿಯ ನಕ್ಸಲೀಯ ನಾಯಕ ಭೂಪತಿ ಸೇರಿದಂತೆ 60 ಇತರ ನಕ್ಸಲರು ಪೊಲೀಸರಿಗೆ ಶರಣಾಗಿದ್ದಾರೆ. ಶರಣಾದ ನಕ್ಸಲೀಯರಲ್ಲಿ ಅವರ ನಾಯಕ ಮಲ್ಲೋಜುಲ ವೇಣು ಗೋಪಾಲ್ ಅಲಿಯಾಸ್ ಭೂಪತಿ ಶಸ್ತ್ರಾಸ್ತ್ರ ತ್ಯಜಿಸಿ, ಇತರ 60 ಕಾರ್ಯಕರ್ತರೊಂದಿಗೆ ಪೊಲೀಸರಿಗೆ ಶರಣಾಗಿದ್ದಾರೆ. ಭೂಪತಿ, ಕೇಂದ್ರ ಸಮಿತಿ ಸದಸ್ಯರು, ವಿಭಾಗೀಯ ಸಮಿತಿ ಹತ್ತು ಸದಸ್ಯರು ಸೇರಿದಂತೆ ಕಾರ್ಯಕರ್ತರೊಂದಿಗೆ ಮಹಾರಾಷ್ಟ್ರದ ಗಡ್ಚಿರೋಲಿ ಜಿಲ್ಲೆಯಲ್ಲಿ ಪೊಲೀಸರ ಮುಂದೆ ಶರಣಾಗಿದ್ದಾರೆ. ಭೂಪತಿ ಅಲಿಯಾಸ್ ಸೋನು ಮಾವೋವಾದಿ ಸಂಘಟನೆಯಲ್ಲಿ ಅತ್ಯಂತ ಪ್ರಭಾವಶಾಲಿ ತಂತ್ರಜ್ಞರಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟಿದ್ದರು ಮತ್ತು ಮಹಾರಾಷ್ಟ್ರ–ಛತ್ತೀಸ್‌ಗಢ ಗಡಿಯಲ್ಲಿ ಪ್ಲಟೂನ್ ಕಾರ್ಯಾಚರಣೆಗಳನ್ನು ದೀರ್ಘಕಾಲ ಮೇಲ್ವಿಚಾರಣೆ ಮಾಡಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಲೆಕ್ಟ್ರಿಕ್ ಕಾರಿನ ಡೋರ್ ಜಖಂ, ಒಳಗಿದ್ದ ಚಾಲಕ ಸಜೀವ ದಹನ



ಚೆಂಗ್ಡು: ಚೀನಾದಲ್ಲಿ ಎಲೆಕ್ಟ್ರಿಕ್ ಕಾರು ದುರಂತ ಸಂಭವಿಸಿದ್ದು, Xiaomi ಎಲೆಕ್ಟ್ರಿಕ್ ಕಾರೊಂದು ಬೆಂಕಿಗಾಹುತಿಯಾಗಿ ಅದರಲ್ಲಿದ್ದ ಚಾಲಕ ಸಜೀವ ದಹನವಾಗಿರುವ ಘಟನೆ ವರದಿಯಾಗಿದೆ. ನೈಋತ್ಯ ಚೀನಾದ ಚೆಂಗ್ಡುವಿನಲ್ಲಿ ಈ ದುರಂತ ಸಂಭವಿಸಿದ್ದು, Xiaomi ಸಂಸ್ಥೆಯ SU7 ಎಲೆಕ್ಟ್ರಿಕ್ ಸೆಡಾನ್ ಕಾರು ಅಪಘಾತಕ್ಕೀಡಾಗಿ ಬೆಂಕಿ ಹೊತ್ತುಕೊಂಡಿದೆ. ಅಲ್ಲದೆ ಕಾರಿನ ಡೋರ್‌ಲಾಕ್ ಆಗಿ ಜಖಂ ಆದ ಕಾರಣ ಕಾರಿನ ಒಳಗಿದ್ದ ಚಾಲಕ ಹೊರಬರಲಾಗದೇ ಸಜೀವ ದಹನರಾಗಿದ್ದಾರೆ. ಚಾಲಕ ಕುಡಿದು ವಾಹನ ಚಾಲನೆ ಮಾಡಿದ ಪರಿಣಾಮ ಅಪಘಾತ ಸಂಭವಿಸಿ ಕಾರಿನ ಡೋರ್ ಜಾಮ್ ಆಗಿ ಕಾರಿನಲ್ಲಿ ಬೆಂಕಿ ಹೊತ್ತಿಕೊಂಡಿದೆ. ವಿಚಾರ ತಿಳಿದ ಕೂಡಲೇ ಪೊಲೀಸರು ಸ್ಥಳಕ್ಕೆ ದೌಡಾಯಿಸಿದರಾದರೂ ಚಾಲಕನನ್ನು ರಕ್ಷಿಸಲಾಗಲಿಲ್ಲ. ವಾಹನ ಸವಾರ ಸಾವನ್ನಪ್ಪಿದ್ದಾನೆ. 31 ವರ್ಷದ ಡೆಂಗ್ ಎಂಬ ಉಪನಾಮ ಹೊಂದಿರುವ ಚಾಲಕ ಮತ್ತೊಂದು ಕಾರಿಗೆ ಡಿಕ್ಕಿ ಹೊಡೆದು, ವಾಹನ ಬೆಂಕಿಗಾಹುತಿಯಾಗುವ ಮೊದಲು ನೆಟ್ಟಿದ್ದ ಮೀಡಿಯನ್ ಮೇಲೆ ಉರುಳಿಸಿ, ಮದ್ಯಪಾನ ಮಾಡಿ ವಾಹನ ಚಲಾಯಿಸಿದ್ದಾನೆ ಎಂದು ಶಂಕಿಸಲಾಗಿದೆ.

ರೈಲಿನಲ್ಲಿ ಗೋವಾಕ್ಕೆ ಕಳ್ಳಸಾಗಣೆ ಆಗುತ್ತಿದ್ದ 13 ಮಕ್ಕಳ ರಕ್ಷಣೆ



ರಾಂಚಿ: ಗೋವಾಕ್ಕೆ ಮಾನವ ಕಳ್ಳಸಾಗಣೆ ಆಗುತ್ತಿದ್ದ ಒಬ್ಬ ಬಾಲಕಿ ಸೇರಿದಂತೆ 13 ಮಕ್ಕಳನ್ನು ರೈಲ್ವೆ ರಕ್ಷಣಾ ದಳದ (ಆರ್‌ಪಿಎಫ್) ಪೊಲೀಸರು ಜಾರ್ಖಂಡ್‌ನ ರಾಂಚಿ ಬಳಿಯ ಮೂಚಿ ರೈಲು ನಿಲ್ದಾಣದಲ್ಲಿ ರಕ್ಷಿಸಿದ್ದಾರೆ. ಈ ಮಕ್ಕಳು ರಾಂಚಿಯಿಂದ ವಾಸ್ಕೊಡ ಗಾಮಾ ವಿಶೇಷ ಎಕ್ಸ್‌ಪ್ರೆಸ್ ರೈಲಿನಲ್ಲಿ ಗೋವಾಕ್ಕೆ ತೆರಳುತ್ತಿದ್ದರು. ಮಕ್ಕಳು ಮಾನವ ಕಳ್ಳಸಾಗಣೆ ಆಗುತ್ತಿದ್ದಾರೆ ಎಂಬ ಅನುಮಾನದ ಮೇಲೆ ಖಚಿತ ಮಾಹಿತಿ ಆಧಾರದ ಮೇಲೆ ಆರ್‌ಪಿಎಫ್ ಪೊಲೀಸರು ಮೂಚಿ ರೈಲು ನಿಲ್ದಾಣದ ಬಳಿ ಬೋಗಿ ಪರಿಶೀಲಿಸಿದರು. ಆಗ ಮಕ್ಕಳು ಇರುವುದು ಕಂಡು ಬಂತು. ಪೊಲೀಸರ ಪ್ರಶ್ನೆಗೆ ಮಕ್ಕಳು ಸರಿಯಾಗಿ ಉತ್ತರ ನೀಡಲಿಲ್ಲ. ಹೀಗಾಗಿ ಮಕ್ಕಳನ್ನು ರಕ್ಷಿಸಿ, ಸ್ಥಳೀಯ ಮಕ್ಕಳ ರಕ್ಷಣಾ ಘಟಕದಲ್ಲಿರಿಸಲಾಗಿದೆ ಎಂದು ಆರ್‌ಪಿಎಫ್ ರಾಂಚಿ ಪೊಲೀಸರು ತಿಳಿಸಿದ್ದಾರೆ. ನಾವು ಗೋವಾಕ್ಕೆ ಹೋಗುತ್ತಿದ್ದೇವೆ. ಅಲ್ಲಿ ಒಬ್ಬ ವ್ಯಕ್ತಿ ಬಂದು ಕೆಲಸ ಕೊಡಿಸುತ್ತೇನೆ ಎಂದು ಹೇಳಿದ್ದಾನೆ. ನಮಗೆ ಅಷ್ಟೇ ಗೊತ್ತಿರೋದು ಎಂದು ಮಕ್ಕಳು ಹೇಳಿರುವುದಾಗಿ ತಿಳಿಸಿದ್ದಾರೆ. ಜಾರ್ಖಂಡ್ ಜಿಆರ್‌ಪಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೆತ್ತಿಕೊಂಡಿದ್ದಾರೆ.

ಟ್ರಂಪ್ ಇಲ್ಲದಿದ್ರೆ ಭಾರತ–ಪಾಕ್ ಸಂಘರ್ಷದಲ್ಲಿ ಯಾರೊಬ್ಬರೂ ಉಳಿಯುತ್ತಿರಲಿಲ್ಲವೇನೋ



ಕೈರೋ: ಭಾರತ ಮತ್ತು ಪಾಕಿಸ್ತಾನ ನಡುವಿನ ಪರಮಾಣು ಸಂಘರ್ಷವನ್ನು ಡೊನಾಲ್ಡ್ ಟ್ರಂಪ್ ತಪ್ಪಿಸಿದ್ದಾರೆ ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಹೇಳುವ ಮೂಲಕ ಮತ್ತೊಮ್ಮೆ ಅಮೆರಿಕದ ಅಧ್ಯಕ್ಷರ ಬೆನ್ನುತಟ್ಟಿದ್ದಾರೆ. ಈಜಿಪ್ಟ್‌ನಲ್ಲಿ ನಡೆದ ಗಾಜಾ ಶಾಂತಿ ಸಮ್ಮೇಳನದಲ್ಲಿ ಮಾತನಾಡಿದ ಷರೀಫ್, ಭಾರತ–ಪಾಕ್ ನಡುವೆ ಪರಮಾಣು ಸಂಘರ್ಷ ತಪ್ಪಿಸಿದ್ದೇ ಟ್ರಂಪ್. ಟ್ರಂಪ್ ಮಧ್ಯಪ್ರವೇಶ ಮಾಡದೇ ಇದ್ದಿದ್ರೆ ಅದೇನಾಗುತ್ತಿತ್ತು ಅನ್ನೋದನ್ನ ಊಹಿಸಲೂ ಆಗುತ್ತಿರಲಿಲ್ಲ. ಎರಡು ಪರಮಾಣು ರಾಷ್ಟ್ರಗಳ ನಡುವಿನ ಯುದ್ಧ ಏನಾಗ್ತಿತ್ತು ಅಂತ ಹೇಳೋಕೆ ಯಾರೂ ಬದುಕುಳಿಯದ ಹಂತಕ್ಕೆ ತಲುಪುತ್ತಿತ್ತೇನೋ ಎಂದು ಕಳವಳ ವ್ಯಕ್ತಪಡಿಸಿದರು.

ಮುಂದುವರಿದು ಟ್ರಂಪ್ ಶಾಂತಿಯ ರಾಯಭಾರಿ, ಅವರು ನಿಲ್ಲಿಸಿದ 8 ಯುದ್ಧಗಳಲ್ಲಿ ಭಾರತ–ಪಾಕಿಸ್ತಾನ ಯುದ್ಧವೂ ಒಂದು. ಅದಕ್ಕಾಗಿಯೇ ಅವರನ್ನ ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮನಿರ್ದೇಶನ ಮಾಡಿದ್ದೆವು. ನೊಬೆಲ್ ಪ್ರಶಸ್ತಿಗೆ ಅತ್ಯಂತ ಪ್ರಾಮಾಣಿಕ ಮತ್ತು ಅರ್ಹ ಅಭ್ಯರ್ಥಿ ಆಗಿದ್ದರು ಎಂದು ಹೊಗಳಿದರು.

ಭಾರತದ ಕೋಲ್ಡ್‌ರಿಫ್, ರೆಸ್ಪಿಫ್ರೆಶ್, ರಿಲೈಫ್ ಕುರಿತು WHO ಎಚ್ಚರಿಕೆ

ನವದೆಹಲಿ: ಮಕ್ಕಳ ಸರಣಿ ಸಾವಿಗೆ ಕಾರಣವಾಗಿರುವ ಭಾರತದಲ್ಲಿ ತಯಾರಾದ ಕೋಲ್ಡ್‌ರಿಫ್, ರೆಸ್ಪಿಫ್ರೆಶ್ ಟಿಆರ್ ಮತ್ತು ರಿಲೈಫ್ ಎಂಬ ಮೂರು ಕೆಮ್ಮಿನ ಸಿರಪ್‌ಗಳ ಗುಣಮಟ್ಟ ಹಾಗೂ ಎಲ್ಲಿಯೇ ಪತ್ತೆಯಾದರೂ ಕೂಡಲೇ ತಿಳಿಸುವಂತೆ ವಿವಿಧ ದೇಶಗಳ ರಾಷ್ಟ್ರೀಯ ನಿಯಂತ್ರಣ ಪ್ರಾಧಿಕಾರಗಳಿಗೆ ವಿಶ್ವ ಆರೋಗ್ಯ ಸಂಸ್ಥೆ ಎಚ್ಚರಿಕೆ ನೀಡಿದೆ. ಕಳಪೆ ಗುಣಮಟ್ಟದ ಉತ್ಪನ್ನಗಳ ಪತ್ತೆ ಮತ್ತು ಅವುಗಳ ಸೇವನೆಯಿಂದ ಎದುರಾಗುವ ಪ್ರತಿಕೂಲ ಪರಿಣಾಮಗಳ ಯಾವುದೇ ಘಟನೆ ಅಥವಾ ನಿರೀಕ್ಷಿತ ಪರಿಣಾಮಗಳ ಕುರಿತು ರಾಷ್ಟ್ರೀಯ ನಿಯಂತ್ರಕ ಪ್ರಾಧಿಕಾರ ಅಥವಾ ರಾಷ್ಟ್ರೀಯ ಔಷಧ ವಿಚಕ್ಷಣ ಕೇಂದ್ರಕ್ಕೆ ವರದಿ ಮಾಡುವಂತೆಯೂ ಸೂಚಿಸಿದೆ. ಮಧ್ಯಪ್ರದೇಶದಲ್ಲಿ ಕೋಲ್ಡ್‌ರಿಫ್ ಸೇವಿಸಿದ 5 ವರ್ಷದೊಳಗಿನ ಕನಿಷ್ಠ 22 ಮಕ್ಕಳು ಶಂಕಿತ ಮೂತ್ರಪಿಂಡ ವೈಫಲ್ಯದಿಂದ ಮೃತಪಟ್ಟಿರುವುದಾಗಿ ವರದಿಯಾಗಿದೆ. ರಾಜಸ್ಥಾನದ ವಿವಿಧ ಜಿಲ್ಲೆಗಳಲ್ಲೂ ಕೆಮ್ಮಿನ ಸಿರಪ್ ಸೇವಿಸಿದ ನಂತರ ಕನಿಷ್ಠ ಮೂವರು ಮಕ್ಕಳು ಮೃತಪಟ್ಟಿವೆ ಎಂದು ಆರೋಪಿಸಲಾಗಿದೆ. ಈ ಕಳಪೆ ಗುಣಮಟ್ಟದ ಉತ್ಪನ್ನಗಳು ಎಲ್ಲಿಯೂ ಬಳಕೆಯಾಗದಂತೆ, ಪೂರೈಕೆ ಸರಪಳಿ ಮೇಲೆ ಹೆಚ್ಚಿನ ನಿಗಾ ವಹಿಸಬೇಕು. ಅನಿಯಂತ್ರಿತ ಮಾರುಕಟ್ಟೆಯ ಮೇಲೂ ಕಣ್ಗಾವಲು ಇಡಬೇಕು ಎಂದು ಡಬ್ಲ್ಯೂಎಚ್‌ಒ ಹೇಳಿದೆ.

ಅಕಾಲಿಕ ಮಳೆಯಿಂದ ಕೊಡಗಿನ 'ಅರೇಬಿಕಾ' ಕಾಫಿ ಮೇಲೆ ಪ್ರತಿಕೂಲ ಪರಿಣಾಮ

ಕಾರ್ಮಿಕರ ಕೊರತೆಯ ನಡುವೆ ಕೊಯ್ಲು ಆರಂಭ

●ಆತಂಕದಲ್ಲಿ ಕಾಫಿ ಬೆಳೆಗಾರರು ●ಕೈಗೆ ಬಂದ ತುತ್ತು ಬಾಯಿಗೆ ಬರದೆಂಬ ಸ್ಥಿತಿ ನಿರ್ಮಾಣ


ಕಾಫಿ ಕೊಯ್ಲು ಮಾಡುತ್ತಿರುವುದು.

ಮಡಿಕೇರಿ,ಅ.14– ಮುಂಗಾರಿನ ಅವಧಿ ಮುಗಿದಿದ್ದರು ಕೊಡಗಲ್ಲಿ ಸುರಿಯುತ್ತಿರುವ ಅಕಾಲಿಕ ಮಳೆ 'ಅರೇಬಿಕಾ' ಕಾಫಿ ಕೊಯ್ಲು ಮತ್ತು ಗುಣಮಟ್ಟದ ಮೇಲೆ ಪ್ರತಿಕೂಲ ಪರಿಣಾಮ ಬೀರಲಾರಂಭಿಸಿದೆ.

ಭಾರತದ ಅತೀ ಹೆಚ್ಚು ಕಾಫಿ ಉತ್ಪಾದನೆಯಾಗುವ ಕೊಡಗಿನ ಅರೇಬಿಕಾ ಕಾಫಿಗೆ ವಿಶ್ವ ಮಟ್ಟದಲ್ಲಿ ವಿಶೇಷ ಸ್ಥಾನಮಾನವಿದೆ. ಇಲ್ಲಿ ಬೆಳೆಯುವ ಅರೇಬಿಕಾ ಕಾಫಿಯ ಗುಣಮಟ್ಟ, ಸ್ವಾಧ ಮತ್ತೆಲ್ಲೂ ಕಂಡು ಬರುವುದಿಲ್ಲ. ಈ ಕಾಫಿಯ ಕೊಯ್ಲು ವರ್ಷಂಪ್ರತಿ ಅಕ್ಟೋಬರ್ ತಿಂಗಳಿನಲ್ಲಿ ಆರಂಭಗೊಂಡು ಡಿಸೆಂಬರ್ ಅಂತ್ಯ ಅಥವಾ ಜನವರಿಯಲ್ಲಿ ಪೂರ್ಣಗೊಳ್ಳುವುದು ಸಾಮಾನ್ಯ.

ಜಿಲ್ಲೆಯ ಸೋಮವಾರಪೇಟೆ ತಾಲೂಕಿನಲ್ಲಿ ಅತೀ ಹೆಚ್ಚಿನ ಅರೇಬಿಕಾ ಕಾಫಿಯನ್ನು ಬೆಳೆಯಲಾಗುತ್ತದೆ. ಮೊದಲ ಕೊಯ್ಲು ಈಗಾಗಲೆ ಆರಂಭಗೊಂಡಿದ್ದು, ಗಿಡಗಳಲ್ಲಿ ಹಣ್ಣಾಗಿರುವ ಕಾಫಿಯನ್ನು ಕಾರ್ಮಿಕರ ಕೊರತೆಗಳ ನಡುವೆಯೂ ಬೆಳೆಗಾರರು ಕೊಯ್ಲು ಮಾಡುತ್ತಿದ್ದಾರೆ. ಹೀಗೆ ಕೊಯ್ಲು ಮಾಡಿದ ಕಾಫಿ ಸಮರ್ಪಕವಾಗಿ ಒಣಗುವುದಕ್ಕೆ ಅಗತ್ಯವಾದ ಬಿಸಿಲು ಇದ್ದರೂ, ಅಕಾಲಿಕವಾಗಿ ಸುರಿಯುವ ಮಳೆ ಕಾಫಿಯ ಒಣಗುವಿಕೆಗೆ ತಡೆ ಒಡ್ಡುತ್ತಿದೆ. ಒಣಗುತ್ತಿರುವ ಕಾಫಿ ಒಮ್ಮೆ ಮಳೆಯಲ್ಲಿ ನೆನೆದರೆ ಮತ್ತೆ ಅದನ್ನು ಕಷ್ಟ ಪಟ್ಟು ಒಣಗಿಸಿದರೂ ಉತ್ತಮ ಗುಣಮಟ್ಟ ಅದರಲ್ಲಿ ಕಾಣಲಾಗದು. ಇದು ದರದ ಮೇಲೂ ವ್ಯತಿರಿಕ್ತ ಪರಿಣಾಮ ಬೀರುವ ಎಲ್ಲಾ ಸಾಧ್ಯತೆಗಳಿವೆ.

ಆತಂಕದಲ್ಲಿ ಬೆಳೆಗಾರ: ಉತ್ತಮ ಫಸಲಿಗಾಗಿ ವರ್ಷವಿಡೀ ಶ್ರಮಿಸುವ ಬೆಳೆಗಾರ ಫಸಲು ಕೈ ಸೇರುವ ಹಂತದಲ್ಲಿ ಅಕಾಲಿಕ ಮಳೆಯಿಂದ ಆತಂಕಕ್ಕೆ ಸಿಲುಕಿದ್ದಾನೆ. ಬೆಳೆಗಾರನ ಪರಿಶ್ರಮವನ್ನು ಮಳೆ ಹಾಳುಗೆಡಹುತ್ತಿದೆ. ಕುಶಾಲನಗರ ತಾಲೂಕು ವ್ಯಾಪ್ತಿಯಲ್ಲಿ ಅರೇಬಿಕಾ ಮತ್ತು ರೋಬಸ್ಟಾ ಕಾಫಿ ತಳಿಗಳ ಪೈಕಿ ಈ ಬಾರಿ ಅರೇಬಿಕಾ ಕಾಫಿಗೆ ಬಂಪರ್ ಬೆಲೆ ಬಂದಿದೆ. ಆದರೆ ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಕೈಗೆ ಬಂದ ತುತ್ತು ಬಾಯಿಗೆ ಇಲ್ಲ ಎಂಬಂತಹ ಪರಿಸ್ಥಿತಿಯನ್ನು ಬೆಳೆಗಾರ ಎದುರಿಸುತ್ತಿದ್ದಾನೆ.


ಪ್ರತಿಕೂಲ ಹವಾಮಾನದಿಂದ ಕಾಫಿ ಒಣಗಿಸಲು ಹರಸಾಹಸ.

ಕೊಡಗಿನ ಪ್ರಗತಿಪರ ಕೃಷಿಕ ಸುಂಟಿಕೊಪ್ಪ ಹೋಬಳಿಯ ಕಂಬಿಬಾಣೆ ನಿವಾಸಿ ಟಿ.ಕೆ.ಸಾಯಿಕುಮಾರ್ ಅವರು ಅಕಾಲಿಕ ಮಳೆ ಮತ್ತು ಹವಾಮಾನ ವೈಫರೀತ್ಯದ ಹಿನ್ನೆಲೆಯಲ್ಲಿ ಅರೇಬಿಕಾ ಕಾಫಿಯ ಗುಣಮಟ್ಟದ ಸಂಸ್ಕರಣೆಗೆ ಸಂಕಷ್ಟ ಎದುರಿಸಬೇಕಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಅರೇಬಿಕಾ ಕಾಫಿಗೆ ಅತ್ಯುತ್ತಮ ಬೆಲೆ ಬಂದಿದೆ. ಆದರೆ, ಅದನ್ನು ಪಡೆಯುವಲ್ಲಿ ನಮ್ಮದಲ್ಲದ ಕಾರಣದಿಂದ ವಿಫಲವಾಗುತ್ತಿರುವುದು ನಿರಾಶೆ ಮೂಡಿಸಿರುವುದಾಗಿ ಅವರು ಹೇಳಿದರು. ಸವಾಲುಗಳನ್ನು ಎದುರಿಸಿ ಗುಣಮಟ್ಟದ ಕಾಫಿ ಸಂಸ್ಕರಣೆ ಮಾಡುವ ಮೂಲಕ ಅತ್ಯುತ್ತಮ ಬೆಲೆಯನ್ನು ಪಡೆಯುವುದು ನಮ್ಮ ಗುರಿ.

ಆ ನಿಟ್ಟಿನಲ್ಲಿ ನಾವು ಕಾರ್ಯಪ್ರವೃತರಾಗಿದ್ದೇವೆ. ಆದರೆ, ಪಕೃತಿ ಇದಕ್ಕೆ ವಿರುದ್ಧವಾಗಿದೆ ಎಂದು ಆತಂಕ ತೋಡಿಕೊಂಡರು. ಇತ್ತೀಚಿನ ದಿನಗಳಲ್ಲಿ ಕಾರ್ಮಿಕರ ಕೊರತೆ ಕಂಡು ಬರುತ್ತಿದೆ. ಕಾರ್ಮಿಕರ ದುಬಾರಿ ಕೂಲಿಯಿಂದಾಗಿ ಸಣ್ಣ ಮತ್ತು ಮಧ್ಯಮ ಬೆಳೆಗಾರರು ಸಾಕಷ್ಟು ಕಷ್ಟ ನಷ್ಟಗಳಿಗೆ ಒಳಗಾಗಬೇಕಾಗಬಹುದೆಂದು ಕಳವಳ ವ್ಯಕ್ತಪಡಿಸಿದ್ದಾರೆ.

ಸಂತೆಯಲ್ಲಿ ಗೋಮಾಂಸ ಮಾರುತ್ತಿದ್ದವನ ಬಂಧನ

11 ಕೆ.ಜಿ. ಮಾಂಸ, ದ್ವಿಚಕ್ರ ವಾಹನ ವಶ



ಮಡಿಕೇರಿ, ಅ.14– ಮಡಿಕೇರಿ ತಾಲೂಕಿನ ಚೇರಂಬಾಣೆ ಗ್ರಾಮದಲ್ಲಿ ಅಸ್ಸಾಂ ಕಾರ್ಮಿಕರಿಗೆ ಗೋ ಮಾಂಸ ಮಾರಾಟ ಮಾಡುತ್ತಿದ್ದ ಪ್ರಕರಣವನ್ನು ಪತ್ತೆ ಹಚ್ಚಿರುವ ಅಲ್ಲಿನ ಹಿಂದೂ ಪರ ಸಂಘಟನೆಯ ಕಾರ್ಯಕರ್ತರು ಓರ್ವ ಆರೋಪಿಯನ್ನು ಸೆರೆ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಕೊಟ್ಟಮುಡಿ ಗ್ರಾಮದಲ್ಲಿ ಗುಜರಿ ವ್ಯಾಪಾರ ಮಾಡುವ ಹಸೈನಾರ್ ಎಂಬಾತನೇ ಬಂಧಿತ ಆರೋಪಿಯಾಗಿದ್ದು, ಒಟ್ಟು 11 ಕೆ.ಜಿ. ಗೋ ಮಾಂಸ ಮತ್ತು ಕೃತ್ಯಕ್ಕೆ ಬಳಸಿದ ದ್ವಿಚಕ್ರ ವಾಹನವನ್ನು (ಕೆ.12ಡಬ್ಲ್ಯು.9617) ಭಾಗಮಂಡಲ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮಂಗಳವಾರ ಚೇರಂಬಾಣೆ ಗ್ರಾಮದಲ್ಲಿ ವಾರದ ಸಂತೆ ದಿನವಾಗಿದ್ದು, ಹಸೈನಾರ್ ದ್ವಿಚಕ್ರ ವಾಹನದಲ್ಲಿ ಇಲ್ಲಿಗೆ ಆಗಮಿಸಿ ಪಟ್ಟಣದಲ್ಲಿ ನೆಲೆಸಿರುವ ಅಸ್ಸಾಂ ಕಾರ್ಮಿಕರಿಗೆ ಪ್ಲಾಸ್ಟಿಕ್ ಕವರ್‌ನಲ್ಲಿ ಗೋ ಮಾಂಸವನ್ನು ಮಾರಾಟ ಮಾಡಲು ಹೊಂಚು ಹಾಕುತ್ತಿದ್ದ. ಈ ಬಗ್ಗೆ ಸಂಶಯ ವ್ಯಕ್ತಪಡಿ ಸಿದ ಅಲ್ಲಿನ ಹಿಂದೂ ಪರ ಸಂಘಟನೆಗಳ ಸದಸ್ಯರು ಹಸೈನಾರ ಅನ್ನು ವಿಚಾರಿಸಿ ದ್ವಿಚಕ್ರ ವಾಹನದ ಡಿಕ್ಕಿ ತೆರೆಯುವಂತೆ ಆಗ್ರಹಿಸಿದರು.

ಈ ವೇಳೆ ಡಿಕ್ಕಿಯಲ್ಲಿ ಸುಮಾರು 11 ಕೆ.ಜಿ. ಗೋ ಮಾಂಸ ಇರುವುದು ಪತ್ತೆಯಾಗಿದೆ. ಬಳಿಕ ಭಾಗಮಂಡಲ ಪೊಲೀಸರಿಗೆ ಮಾಹಿತಿ ನೀಡಿದ ಸಂಘಟನೆಯ ಸದಸ್ಯರು ಆರೋಪಿಯನ್ನು ಪೊಲೀಸರಿಗೆ ಒಪ್ಪಿಸಿದರು. ಪ್ರಕರಣ ದಾಖಲಿಸಿಕೊಂಡಿರುವ ಭಾಗಮಂಡಲ ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಕಾವೇರಿ ಸಂಕ್ರಮಣದ ಪವಿತ್ರ ಸಂದರ್ಭದಲ್ಲಿ ಕೊಡಗು ಜಿಲ್ಲೆಯಲ್ಲಿ ಗೋ ಸಾಗಾಟ, ಗೋ ಮಾಂಸ ಮಾರಾಟ ಪ್ರಕರಣಗಳು ಕಂಡು ಬರುತ್ತಿದೆ. ಇಂತಹ ಕೃತ್ಯಗಳು ಬಹು ಸಂಖ್ಯಾತ ಹಿಂದೂ ಸಮಾಜದ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡುತ್ತಿವೆ. ಸ್ಥಳೀಯ ಜನ ಪ್ರತಿನಿಧಿಗಳು ಇಂತಹ ಅಪರಾಧ ಕೃತ್ಯಗಳನ್ನು ತಡೆಯುವಂತೆ ಅಧಿಕಾರಿಗಳಿಗೆ ಸೂಚನೆ ನೀಡದಿರುವುದು ಸಂಶಯಕ್ಕೆ ಎಡೆ ಮಾಡುತ್ತಿದೆ. ಪೊಲೀಸ್ ಇಲಾಖೆ ಕಠಿಣ ಕಾನೂನು ಕ್ರಮ ಕೈಗೊಳ್ಳದಿದ್ದಲ್ಲಿ ಹೋರಾಟ ಅನಿವಾರ್ಯವಾಗಲಿದೆ ಎಂದು ಹಿಂದೂ ಜಾಗರಣಾ ವೇದಿಕೆಯ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯಕಾರಿಣಿ ಸದಸ್ಯ ಕುಕ್ಕೇರ ಅಜಿತ್ ಎಚ್ಚರಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಅ.14–ಪೊನ್ನಂಪೇಟೆ ವಿದ್ಯುತ್ ಉಪ ಕೇಂದ್ರದಿಂದ ಹೊರಹೊಮ್ಮುವ ಬೆಕ್ಕೆಸೊಡ್ಲೂರು ಫೀಡರ್‌ನಲ್ಲಿ ನಿರ್ವಹಣಾ ಕಾಮಗಾರಿ ನಡೆಸುತ್ತಿರುವುದರಿಂದ ಅ.15 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಬೆಕ್ಕೆಸೊಡ್ಲೂರು, ಬಲ್ಯಮಂಡೂರು, ಕಾನೂರು, ಕೋತೂರು, ಬೊಮ್ಮಾಡು, ನಿಡುಗುಂಬ, ವಡ್ಡರಮಾಡು, ಕಪ್ಪರಮನೆ, ಬ್ರಹ್ಮಗಿರಿ, ಕೊಟ್ಟಗೇರಿ, ಬೇಗೂರು, ಮುಗುಟಗೇರಿ, ಚಿಕ್ಕಮಂಡೂರು, ಕೋಟೂರು, ತೂಚಮಕೇರಿ, ಚಿಕ್ಕಮಂಡೂರು ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.



ಸುಪ್ರೀಂಕೋರ್ಟ್ ನ್ಯಾಯಮೂರ್ತಿಗೆ ಅಪಮಾನ ಖಂಡಿಸಿ ಪ್ರತಿಭಟನೆ


ಪ್ರತಿಭಟನಾಕಾರರು ತಹಸೀಲ್ದಾರ್‌ರಿಗೆ ಮನವಿ ಸಲ್ಲಿಸುತ್ತಿರುವುದು.

ಕುಶಾಲನಗರ: ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗೆ ಅಪಮಾನಿಸಿದ ಘಟನೆಯನ್ನು ಖಂಡಿಸಿ ವಿಶ್ವಜ್ಞಾನಿ ಅಂಬೇಡ್ಕರ್ ಟ್ರಸ್ಟ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಇಲ್ಲಿನ ಐಬಿಯಿಂದ ಮೆರವಣಿಗೆ ಹೊರಟ ಪ್ರತಿಭಟನಾಕಾರರು ಕಾರ್ಯಪ್ಪ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ ನಡೆಸಿದರು. ನ್ಯಾಯಾಧೀಶರನ್ನು ಅಪಮಾನಿಸಿದ ವ್ಯಕ್ತಿಯನ್ನು ದೇಶದಿಂದಲೇ ಗಡಿಪಾರು ಮಾಡುವಂತೆ ಒತ್ತಾಯಿಸಿದ ಅವರು, ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ನಂತರ ಕುಶಾಲನಗರ ತಾಲೂಕು ಕಚೇರಿಯತ್ತ ಸಾಗಿದ ಪ್ರತಿಭಟನಾಕಾರರು ತಹಸೀಲ್ದಾರ್ ಮೂಲಕ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ದಲಿತ ಮುಖಂಡ ಮೋಹನ್ ಮೌರ್ಯ, ದೇಶದಲ್ಲಿ ನ್ಯಾಯಮೂರ್ತಿಗೆ ಅಪಮಾನ ಮಾಡಿರುವುದು ಅತ್ಯಂತ ಖಂಡನೀಯ. ಕೂಡಲೇ ಕೃತ್ಯವೆಸಗಿದಾತನನ್ನು ಕೂಡಲೇ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.

ಟ್ರಸ್ಟ್‌ನ ಅಧ್ಯಕ್ಷ ಲೋಕೇಶ್ ಮಾತನಾಡಿ, ಮುಖ್ಯ ನ್ಯಾಯಮೂರ್ತಿಗೆ ಅಪಮಾನ ಎಸಗಿರುವುದರ ವಿರುದ್ಧ ಪ್ರತಿಯೊಬ್ಬ ಭಾರತೀಯನೂ ಖಂಡಿಸಬೇಕು. ಇದು ಎಲ್ಲಾ ಭಾರತೀಯರಿಗೂ ಮಾಡಿರುವ ಅಪಮಾನ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಟ್ರಸ್ಟ್ ಕಾರ್ಯದರ್ಶಿ ಸತೀಶ್ ಕುಮಾರ್, ಖಜಾಂಜಿ ಜ್ಞಾನವಾಣಿ ಸತೀಶ್, ನಿರ್ದೇಶಕರಾದ ಜಯವರ್ಧನ್, ಪ್ರಮುಖರಾದ ಸುರೇಶ್, ವೀರಭದ್ರ, ಶಿವಪ್ಪ, ಮಹೇಶ್, ರವಿ, ಮಂಜುನಾಥ್, ಅಣ್ಣಯ್ಯ, ಕೃಷ್ಣ ಗೋವಿಂದ ರಾಜ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

11 ತಿಂಗಳಾದರೂ ಪೂರ್ಣಗೊಳ್ಳದ ರಸ್ತೆ ಕಾಮಗಾರಿ

● ಸಂಚಾರಕ್ಕೆ ಪರದಾಟ, ಅಧಿಕಾರಿಗಳು, ಗುತ್ತಿಗೆದಾರರ ವಿರುದ್ಧ ಜನರ ಆಕ್ರೋಶ ●ಕಾಮಗಾರಿ ಆರಂಭಿಸದಿದ್ದರೆ ಅ.23ರಂದು ಸಿದ್ದಾಪುರ ಬಂದ್

ಸಿದ್ದಾಪುರ,ಅ.14– ವಿರಾಜಪೇಟೆ ತಾಲೂಕಿನ ಸಿದ್ದಾಪುರದಿಂದ ಕೊಣನೂರು–ಮಾಕುಟ್ಟಕ್ಕೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿ ಅಗಲೀಕರಣ ಅಭಿವೃದ್ಧಿ ಕಾಮಗಾರಿ 11 ತಿಂಗಳು ಕಳೆದರೂ ಪೂರ್ಣವಾಗದ ಹಿನ್ನೆಲೆಯಲ್ಲಿ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಜನಾಕ್ರೋಶ ವ್ಯಕ್ತವಾಗಿದೆ.

ರಸ್ತೆ ಕಾಮಗಾರಿಯನ್ನು ಶೀಘ್ರದಲ್ಲೇ ಆರಂಭಿಸದಿದ್ದಲ್ಲಿ ಅ.23ರಂದು ಸಿದ್ದಾಪುರ ಪಟ್ಟಣ ಬಂದ್‌ಗೆ ನಾಗರಿಕ ಹಿತ ರಕ್ಷಣಾ ಸಮಿತಿ ಕರೆ ನೀಡುವುದಾಗಿ ಎಚ್ಚರಿಸಿದೆ.

ವಿವಿಧ ಸಂಘ ಸಂಸ್ಥೆಗಳು ಒಗ್ಗೂಡಿ ತುರ್ತು ಸಭೆಯನ್ನು ನಡೆಸಿ ಈ ನಿರ್ಧಾರ ಕೈಗೊಂಡಿದ್ದಾರೆ. 11 ತಿಂಗಳ ಹಿಂದೆ ರಸ್ತೆ ಕಾಮಗಾರಿಗೆ ಚಾಲನೆ ನೀಡಲಾಗಿದ್ದು ಇಂದಿಗೂ ಅಭಿವೃದ್ಧಿ ಕಾಣದೆ ಸಂಕಷ್ಟದಲ್ಲಿ ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಸಾರ್ವಜನಿಕರು, ಶಾಲಾ ವಿದ್ಯಾರ್ಥಿಗಳು, ದಿನ ನಿತ್ಯ ಸಂಚರಿಸುವ ಸಾವಿರಾರು ವಾಹನಗಳು ಗುಂಡಿ ಹಾಗೂ ಕೆಸರು ರಸ್ತೆಯಲ್ಲಿ ಸಂಚರಿಸಬೇಕಾದ ದುಸ್ಥಿತಿ ನಿರ್ಮಾಣವಾಗಿದೆ.

ಮಳೆಯ ಕಾರಣ ನೀಡಿ ಕಾಮಗಾರಿ ಪೂರ್ಣಗೊಳಿಸದೆ ಗುತ್ತಿಗೆದಾರರು ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ನಾಗರಿಕ ಹಿತರಕ್ಷಣಾ ಸಮಿತಿಯ ಪ್ರಮುಖರು ಆರೋಪಿಸಿದ್ದಾರೆ. ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸದಿದ್ದಲ್ಲಿ ಸಿದ್ದಾಪುರ ಬಂದ್‌ಗೆ ಕರೆ ನೀಡಿ ತೀವ್ರ ರೀತಿಯ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.


ಗುಂಡಿ ಹಾಗೂ ಕೆಸರು ರಸ್ತೆಯಲ್ಲಿ ಸಂಚರಿಸಬೇಕಾದ ದುಸ್ಥಿತಿ.

ಈ ಸಂದರ್ಭ ಗ್ರಾಪಂ ಮಾಜಿ ಅಧ್ಯಕ್ಷೆ ರೀನಾ ತುಳಸಿ, ಸಾಮಾಜಿಕ ಕಾರ್ಯಕರ್ತ ಮುಸ್ತಫಾ, ಆಟೋ ಚಾಲಕ ಹುಸೇನ್, ಗ್ರಾಮ ಪಂಚಾಯಿತಿ ಸದಸ್ಯ ಆನಂದ, ಪ್ರಮುಖರಾದ ಜಯರಾಂ, ರೂಪೇಶ್, ಸಿದ್ದಿಕ್, ರಿಯಾಜ್, ಕರೀಂ ಸೇರಿದಂತೆ ವರ್ತಕರು ಹಾಜರಿದ್ದರು.

ದೇವಕಿ ನಿಧನ



ನಾಪೋಕ್ಲು: ಕೊಳಕೇರಿ ಗ್ರಾಮದ ಹಳೇ ತಾಲೂಕು ಕುಂಬಾರಕೇರಿ ನಿವಾಸಿ ಉತ್ತಯ್ಯ ಅವರ ಧರ್ಮಪತ್ನಿ ದೇವಕಿ (80) ಮಂಗಳವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಬುಧವಾರ (ಅ.15) ಹಳೇ ತಾಲೂಕು ಕುಂಬಾರಕೇರಿಯಲ್ಲಿರುವ ಮೃತರ ಕುಟುಂಬಸ್ಥರ ರುದ್ರ ಭೂಮಿಯಲ್ಲಿ ನಡೆಯಲಿದೆ. ಮೃತರು ಪತಿ ಉತ್ತಯ್ಯ ಹಾಗೂ ಪುತ್ರಿ ಸೇರಿದಂತೆ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

ಬೆಲ್ಲವತ್ತದ ಮಹದೇಶ್ವರ ದೇಗುಲದಲ್ಲಿ ಕುಂಭಾಭಿಷೇಕ: ಎ.ಆರ್.ಕೃಷ್ಣಮೂರ್ತಿ ಭಾಗಿ



ಕೊಳ್ಳೇಗಾಲ, ಅ.14– ಕೊಳ್ಳೇಗಾಲ ಕ್ಷೇತ್ರ ವ್ಯಾಪ್ತಿಯ ಬೆಲ್ಲವತ್ತ ಗ್ರಾಮದಲ್ಲಿರುವ ಶ್ರೀ ಮಹದೇಶ್ವರಸ್ವಾಮಿ ದೇಗುಲದಲ್ಲಿ ದೇಗುಲ ಜೀರ್ಣೋದ್ದಾರಗೊಂಡು 2 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕುಂಭಾಭಿಷೇಕ ಮಹೋತ್ಸವವವು ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭ ಣೆಯಿಂದ ನೆರವೇರಿತು.

ಕುಂಭಾಭಿಷೇಕ ಮಹೋತ್ಸವದ ಅಂಗವಾಗಿ ಮಹದೇಶ್ವರ ದೇಗುಲದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ಹೊಸವಾಡಿ ವೀರಭದ್ರಸ್ವಾಮಿ ಕ್ಷೇತ್ರದ ಪ್ರಧಾನ ಅರ್ಚಕ ಚಂದ್ರು, ಮಹದೇಶ್ವರ ದೇಗುಲದ ಅರ್ಚಕ ರುದ್ರಸ್ವಾಮಿ ಅವರ ನೇತೃತ್ವದಲ್ಲಿ ವಿಶೇಷ ಪೂಜೆ ಜರುಗಿತು.

ಬೆಳಗ್ಗೆ 9ಗಂಟೆಗೆ ಗಂಗಾ ಪೂಜೆ ಸಲ್ಲಿಸಿ, ಹಾಲರವಿ ಮೂಲಕ ಗಂಗೆ ತಂದು ಮಹದೇಶ್ವರ ದೇಗುಲಕ್ಕೆ ಹುಲಿವಾಹನದ ಜೊತೆ ಮಂಗಳವಾಧ್ಯ ಸಮೇತ ಪೂಜೆ ಸಲ್ಲಿಸಿ ಹಾಲರವಿ ಮೆರವಣಿಗೆ ಬಳಿಕ ಹೋಮ ನಡೆಸಲಾಯಿತು.

ಪೂಜಾ ಕೈಂಕರ್ಯಗಳು ಪ್ರಾರಂಭವಾಗುತ್ತಿದ್ದಂತೆ ಕ್ಷೇತ್ರದ ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು ಪಾಲ್ಗೊಂಡರು. ಹುಲಿವಾಹನ ಮೆರವಣಿಗೆ ವೇಳೆಯೂ ಶಾಸಕರು ಪಾಲ್ಗೊಂಡು ಪೂಜೆಯಲ್ಲಿ ಭಾಗಿಯಾಗಿ ಪ್ರಸಾದ ಸ್ವೀಕರಿಸಿದರು.

ಈ ವೇಳೆ ಗ್ರಾಮಸ್ಥರು ಬೆಲ್ಲವತ್ತ ಗ್ರಾಮದ ರಸ್ತೆ ತೀರಾ ಹದಗೆಟ್ಟಿದ್ದು ರಸ್ತೆ ಅಭಿವೃದ್ದಿಗೆ ಕ್ರಮಕೈಗೊಳ್ಳುವಂತೆ ಮನವಿ ಸಲ್ಲಿಸಿದರು. ಅಲ್ಲದೆ ಸರಕಾರಿ ಸಾರಿಗೆ ಸಮರ್ಪಕ ರೀತಿ ಗ್ರಾಮಕ್ಕೆ ಬರುವಂತೆ ವ್ಯವಸ್ಥೆ ಕಲ್ಪಿಸಬೇಕು, ಮಹದೇಶ್ವರ ದೇಗುಲಕ್ಕೆ ಕಾಂಪೌಂಡ್ ನಿರ್ಮಿಸಿಕೊಡಬೇಕು ಎಂಬಿತ್ಯಾದಿ ಮನವಿ ಸಲ್ಲಿಸಿದರು.

ಈ ವೇಳೆ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೊಂಗನೂರು ಚಂದ್ರು, ಗೌಡರ ಪುಟ್ಟಸ್ವಾಮಿ, ಜಡೇಯ, ಮಾದೇವ, ನೆಲ್ಲೂರು ಪ್ರಭು, ಮಹದೇವಸ್ವಾಮಿ ಅಮ್ಮನಪುರ ವಿಜಿ, ಕಳ್ಳಿಪುರ ರೇವಣ್ಣ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಂಡರು.

ಈ ವೇಳೆ ಮಾತಾಡಿದ ಶಾಸಕರು ಬೆಲ್ಲವತ್ತ ಗ್ರಾಮದ ರಸ್ತೆ ಅಭಿವೃದ್ದಿಗೆ ಕ್ರಮವಹಿಸುವೆ, ಈ ದಿನ ದೇಗುಲದಲ್ಲಿ ವಿಶೇಷ ಪೂಜಾ ಕೈಂಕರ್ಯಗಳಲ್ಲಿ ಪಾಲ್ಗೊಂಡಿದ್ದು ಸಂತಸ ತಂದಿದೆ, ಈ ಗ್ರಾಮದ ಮೂಲ ಸೌಲಭ್ಯ ಕಲ್ಪಿಸಲು ಕ್ರಮವಹಿಸುವೆ ಕ್ಷೇತ್ರದ ಅಭಿವೃದ್ದಿ ನನ್ನ ಧ್ಯೇಯವಾಗಿದ್ದು ಈ ನಿಟ್ಟಿನಲ್ಲಿ ಸಾಗುವೆ ಎಂದರು.

ಸಿಜೆಐ ಮೇಲೆ ಶೂ ಎಸೆಯಲೆತ್ನ ಖಂಡಿಸಿ

ಅ.18 ರಂದು ಚಾ.ನಗರ ಸ್ವಯಂಪ್ರೇರಿತ ಬಂದ್


ಚಾಮರಾಜನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸಂವಿಧಾನ ಸಂರಕ್ಷಣಾ ಸಮಿತಿ ವತಿಯಿಂದ ಪತ್ರಿಕಾಗೋಷ್ಠಿ ನಡೆಯಿತು.

ಚಾಮರಾಜನಗರ: ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲು ಯತ್ನಿಸಿದ ಘಟನೆಯನ್ನು ಖಂಡಿಸಿ ಸಂವಿಧಾನ ಸಂರಕ್ಷಣಾ ಸಮಿತಿ ವತಿಯಿಂದ ಅ.18 ರಂದು ಶನಿವಾರ ಚಾಮರಾಜನಗರ ಸ್ವಯಂಪ್ರೇರಿತ ಬಂದ್ ಹಾಗೂ ಬೃಹತ್ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಜಿ.ಪಂ.ಮಾಜಿ ಉಪಾಧ್ಯಕ್ಷ ಅಯ್ಯನಪುರ ಶಿವಕುಮಾರ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 6 ರಿಂದ ಸಂಜೆ 6 ಗಂಟೆಯ ತನಕ ಚಾಮರಾಜನಗರ ಸ್ವಯಂಪ್ರೇರಿತ ಬಂದ್ ಮಾಡಲಾಗುವುದು. ಮಧ್ಯಾಹ್ನ 3 ಗಂಟೆಯ ಮೇಲೆ ನಗರದ ಭುವನೇಶ್ವರಿ ವೃತ್ತದಲ್ಲಿ ಸಮಾವೇಶಗೊಂಡು ಅಲ್ಲಿಂದ ಮೆರವಣಿಗೆ ಹೊರಟು ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಜಿಲ್ಲಾಧಿಕಾರಿಗಳ ಮುಖಾಂತರ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಗುತ್ತದೆ.

ಚಾಮರಾಜನಗರ ಸ್ವಯಂಪ್ರೇರಿತ ಬಂದ್‌ಗೆ, ಬೃಹತ್ ಪ್ರತಿಭಟನಾ ರ್‍ಯಾಲಿಗೆ ಎಲ್ಲಾ ಸಮಾಜದ ಸಂಘ, ಸಂಸ್ಥೆಗಳು, ಎಲ್ಲಾ ರಾಜಕೀಯ ಪಕ್ಷಗಳು, ವಿವಿಧ ಸಮಾಜದ ಸಂಘ, ಸಂಸ್ಥೆಗಳು, ಚಾಮರಾಜನಗರ ವರ್ತಕರ ಸಂಘ, ಹೋಟಲ್ ಮತ್ತು ಚಿತ್ರಮಂದಿರ ಮಾಲೀಕರು, ಖಾಸಗಿ ಬಸ್ಸು, ಆಟೋ ಲಾರಿ, ಗೂಡ್ಸ್, ಟೆಂಪೋ, ಕಾರುಗಳು, ಎತ್ತಿನಗಾಡಿಗಳು, ಹಣ್ಣು, ತರಕಾರಿ, ಹೂವು, ಮಾರಾಟಗಾರರು, ರಸ್ತೆ ಸಾರಿಗೆ ನಿಗಮ, ಕನ್ನಡಪರ ಸಂಘಟನೆಗಳು, ರೈತಪರ ಹೋರಾಟಗಾರರು, ದಲಿತಪರ ಮತ್ತು ಪ್ರಗತಿಪರ ಸಂಘಟನೆಗಳ ಹೋರಾಟಗಾರರು, ಸಾರ್ವಜನಿಕರು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶ್ವಸಿಗೊಳಿಸಿಕೊಡಬೇಕು ಎಂದು ಶಿವಕುಮಾರ್ ಮನವಿ ಮಾಡಿದರು.

ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಎಸ್‌ಕೆ ಉಮೇಶ್, ಜಿಲ್ಲಾ ಉಪ್ಪಾರ ಸಂಘದ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವು, ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಅಬ್ರಾರ್ ಅಹಮದ್, ತಾ.ಪಂ. ಮಾಜಿ ಅಧ್ಯಕ್ಷ ಆರ್.ಮಹದೇವು, ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಮಾತನಾಡಿ, ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶರಾದ ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ ವಕೀಲ ರಾಕೇಶ್ ಕಿಶೋರ್ ವರ್ತನೆಯಿಂದ ನಮಗೆಲ್ಲ ನೋವಾಗಿದೆ. ಆತನ್ನ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಚಾಮರಾಜನಗರ ಬಂದ್‌ಗೆ ಸಂಪೂರ್ಣ ಬೆಂಬಲ: ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲು ಯತ್ನಿಸಿದ ಘಟನೆಯನ್ನು ಖಂಡಿಸಿ ಸಂವಿಧಾನ ಸಂರಕ್ಷಣಾ ಸಮಿತಿ ವತಿಯಿಂದ ಅ. 18 ರಂದು ಶನಿವಾರ ಚಾಮರಾಜನಗರ ಸ್ವಯಂಪ್ರೇರಿತ ಬಂದ್ ಹಾಗೂ ಬೃಹತ್ ಪ್ರತಿಭಟನಾ ಮೆರವಣಿಗೆಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಎಲ್ಲರೂ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂವಿಧಾನ ಸಂರಕ್ಷಣಾ ಸಮಿತಿ ನಾಗವಳ್ಳಿ ನಾಗಯ್ಯ ಇದ್ದರು.

ಜಮೀನುಗಳಿಗೆ ಬರ್ತಿವೆ ಹುಲಿ, ಚಿರತೆಗಳು, ರೈತರ ಮೇಲೆಯೇ ದೂರು, ಅರಣ್ಯಾಧಿಕಾರಿಗಳು ಕರೆಗೆ ಸ್ಪಂದಿಸಲ್ಲ, ಪರಿಹಾರವೇ ಸಿಕ್ಕಿಲ್ಲ...

ಕುಂದು–ಕೊರತೆಗಳ ಸಭೆಯಲ್ಲಿ ಅರಣ್ಯಾಧಿಕಾರಿಗಳಿಗೆ ರೈತರ ತರಾಟೆ


ಗುಂಡ್ಲುಪೇಟೆ ತಾಲೂಕಿನ ಕುಂದಕೆರೆ ಗ್ರಾಮದಲ್ಲಿ ಅರಣ್ಯಾಧಿಕಾರಿಗಳು ಗ್ರಾಮಸಭೆ ನಡೆಸಿದರು.

ಗುಂಡ್ಲುಪೇಟೆ, ಅ.14– ಬಂಡೀಪುರ ಕಾಡಂಚಿನ ವ್ಯಾಪ್ತಿಯಲ್ಲಿ ಬರುವ ತಾಲೂಕಿನ ಕುಂದಕೆರೆ ಗ್ರಾಮದಲ್ಲಿ ಕುಂದಕೆರೆ ವಲಯದ ಅರಣ್ಯಾಧಿಕಾರಿಗಳು ಗ್ರಾಮಸ್ಥರ ಕುಂದುಕೊರತೆಗಳ ಸಭೆ ನಡೆಸಿದರು.

ಈ ವೇಳೆ ಮಾತನಾಡಿದ ರೈತ ಮುಖಂಡ ಕುಂದಕೆರೆ ಸಂಪತ್ತು, ಅರಣ್ಯ ಇಲಾಖೆ ಕಾಡಂಚಿನ ರೈತರನ್ನು ಸಂಪೂರ್ಣ ಕಡೆಗಣಿಸುತ್ತಿದೆ. ಹುಲಿ, ಚಿರತೆಗಳು ಜಮೀನುಗಳಲ್ಲಿ ಬೀಡು ಬಿಡುತ್ತಿದ್ದು, ರೈತರು ಬೆಳೆ ಕಾವಲಿಗೆ ಜಮೀನುಗಳಿಗೆ ಹೋಗಲು ಸಾಧ್ಯವಾಗುತ್ತಿಲ್ಲ. ವನ್ಯಜೀವಿಗಳು ಬಂದಿರುವ ಬಗ್ಗೆ ಕರೆ ಮಾಡಿದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ವನ್ಯಜೀವಿಗಳನ್ನು ತಡೆಗಟ್ಟುವ ಬದಲು ರೈತರ ಮೇಲೆ ದೂರು ನೀಡಲಾಗುತ್ತಿದೆ. ಇದರಿಂದ ರೈತರು ಸಾಲ ಸೋಲ ಮಾಡಿ ಬೆಳೆದ ಬೆಳೆಗಳು ವನ್ಯಜೀವಿಗಳಿಂದ ನಾಶವಾಗುತ್ತಿದ್ದು ರೈತು ಹತಾಶರಾಗುತ್ತಿದ್ದಾರೆ. ಹುಲಿ ಚಿರತೆಗಳು 50–60 ಸಾವಿರ ಬೆಲೆಬಾಳುವ ಹಸುವನ್ನು ಕೊಂದು ಹಾಕಿದರೆ ಅರಣ್ಯ ಇಲಾಖೆಯು ಕೇವಲ 30 ಸಾವಿರ ರೂಪಾಯಿ ಮಾತ್ರ ಪರಿಹಾರ ನೀಡುತ್ತಿದೆ. ಎಷ್ಟೋ ಸಂತ್ರಸ್ಥರಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿ ದಿನವೂ ಬಂಡೀಪುರಕ್ಕೆ ಬರುವ ಪ್ರವಾಸಿಗರಿಂದ ಹಾಗೂ ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳಿಂದ ವಸೂಲಿ ಮಾಡುತ್ತಿರುವ ಪ್ರವೇಶ ಶುಲ್ಕದಿಂದಲೇ ಕೋಟ್ಯಾಂತರ ರೂಪಾಯಿ ಆದಾಯ ಬರುತ್ತಿದೆ. ಆದರೂ ಅರಣ್ಯ ಇಲಾಖೆ ಸಂತ್ರಸ್ಥ ರೈತರಿಗೆ ತುಂಬಾ ಕಡಿಮೆ ಪ್ರಮಾಣದಲ್ಲಿ ಪರಿಹಾರ ನೀಡುತ್ತಿದೆ.

ಈ ಬಾರಿ ಫೆಬ್ರವರಿಯಿಂದಲೂ ಬೆಳೆ ಹಾಗೂ ಜಾನುವಾರು ನಷ್ಟಕ್ಕೆ ಪರಿಹಾರ ನೀಡಿಲ್ಲ. ಅಧಿಕಾರಿಗಳು ನಿಮ್ಮ ಮನೆಯಿಂದ ತಂದ ಹಣದಿಂದ ರೈತರಿಗೆ ಪರಿಹಾರ ಕೊಡುವಂತೆ ವರ್ತಿಸುತ್ತಿದ್ದೀರಿ, ಅರಣ್ಯ ಇಲಾಖೆ ಅರಣ್ಯ ಸಂರಕ್ಷಣೆ ಮಾಡುವುದು ಬಿಟ್ಟು ಕಾಮಗಾರಿ ಕೈಗೊಳ್ಳುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿ, ಮುಂದಿನ ದಿನಗಳಲ್ಲಿ ನಿಮ್ಮ ನಡವಳಿಕೆಯನ್ನು ಸುಧಾರಿಸಿಕೊಳ್ಳದಿದ್ದರೆ ತುಂಬಾ ಸಮಸ್ಯೆ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಕುಂದಕೆರೆ ವಲಯಾರಣ್ಯಾಧಿಕಾರಿ ನಾಗೇಂದ್ರ ನಾಯ್ಕ ಮಾತನಾಡಿ, ಈ ವರ್ಷ ಅನುದಾನದ ಕೊರತೆಯಿಂದ ಕುಂದಕೆರೆ ವಲಯದಲ್ಲಿ ಸುಮಾರು 14 ಲಕ್ಷ ರೂಪಾಯಿಗಳಷ್ಟು ಪರಿಹಾರ ಬಾಕಿಯಿದೆ, ಸರ್ಕಾರದಿಂದ ಅನುದಾನ ಬಂದ ಕೂಡಲೇ ಎಲ್ಲಾ ಅರ್ಜಿಗಳಿಗೂ ಪರಿಹಾರ ವಿತರಣೆ ಮಾಡಲಾಗುವುದು. ಯಾವುದೇ ರೈತರು ಕರೆ ಮಾಡಿದರೆ ಕೂಡಲೇ ಸ್ಪಂದಿಸಲಾಗುವುದು. ಅರಣ್ಯ ಸಂರಕ್ಷಣೆಯಲ್ಲಿ ಕಾಡಂಚಿನ ಗ್ರಾಮಗಳ ಜನರ ನೆರವು ತುಂಬಾ ಅಗತ್ಯವಿದ್ದು ಎಂದಿನಂತೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ತೆರಕಣಾಂಬಿ ಠಾಣೆಯ ಸಹಾಯಕ ಸಬ್‌ಇನ್ಸ್‌ಪೆಕ್ಟರ್ ಎಸ್.ಮಹೇಶ್, ಡಿಆರ್‌ಎಫ್‌ಒ ಕಾರ್ತಿಕ್, ಮುಖಂಡ ಸುರೇಂದ್ರ, ಬಸವಣ್ಣ ಹಾಗೂ ಗ್ರಾಮಸ್ಥರು ಇದ್ದರು.

ದೀಪಾವಳಿಯಲ್ಲಿ ರಾತ್ರಿ 8 ರಿಂದ 10 ಗಂಟೆಯವರೆಗೆ ಮಾತ್ರ ಪಟಾಕಿ ಸ್ಫೋಟಿಸಲು ಅವಕಾಶ

ಚಾಮರಾಜನಗರ, ಅ.14– ದೀಪಾವಳಿ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಆಚರಿಸುವ ಕುರಿತು ಸರ್ವೋಚ್ಚ ನ್ಯಾಯಾಲಯವು ಪಟಾಕಿ ಬಳಕೆ ಕುರಿತಂತೆ ಸ್ಪಷ್ಟ ನಿರ್ದೇಶನಗಳನ್ನು ನೀಡಿದ್ದು, ರಾತ್ರಿ 8 ರಿಂದ 10 ಗಂಟೆಯವರೆಗೆ ಮಾತ್ರ ಪಟಾಕಿಗಳನ್ನು ಸ್ಫೋಟಿಸಲು ಅವಕಾಶ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ತಿಳಿಸಿದ್ದಾರೆ.

ಪಟಾಕಿಗಳನ್ನು ರಾತ್ರಿ 8 ರಿಂದ 10 ಗಂಟೆಯವರೆಗೆ ಮಾತ್ರ ಸ್ಫೋಟಿಸಬೇಕು. ಉಳಿದ ಸಮಯದಲ್ಲಿ ಪಟಾಕಿಗಳ ಸ್ಫೋಟವನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಲ್ಲಿ ಅನುಮತಿಸಿರುವ ಹಸಿರು ಪಟಾಕಿಗಳನ್ನು ಬಿಟ್ಟು ಉಳಿದ ಯಾವುದೇ ಇತರ ಪಟಾಕಿಗಳ ಮಾರಾಟ ಹಾಗೂ ಬಳಕೆಯನ್ನು ಸಹ ನಿಷೇಧಿಸಿದೆ. ಪಟಾಕಿ ಮಾರಾಟ ಮಾಡುವವರು ಹಾಗೂ ಪಟಾಕಿ ಸಂಗ್ರಹಿಸುವ ಗೋದಾಮುಗಳ ಮಾಲೀಕರು ಸಂಬಂಧ ಪಟ್ಟ ಎಲ್ಲಾ ಇಲಾಖೆಯ ಅನುಮತಿ ಪಡೆಯಬೇಕು.

ಎಲ್ಲಾ ಹಸಿರು ಪಟಾಕಿಗಳ ಮೇಲೆ ಹಾಗೂ ಅವುಗಳ ಪ್ಯಾಕೇಟ್ ಮೇಲೆ ಹಸಿರು ಪಟಾಕಿಯ ಚಿಹ್ನೆ ಇರುತ್ತದೆ ಹಾಗೂ ಕ್ಯೂಆರ್ ಕೋಡ್ ಸಹ ಇರುತ್ತದೆ. ಹಸಿರು ಪಟಾಕಿಗಳನ್ನು ಮಾತ್ರ ಮಾರಾಟ ಮಾಡಬೇಕು ಎಂದು ಡಿಸಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಎಸ್‌ಟಿ ಪರಿಷ್ಕರಣೆಯಿಂದ ಅನುಕೂಲ


ಜಿಎಸ್‌ಟಿ ಕಾರ್ಯಾಗಾರದಲ್ಲಿ ಬಿಜೆಪಿ ವಕ್ತಾರ ಮೋಹನ್ ವಿಶ್ವಾಸ್ ಮಾತನಾಡುತ್ತಿರುವುದು.

ಚಾಮರಾಜನಗರ: ಜಿಎಸ್‌ಟಿ ಕಡಿತದಿಂದ ಜನಸಾಮಾನ್ಯರಿಗೆ ಅನುಕೂಲವಾಗಿದೆ ಎಂದು ಬಿಜೆಪಿ ವಕ್ತಾರ ಮೋಹನ್ ವಿಶ್ವಾಸ್ ತಿಳಿಸಿದ್ದಾರೆ.

ನಗರದ ವರ್ತಕರ ಭವನದಲ್ಲಿ ಬಿಜೆಪಿ ವತಿಯಿಂದ ನಡೆದ ಜಿಎಸ್‌ಟಿ ಕಾರ್ಯಾಗಾರದಲ್ಲಿ ಮಾತನಾಡಿ, ಅವರು, ಸೆ.22 ರಂದು ಪ್ರಧಾನಮಂತ್ರಿ ನರೇಂದ್ರಮೋದಿ ಅವರು ದೃಢ ನಿರ್ಧಾರದ ಪರಿಣಾಮವಾಗಿ ದೇಶದ ಬಡಜನರು, ಮಧ್ಯಮ ವರ್ಗ, ಕೈಗಾರಿಕಾ ವಲಯ, ರೈತರು ಸೇರಿದಂತೆ ಪ್ರತಿಯೊಬ್ಬರಿಗೂ ದೊಡ್ಡ ಮಟ್ಟದಲ್ಲಿ ಅನುಕೂಲ ಆಗಿದೆ ಎಂದರು.

ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಆಹಾರ ಪದಾರ್ಥಗಳ ಮೇಲೆ ಶೇ 27 ರಷ್ಟು ತೆರಿಗೆ ಇತ್ತು ಒಂದು ತಲೆಗೆ ಹಾಕುವ ಕೊಬ್ಬರಿ ಎಣ್ಣೆ ಮೇಲೆ 27ರಷ್ಟು ತೆರಿಗೆ ಇತ್ತು. ಅದನ್ನು ನರೇಂದ್ರಮೋದಿ ಅವರು ಶೇ.5ಕ್ಕೆ ಇಳಿಸಿದ್ದಾರೆ. ಬಡವರ, ಮಧ್ಯಮ ವರ್ಗದವರ ದಿನನಿತ್ಯದ ವಸ್ತುಗಳ ಮೇಲೆ ಹಿಂದಿನ ಕಾಂಗ್ರೆಸ್ ಸರ್ಕಾರ ಹೇರಿದ ತೆರಿಗೆಯ ಭಾರವನ್ನು ನರೇಂದ್ರಮೋದಿ ಅವರು ಕಡಿಮೆ ಮಾಡಿದ್ದಾರೆ. ಎಂದರು.

ಒಂದು ಅಂದಾಜಿನ ಪ್ರಕಾರ ಜಿಎಸ್‌ಟಿ ಸುಧಾರಣೆಯಿಂದ ದೇಶದಲ್ಲಿ 2ಲಕ್ಷ ಕೋಟಿ ಅಧಿಕ ಹಣ ಉಳಿತಾಯ ಆಗುತ್ತದೆ ಎಂದು ಹೇಳಲಾಗಿದೆ. ಇದರಿಂದ ಜನರ ಕೈಯಲ್ಲಿ ತಿಂಗಳಲ್ಲಿ 2,3,4 ಸಾವಿರ ಹಣ ಉಳಿತಾಯ ಆಗುವ ದೃಢನಿರ್ಧಾರವನ್ನು ಮೋದಿಯವರು ಮಾಡಿದ್ದಾರೆ. ಯಾವ ಜಾಗತಿಕ ಮಟ್ಟದಲ್ಲಿ ಭಾರತದ ಮಾರುಕಟ್ಟೆಯನ್ನು ಒಂದು ಅಂತಾರಾಷ್ಟ್ರೀಯ ಮಾರುಕಟ್ಟೆಯನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲೂ ಸಹ ಬದಲಾವಣೆ ತಂದಿದ್ದಾರೆ. ರೈತರು ಬಳಸುವ ಟ್ರಾಕ್ಟರ್, ಬಿಡಿಭಾಗಗಳು, ಡ್ರಿಪ್ ಇರಿಗೇಶನ್, ಆರ್ಗಾನಿಕ್ ಸೀಡ್ಸ್ ಮೇಲೆ ಇದ್ದ ತೆರಿಕೆ ಕಡಿಮೆ ಮಾಡಿದ್ದಾರೆ, ಔಷಧಿಗಳ ಬೆಲೆಯನ್ನು ಸೊನ್ನೆಗೆ ಇಳಿಸಲಾಗಿದೆ. ಜಿಎಸ್‌ಟಿ ಸುಧಾರಣೆಯಿಂದ ಎಲ್ಲರಿಗೂ ಅನುಕೂಲವಾಗಿದೆ ಎಂದರು.

ಕುಟುಂಬ ಸಮೇತ ಡಿಸಿಎಂ ಡಿ.ಕೆ.ಶಿವಕುಮಾರ್ ಹಾಸನಾಂಬೆ ದರ್ಶನ

ಹಾಸನ, ಅ.14– ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕುಟುಂಬ ಸಮೇತ ಮಂಗಳವಾರ ಹಾಸನಾಂಬೆ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು.

ಬುಧವಾರ(ಅ.15) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಉಪ ಮುಖ್ಯಮಂತ್ರಿಗಳೂ ದರ್ಶನಕ್ಕೆ ಆಗಮಿಸುತ್ತಾರೆಂದು ಹೇಳಲಾಗಿತ್ತು. ಆದರೆ ಒಂದು ದಿನ ಮುಂಚಿತವಾಗಿಯೇ ಕುಟುಂಬ ಸಮೇತ ಡಿಕೆಶಿ ದರ್ಶನ ಪಡೆದಿದ್ದಾರೆ.

ಡಿ.ಕೆ.ಶಿವಕುಮಾರ್ ಅವರು ಕುಟುಂಬ ಸಮೇತ ಹಾಸನಕ್ಕೆ ಆಗಮಿಸುತ್ತಿದ್ದಂತೆ ಜಿಲ್ಲಾಡಳಿತವು ಅವರನ್ನು ಕಹಳೆ ಹಾಗೂ ಮಂಗಳವಾದ್ಯದ ಮೂಲಕ ಸಾಂಪ್ರದಾಯಿಕವಾಗಿ ಸ್ವಾಗತಿಸಿತು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ, ಸಂಸದ ಶ್ರೇಯಸ್ ಪಟೇಲ್, ಶಾಸಕ ಶಿವಲಿಂಗೇಗೌಡ ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.

ಜನರಿಗಾಗಿ ಪ್ರಾರ್ಥನೆ: ದರ್ಶನದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್, ಜ್ಯೋತಿ ಸ್ವರೂಪಿಣಿ ಹಾಸನಾಂಬೆಯ ದರ್ಶನ ಪಡೆದಿರುವುದು ನನ್ನ ಹಾಗೂ ನನ್ನ ಕುಟುಂಬದ ಸೌಭಾಗ್ಯ, ನೆಮ್ಮದಿ ಹಾಗೂ ಶಾಂತಿಯ ಬದುಕಿಗಾಗಿ ಭಕ್ತರು ಭಗವಂತನ ಬಳಿ ಬರುತ್ತಾರೆ, ದೇವಿಯ ದರ್ಶನ ಮಾಡಿ ಅನುಗ್ರಹ ಪಡೆಯುತ್ತಾರೆ. ಸರ್ವರ ದುಃಖವನ್ನು ದೂರ ಮಾಡುವ ದೇವಿ ದುರ್ಗಾದೇವಿ. ರಾಜ್ಯದ ಜನರಿಗೆ ನೆಮ್ಮದಿ, ಶಾಂತಿ, ಸಮೃದ್ಧಿ ನೀಡಲೆಂದು ಪ್ರಾರ್ಥಿಸಿದ್ದೇನೆ ಎಂದು ತಿಳಿಸಿದರು.

ಇದೇ ವೇಳೆ ಹಾಸನಾಂಬೆ ದರ್ಶನಕ್ಕೆ ಸಚಿವ ಕೃಷ್ಣಬೈರೇಗೌಡ ಅವರು ಕೆಲ ಕಟ್ಟು ನಿಟ್ಟಿನ ನಿಯಮ ಜಾರಿಗೆ ತಂದಿರುವ ಕಾರಣ ಕೆಲ ರಾಜಕಾರಣಿಗಳಿಗೆ ತೊಂದರೆ ಆಗಿರಬಹುದು ಎಂದರು.

ದೈವಭಕ್ತ ರಾಜಕಾರಣಿ: ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ದೈವಭಕ್ತ ರಾಜಕಾರಣಿ. ನಮ್ಮ ಸಾಹೇಬರು ದೇವಿ ದರ್ಶನ ಮಾಡಿದ್ದಾರೆ ಅವರಿಗೆ ಅನುಗ್ರಹ, ಶ್ರೇಯಸ್ಸು ಸಿಗಲಿ ಎಂದು ಎಂದು ಗೃಹಮಂಡಳಿ ಅಧ್ಯಕ್ಷರೂ ಆದ ಶಾಸಕ ಕೆ.ಎಂ.ಶಿವಲಿಂಗೇಗೌಡ ಹಾರೈಸಿದರು.

ಸಂತಸ ಹಂಚಿಕೊಂಡ ಡಿಕೆಶಿ: ಹಾಸನಾಂಬೆ ದರ್ಶನ ಪಡೆದ ಡಿಕೆಶಿ ಸಾಮಾಜಿಕ ಜಾಲತಾಣದಲ್ಲಿ ಸಂತಸ ಹಂಚಿಕೊಂಡಿದ್ದಾರೆ. ಜ್ಯೋತಿರ್ಮಯಿ ಜಗನ್ಮಾತೆ, ಮಾಯಾರೂಪಧಾರಿಣಿ, ಹಾಸನಾಂಬೇ ನಮಸ್ತೇ ಅಸ್ತು, ನಿತ್ಯಂ ಮಮ ರಕ್ಷಯ. ಹಾಸನದ ಅಧಿದೇವತೆ ಹಾಗೂ ಶಕ್ತಿ ಪೀಠಗಳಲ್ಲಿ ಒಂದಾದ ಪ್ರಸಿದ್ಧ ಪುಣ್ಯಕ್ಷೇತ್ರ ಶ್ರೀ ಹಾಸನಾಂಬ ದೇವಸ್ಥಾನಕ್ಕೆ ಕುಟುಂಬ ಸಮೇತ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದೆ. ವರ್ಷಕ್ಕೊಮ್ಮೆ ಮಾತ್ರ ದರ್ಶನ ನೀಡುವ ತಾಯಿ ಹಾಸನಾಂಬೆ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವುದರ ಜೊತೆಗೆ ಹಲವು ಪವಾಡಗಳನ್ನು ಮಾಡುವ ಮೂಲಕ ಭಕ್ತರ ಹೃದಯಗಳಲ್ಲಿ ವಿಶೇಷ ಸ್ಥಾನ ಪಡೆದಿದ್ದಾಳೆ. ತಾಯಿ ಸನ್ನಿಧಿಯಲ್ಲಿ ನಾಡನ್ನು ಸಮೃದ್ಧವಾಗಿರಿಸು ಎಂದು ಪ್ರಾರ್ಥನೆ ಸಲ್ಲಿಸಿದೆ ಎಂದು ತಿಳಿಸಿದ್ದಾರೆ.


ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದಂಪತಿ ಶಕ್ತಿದೇವತೆ ಹಾಸನಾಂಬೆ ದರ್ಶನ ಪಡೆದರು.

ಡಿಕೆಶಿ ದಂಪತಿಗೆ ದೇವಿ ಪ್ರಸಾದ

ಹಾಸನಾಂಬೆ ಗರ್ಭಗುಡಿ ಬಳಿ ಡಿ.ಕೆ. ಶಿವಕುಮಾರ್ ದಂಪತಿ ಕೈಮುಗಿದು ಧ್ಯಾನದಲ್ಲಿ ಮಗ್ನರಾಗಿ ಪ್ರಾರ್ಥಿಸುತ್ತಿದ್ದರು. ಈ ವೇಳೆ ದೇವಿಯ ಮೇಲಿದ್ದ ತಾವರೆ ಹಾಗೂ ಗುಲಾಬಿ ಹೂವು ಆಶೀರ್ವಾದದ ರೂಪದಲ್ಲಿ ಬಿದ್ದಿದ್ದನ್ನು ಕಂಡು ಸಂತಸಗೊಂಡರು. ಬಳಿಕ ಅರ್ಚಕರು, ನಿಮಗೆ ದೇವಿ ಅನುಗ್ರಹಿಸಿದ್ದಾಳೆ ಎನ್ನುತ್ತಾ ಹೂವನ್ನು ನೀಡಿದರು. ಡಿಕೆಶಿ ದಂಪತಿ ಮತ್ತಷ್ಟು ಖುಷಿಯಿಂದ ದೇವಿಗೆ ನಮಿಸಿ, ನಿರ್ಗಮಿಸಿದರು.

ಜಾತಿಗಣತಿ ಅವಧಿ ಮತ್ತೆ ವಿಸ್ತರಣೆ ಇಲ್ಲ: ಸಿಎಸ್

ಮೈಸೂರು, ಅ.14(ಎಸ್‌ಪಿಎನ್)– ರಾಜ್ಯದಲ್ಲಿ ನಡೆಯುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಜಿಲ್ಲಾವಾರು ಪ್ರಗತಿಯಲ್ಲಿದ್ದು, ಶೇ.80ಕ್ಕಿಂತ ಕಡಿಮೆ ಇರುವ ಜಿಲ್ಲೆಗಳಲ್ಲಿ ಅ.18ರೊಳಗೆ ಪೂರ್ಣಗೊಳಿಸಬೇಕು. ಮತ್ತೆ ಅದರ ವಿಸ್ತರಣೆ ಸಾಧ್ಯವಿಲ್ಲದ ಕಾರಣ ಆಯಾಯ ಜಿಲ್ಲಾಧಿಕಾರಿಗಳು ಅ.18ರೊಳಗೆ ಪೂರ್ಣಗೊಳಿಸುವುದು ಕಡ್ಡಾಯ ಎಂದು ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಮಂಗಳವಾರ ಆದೇಶಿಸಿದ್ದಾರೆ.


ಡಾ.ಶಾಲಿನಿ

ರಾಜ್ಯದಲ್ಲಿ ಒಟ್ಟು 6,14,96,236 ಜನಸಂಖ್ಯೆಯಿದ್ದು, ಇದರಲ್ಲಿ 4,96,56,191 ಮಂದಿ ಸಮೀಕ್ಷೆಗೊಳಪಟ್ಟು, ಒಟ್ಟು ಶೇ.80.75 ರಷ್ಟು ಪೂರ್ಣಗೊಂಡಿದೆ. ಮೈಸೂರು ಜಿಲ್ಲೆಯಲ್ಲಿ ಒಟ್ಟು 35,89,224 ಜನಸಂಖ್ಯೆಯಿದ್ದು, ಇಲ್ಲಿಯವರೆಗೆ 27,19,724 ಮಂದಿ ಸಮೀಕ್ಷೆಗೊಳಪಟ್ಟು, ಶೇ.75.77ರಷ್ಟು ಪೂರ್ಣಗೊಂಡಿದೆ.

ಚಾಮರಾಜನಗರದಲ್ಲಿ 11,03,618 ಜನಸಂಖ್ಯೆಯಿದ್ದು, ಇಲ್ಲಿಯವರೆಗೆ 9,01,768 ಮಂದಿ ಸಮೀಕ್ಷೆಗೊಳಪಟ್ಟು, ಶೇ.81.71 ರಷ್ಟು ಪೂರ್ಣಗೊಂಡಿದೆ. ಹಾಸನದಲ್ಲಿ 18,56,011 ಜನಸಂಖ್ಯೆಯಿದ್ದು, ಇದರಲ್ಲಿ 16,18,477 ಮಂದಿ ಸಮೀಕ್ಷೆಗೊಳಪಟ್ಟು, ಶೇ.87.63 ರಷ್ಟು ಪೂರ್ಣಗೊಂಡಿದೆ.

ಮಂಡ್ಯದಲ್ಲಿ 18,66,350 ಜನಸಂಖ್ಯೆಯಿದ್ದು, ಇದರಲ್ಲಿ 16,87,793 ಮಂದಿ ಸಮೀಕ್ಷೆಗೊಳಪಟ್ಟು, ಶೇ.90.43 ರಷ್ಟು ಪೂರ್ಣಗೊಂಡಿದೆ. ಕೊಡಗು ಜಿಲ್ಲೆಯಲ್ಲಿ 5,62,969 ಜನಸಂಖ್ಯೆಯಿದ್ದು, ಇದರಲ್ಲಿ 4,11,637 ಮಂದಿ ಸಮೀಕ್ಷೆಗೊಳಪಟ್ಟು, ಶೇ.73.12 ರಷ್ಟು ಪೂರ್ಣಗೊಂಡಿದೆ.

ಗಣತಿಗೆ ತೆರಳಿದ್ದ ಶಿಕ್ಷಕಿ ನಾಪತ್ತೆ: ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯಕ್ಕೆ ಅ.13 ರಂದು ತೆರಳಿದ್ದ ಕೋಲಾರ ಜಿಲ್ಲೆ ಮತ್ತು ತಾಲೂಕಿನ ಹೊಸಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹಶಿಕ್ಷಕಿ ಅಖ್ತರಿ ಬೇಗಂ ಎನ್ನುವವರು ನಾಪತ್ತೆಯಾಗಿದ್ದು, ಹಿರಿಯ ಅಧಿಕಾರಿಗಳ ಒತ್ತಡದಿಂದ ಮಾನಸಿಕ ಖಿನ್ನತೆಗೊಳಗಾಗಿದ್ದರು ಎಂದು ಸರ್ಕಾರಿ ನೌಕರರ ವಾಟ್ಸಾಪ್ ಗ್ರೂಪ್‌ಗಳಲ್ಲಿ ಭಾರೀ ಚರ್ಚೆಯಾಗುತ್ತಿದೆ. ಇವರು ಪತ್ತೆಯಾದಲ್ಲಿ ಮೊ.ನಂ:84319–47689, 78926–29342 ಸಂಪರ್ಕಿಸುವಂತೆ ನೌಕರರ ಸಂಘಟನೆಯ ಮುಖಂಡರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ವಿದ್ಯೆ, ಪ್ರತಿಭೆ ಯಾರಪ್ಪನ ಮನೆ ಸ್ವತ್ತಲ್ಲ; ಅವಕಾಶ ಸಿಕ್ಕರೆ ಎಲ್ಲಾ ಬೆಳೀತಾರೆ: ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು,ಅ.14(ಕೆಎಂಶಿ)–ವಿದ್ಯೆ ಮತ್ತು ಪ್ರತಿಭೆ ಯಾರ ಅಪ್ಪನ ಮನೆ ಸ್ವತ್ತಲ್ಲ, ಅವಕಾಶ ಸಿಗಬೇಕು ಅಷ್ಟೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ನೃಪತುಂಗ ವಿಶ್ವ ವಿದ್ಯಾಲಯದಲ್ಲಿ ರೂಸಾ ಯೋಜನೆಯಡಿ ನಿರ್ಮಿಸಿರುವ ನೂತನ ಶೈಕ್ಷಣಿಕ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ರಾಮಾಯಣ ಬರೆದ ವಾಲ್ಮೀಕಿ ಬೇಡರ ಜಾತಿಯಾದರೆ, ಮಹಾಭಾರತ ಬರೆದ ವ್ಯಾಸರು ಬೆಸ್ತ ಸಮುದಾಯದವರು. ಇದರಿಂದ ತಿಳಿದು ಬರುವುದು ಏನೆಂದರೆ ವಿದ್ಯೆ, ಪ್ರತಿಭೆ ಯಾರ ಸ್ವತ್ತೂ ಅಲ್ಲ, ಅವಕಾಶಗಳು ಬೇಕು ಅಷ್ಟೆ. ವೈಚಾರಿಕತೆ, ವೈಜ್ಞಾನಿಕತೆ ಬೆಳೆಸಿಕೊಂಡರೆ ನಿಮ್ಮ ಹಾಗೂ ಸಮಾಜದ ಪ್ರಗತಿ ಸಾಧ್ಯ. ಈ ದಿಕ್ಕಿನಲ್ಲಿ ವಿಜ್ಞಾನದ ವಿದ್ಯಾರ್ಥಿಗಳು ಸಮಾಜ ವನ್ನು ಮುನ್ನಡೆಸಬೇಕು ಎಂದರು.



ವಿಜ್ಞಾನದ ಓದು ಮತ್ತು ಅಧ್ಯಯನ ಮಾಡುವವರ ಸಂಖ್ಯೆ ಕಡಿಮೆ ಆಗುತ್ತಿರುವುದು ಅಪಾಯದ ಸಂಗತಿ. ವೈಜ್ಞಾನಿಕ ಮನೋಭಾವ ಮತ್ತು ವಿಜ್ಞಾನದ ಶಿಕ್ಷಣ ಸಮಾಜ ಮತ್ತು ದೇಶದ ಪ್ರಗತಿಗೆ ಅತ್ಯಗತ್ಯ.

ವಿಜ್ಞಾನ ಓದಿದವರೂ ಮೂಢ ನಂಬಿಕೆ ಮತ್ತು ಕಂದಾಚಾರಕ್ಕೆ ಗಂಟು ಬೀಳುವುದು ಶಿಕ್ಷಣ ಕಲಿಕೆಯಲ್ಲಿನ ಕೊರತೆಯಾಗಿದೆ.

ಬಹಳ ಹಿಂದೆಯೇ ಬಸವಾದಿ ಶರಣರು ಮೌಢ್ಯ, ಕಂದಾಚಾರಗಳ ವಿರುದ್ಧ ಕರೆ ನೀಡಿದರು, ಆದರೆ, ಇವತ್ತಿಗೂ ಮೌಢ್ಯ ಹೋಗಿಲ್ಲ, ಏಕೆಂದರೆ ನಮ್ಮದು ಜಾತಿ ತಾರತಮ್ಯದ ಸಮಾಜ, ಇದಕ್ಕೆ ಚಲನೆ ಇಲ್ಲ, ಪಟ್ಟಭದ್ರರು ತಾರತಮ್ಯ ಗಟ್ಟಿಗೊಳಿಸುವ ಸಲುವಾಗಿಯೇ ಮೌಢ್ಯ ಬಿತ್ತುತ್ತಾರೆ.

ನಾನು ಮೊದಲ ಬಾರಿ ಮುಖ್ಯಮಂತ್ರಿ ಆದಾಗ 'ಮೌಢ್ಯ ನಿಷೇಧ ಕಾಯ್ದೆ' ಜಾರಿಗೆ ತರಲು ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ, ಅಷ್ಟರಮಟ್ಟಿಗೆ ಮೌಢ್ಯ ಮತ್ತು ಮೌಢ್ಯ ಹಂಚುವ ಪಟ್ಟಭದ್ರರು ಆಳವಾಗಿ ಬೇರು ಬಿಟ್ಟಿದ್ದಾರೆ. ವಿಜ್ಞಾನ ಓದಿದವರಿಗೆಲ್ಲಾ ವೈಜ್ಞಾನಿಕ ಮನೋಭಾವ ಇಲ್ಲದಿರುವುದು ದುರಂತ, ವಿಜ್ಞಾನ ಓದಿಯೂ ಹಣೆ ಬರಹ ಮತ್ತು ಕರ್ಮ ಸಿದ್ಧಾಂತ, ಗ್ರಹಚಾರಗಳನ್ನೆಲ್ಲಾ ನಂಬುತ್ತಾರೆಂದರೆ ಇವರು ವಿಜ್ಞಾನ ಓದಿದ್ದೇ ದಂಡ.

ದೇಶದ ಪ್ರಧಾನಿಯಾಗಿದ್ದ ಜವಾಹರ ಲಾಲ್ ನೆಹರು, ಯುವಜನತೆ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಲಿ ಎಂಬ ದೂರ ದೃಷ್ಟಿ ಹೊಂದಿದ್ದು, ಇದಕ್ಕೆ ಅಗತ್ಯವಾದ ಶೈಕ್ಷಣಿಕ ಸಾಧನೆಗಳಿಗೆ ಕಾರಣರಾಗಿದ್ದರು ಎಂದರು.

ಮುಖ್ಯಮಂತ್ರಿ ಔತಣಕೂಟ; 300 ರೂ. ಊಟ ಹಾಕಿಸಿ ಬಿಹಾರ ಚುನಾವಣೆಗೆ 300 ಕೋಟಿ ಕಲೆಕ್ಷನ್ ಪ್ಲಾನ್!

ವಿಪಕ್ಷ ನಾಯಕ ಆರ್.ಅಶೋಕ್ ಆರೋಪ

ಬೆಂಗಳೂರು,ಅ.14(ಕೆಎಂಶಿ)–ಬಿಹಾರ ವಿಧಾನಸಭಾ ಚುನಾವಣೆಗೆ 300 ಕೋಟಿ ರೂ. ತಮ್ಮ ಸಹೋದ್ಯೋಗಿಗಳಿಂದ ವಸೂಲಿ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂತ್ರಿಗಳಿಗೆ ಔತಣಕೂಟ ಏರ್ಪಡಿಸಿದ್ದರು ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಇಂದಿಲ್ಲಿ ಗುರುತರ ಆರೋಪ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಶಾಸಕ ಪಪ್ಪಿಯ ಚಿನ್ನದ ಗಟ್ಟಿ ಬಿಹಾರ ತಲುಪುವ ಮುನ್ನ ಜಾರಿ ನಿರ್ದೇಶನಾಲಯದ (ಇ.ಡಿ.) ವಶಕ್ಕೆ ಸೇರಿದ್ದರಿಂದ ಆರ್ಥಿಕ ತಜ್ಞ ಮುಖ್ಯಮಂತ್ರಿ, ಸಚಿವರೆಲ್ಲರಿಗೂ ಕೋಟಿ ಕೋಟಿ ರೂ. ನಿಗದಿ ಮಾಡಿದ್ದಾರೆ ಎಂದರು.

ಸಚಿವರಿಗೆ 300 ರೂ. ಊಟ ಹಾಕಿಸಿ 300 ಕೋಟಿ ರೂ. ಸಂಗ್ರಹಿಸಲು ಹೊರಟಿದ್ದಾರೆ ನಮ್ಮ ಆರ್ಥಿಕ ತಜ್ಞರು ಎಂದು ಮೂದಲಿಸಿದರು.




ಮಾಧ್ಯಮಗಳಲ್ಲಿ ಬಂದಿರುವುದೆಲ್ಲಾ ಸುಳ್ಳು ಸುದ್ದಿ, ಔತಣಕೂಟದಲ್ಲಿ ಯಾವ ರಾಜಕೀಯ ಚರ್ಚೆಯೂ ನಡೆದಿಲ್ಲ. ಕಾಂಗ್ರೆಸ್‌ನ ದೆಹಲಿ ಪಪ್ಪಿ ಮಾಡಿರುವ ಆದೇಶವನ್ನು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳು ನಮ್ರತೆಯಿಂದ ಸ್ವೀಕರಿಸಿ, ಚುನಾವಣೆಗೆ ರಾಜ್ಯದ ಕಪ್ಪ ತಲುಪಿಸುತ್ತಿದ್ದಾರೆ. ಸಚಿವರು ನಿರ್ವಹಿಸುವ ಖಾತೆಯ ಮಹತ್ವದ ಮೇಲೆ ಕೋಟಿ ಕೋಟಿ ರೂ.ಗಳನ್ನು ಮುಖ್ಯಮಂತ್ರಿ ನಿಗದಿಪಡಿಸಿ, ಆ ಹಣವನ್ನು ಎಲ್ಲಿಗೆ ತಲುಪಿಸಬೇಕೆಂದು ಸೂಚಿಸಿದ್ದಾರೆ.

ಔತಣಕೂಟಕ್ಕೂ ಮುನ್ನವೇ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳು ಸಚಿವರನ್ನು ಪ್ರತ್ಯೇಕವಾಗಿ ಕರೆದು ವರಿಷ್ಠರ ಸಂದೇಶ ತಿಳಿಸಿ, ನಾವು ಬಿಹಾರ ಹಾಗೂ ಮುಂದೆ ಕೇರಳ ಚುನಾವಣೆ ಗೆಲ್ಲಲೇಬೇಕಿದೆ. ಆದ್ದರಿಂದ ಹಣ ಹೊಂದಾಣಿಕೆ ಮಾಡಿ ಎಂದಿದ್ದಾರೆ. ಇದನ್ನು ಮರೆಮಾಚಲು ನಾಯಕತ್ವ, ಸಂಪುಟ ಪುನರ್ರಚನೆ, ಅಭಿವೃದ್ಧಿ, ಜಿಲ್ಲಾ ಪಂಚಾಯತ್ ಚುನಾವಣೆ ಬಗ್ಗೆ ಚರ್ಚೆ ಆಯಿತೆಂದು ಸುಳ್ಳು ಸುದ್ದಿ ಹಬ್ಬಿಸಿದ್ದಾರೆ ಎಂದರು.

Aquaguard & Kent Water Purifier
Sales & Service
9901200444
#319, Near Mega Medical Store, Kuvempunagar

SITE FOR SALE
40x60
MUDA SITE FOR SALE
at RT Nagar, Mysore
at just 1cr
8105367816
6364034210

ಮಹರ್ಷಿ ವಾಲ್ಮೀಕಿ ಜಯಂತಿ


ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ವತಿಯಿಂದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಯಿತು. ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಎಸ್‌ಬಿಎಂ ಮಂಜು, ಎನ್.ಯೋಗಾನಂದ್, ರಾಜಕೀಯ ರವಿಕುಮಾರ್, ಆರ್.ಸೋಮಣ್ಣ, ಹೆಚ್.ಹರೀಶ್‌ಕುಮಾರ್, ವೈ.ವಿಕಾಸ್, ಎ.ಮಂಚಪ್ಪ, ಪಡುವಾರಹಳ್ಳಿಯ ಎಂ.ರಾಮಕೃಷ್ಣ, ಸಿ.ಚಂದ್ರಶೇಖರ್, ಪಿ.ರಾಜೇಶ್ವರಿ, ವಸಂತ ಮುನೀಶ್, ಸಿ.ಎಸ್.ರಾಮಕೃಷ್ಣಯ್ಯ, ಕಾರ್ಯದರ್ಶಿ ಕೆ.ಹರ್ಷಿತ್ ಗೌಡ ಭಾಗವಹಿಸಿದ್ದರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸಮೀಕ್ಷೆ ವೇಳೆ ಮೃತ ಶಿಕ್ಷಕರ ಕುಟುಂಬಕ್ಕೆ ತಲಾ 20 ಲಕ್ಷ ಪರಿಹಾರ ಬಿಡುಗಡೆ

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಅವಧಿಯಲ್ಲಿ ಮೃತಪಟ್ಟ ಇಬ್ಬರು ಶಿಕ್ಷಕರ ಕುಟುಂಬಕ್ಕೆ ಸರ್ಕಾರ ತಲಾ 20 ಲಕ್ಷ ಪರಿಹಾರ ಬಿಡುಗಡೆ ಮಾಡಿದೆ.

ಬಾಗಲಕೋಟೆ ಜಿಲ್ಲೆಯ ದಾನಮ್ಮ ಐ ನಂದರಗಿ ಅವರು ರಸ್ತೆ ಅಪಘಾತದಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆಯ ವೈ.ವಿ. ರಾಮಕೃಷ್ಣಪ್ಪ ಅವರು ಹೃದಯಾಘಾತದಿಂದ ಮೃತಪಟ್ಟಿದ್ದರು. ಮೃತರ ಅವಲಂಬಿತರಿಗೆ ಪರಿಹಾರ ಧನ ಮಂಜೂರು ಮಾಡುವಂತೆ ಎರಡೂ ಜಿಲ್ಲಾಡಳಿತಗಳು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದವು. ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಈಚೆಗೆ ನಡೆದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಪರಿಹಾರ ಮೊತ್ತವನ್ನು ಬಾಗಲಕೋಟೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಗಳ ಖಾತೆಗೆ ಜಮೆ ಮಾಡಿದೆ. ಮೃತ ಶಿಕ್ಷಕರ ಅವಲಂಬಿತ ಕುಟುಂಬಕ್ಕೆ ಪರಿಹಾರ ಧನ ಬಿಡುಗಡೆ ಮಾಡುವಂತೆ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿತ್ತು.

ಸಾರ್ವಜನಿಕರ ತಿಳುವಳಿಕೆಗಾಗಿ

ಈ ಮೂಲಕ ನನ್ನ ಕಕ್ಷಿದಾರರಾದ, ಮೈಸೂರು ಜಿಲ್ಲೆ ಮೈಸೂರು ನಗರ ವಿ.ವಿ. ಮೊಹಲ್ಲಾ, 6ನೇ ಮುಖ್ಯ ರಸ್ತೆ, 8ನೇ ಕ್ರಾಸ್‌ನಲ್ಲಿರುವ ಮನೆ ನಂ. 2803 ರಲ್ಲಿ ವಾಸಿಸುತ್ತಿರುವ ಲೇಟ್ ಶ್ರೀ ಶೇಷಾದ್ರಿರವರ ಧರ್ಮಪತ್ನಿ 75 ವರ್ಷ ವಯಸ್ಸಿನ ಶ್ರೀಮತಿ ಚೂಡಾಮಣಿ ರವರು ಶ್ರೀ ರಾಜೇಶ್ ಬಿನ್ ಲೇಟ್ ಶೇಷಾದ್ರಿ ರವರ ತಾಯಿಯಾಗಿದ್ದು, ಇವರ ಮಗ ಶ್ರೀ ರಾಜೇಶ್‌ನು ತನ್ನ ಎಲ್ಲ ಸಂಬಂಧಗಳನ್ನು ಕಡಿದುಕೊಂಡು ಹೋಗಿ ಸುಮಾರು ಆರು ತಿಂಗಳ ಮೇಲಾಗಿರುತ್ತದೆ. ಈ ಬಗ್ಗೆ ಸದರಿ ಶ್ರೀಮತಿ ಚೂಡಾಮಣಿ ರವರು ಆತನು ನಾಪತ್ತೆಯಾಗಿರುವ ಬಗ್ಗೆ ವಿ.ವಿ. ಪುರಂ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ. ಸದರಿ ರಾಜೇಶ್‌ನ ಸ್ನೇಹಿತರು, ಸಾಲ ನೀಡಿರುವವರು, ತೊಂದರೆಗೆ ಒಳಗಾದವರು ಎಂದು ಹೇಳಿಕೊಂಡು ಕೆಲವು ವ್ಯಕ್ತಿಗಳು, ಸಮಾಜಘಾತುಕ ಹಾಗೂ ಪಟ್ಟಭದ್ರ ಹಿತಾಸಕ್ತಿಗಳು ನನ್ನ ಕಕ್ಷಿದಾರರಿಗೆ ನಿರಂತರ ಕಿರುಕುಳ ನೀಡುತ್ತಿದ್ದು, ಸಂಬಂಧ ಕಳೆದುಕೊಂಡಿರುವ ಅವರ ಮಗ ಶ್ರೀ ರಾಜೇಶ್‌ನು ನಡೆಸಿದ ಬಹುದಾದ ಯಾವುದೇ ವ್ಯವಹಾರಗಳಿಗೂ ನನ್ನ ಕಕ್ಷಿದಾರರಿಗೂ ಸಂಬಂಧವಿರುವುದಿಲ್ಲ. ನನ್ನ ಕಕ್ಷಿದಾರರು ಈ ನಿರಂತರ ಕಿರುಕುಳದಿಂದ ಬೇಸತ್ತು ರಕ್ಷಣೆ ಕೋರಿ, ಹಾಗೂ ತತ್ಸಂಬಂಧ ಸಂಬಂಧಿಸಿದ ಪೋಲೀಸ್ ಹಾಗೂ ರಾಜ್ಯ ಮಹಿಳಾ ಆಯೋಗಕ್ಕೂ ದೂರು ಸಲ್ಲಿಸಲಿದ್ದಾರೆ.

ಆದುದರಿಂದ ನನ್ನ ಕಕ್ಷಿದಾರರ ಮಗ ರಾಜೇಶ್‌ನ ಹತ್ತಿರದವರು, ಸ್ನೇಹಿತರು, ಅವನೊಡನೆ ಯಾವುದೇ ವ್ಯವಹಾರ ನಡೆಸಿರುವವರು ಮತ್ತು ಸಾರ್ವಜನಿಕರಲ್ಲಿ ತಿಳಿಯ ಪಡಿಸುವುದೇನೆಂದರೆ ಶ್ರೀ ರಾಜೇಶ್‌ನಿಗೂ ನನ್ನ ಕಕ್ಷಿದಾರರಿಗೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ. ಅವನ ಯಾವುದೇ ವ್ಯವಹಾರ ಕ್ಕೂ ನನ್ನ ಕಕ್ಷಿದಾರರು ಬಾಧ್ಯರಲ್ಲ. ಅವನ ಹೆಸರಿನಲ್ಲಿ ಪ್ರೇರಿತರಾಗಿರುವ ನನ್ನ ಕಕ್ಷಿದಾರರಿಗೆ ಕಿರುಕುಳ ನೀಡಿ ಅವರ ನೆಮ್ಮದಿಯ ಬದುಕಿಗೆ ಭಂಗ ತಂದಲ್ಲಿ ಸಂಬಂಧಿಸಿದವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವುದಾಗಿ ಈ ಮೂಲಕ ತಿಳಿಸಲಾಗಿದೆ.

Sd/- Dr. M.N. Ravishankar, B.Sc., M.A., LL.M., Ph.D., Advocate, KAR 4976/1999,
#513, Bindiya Complex, 1st Floor, Thyagaraja Road, Near Agrahara Circle, Mysore.
ಸ್ಥಳ: ಮೈಸೂರು
ದಿನಾಂಕ: 14–10–2025

ಪುರಸಭೆ ಕಾರ್ಯಾಲಯ, ವಿರಾಜಪೇಟೆ
ಕೊಡಗು ಜಿಲ್ಲೆ – 571218

ಇ ಮೇಲ್:–itstaff_ulb_virajpet@yahoo.com
ವೆಬ್ ಸೈಟ್:– www.virajpettown.mrc.gov.in
ದೂರವಾಣಿ ಸಂಖ್ಯೆ:– 08274–257332

ಕ್ರಸಂ.ನಂ.ಪು.ವಿ/ಎಸ್.ಎಫ್.ಸಿ.ವಿ.ಅ.15ನೇ ಹ.ಸಾ.ಮೂ.ಅ.ಎಸ್.ಎಫ್.ಸಿ.ಕು.ನೀ.ಅ.ಕೇಪು.ಅ/ಟೆ–06/2025–26
ದಿನಾಂಕ: 13/10/2025.

"ಟೆಂಡರ್ ಪ್ರಕಟಣೆ"
(ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

ವಿರಾಜಪೇಟೆ ಪುರಸಭೆಯ 2024–25ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ, 2025–26ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನ, 2025–26ನೇ ಸಾಲಿನ ಎಸ್.ಎಫ್.ಸಿ ಅನುದಾನ,2024–25 ಹಾಗೂ 2025–26 ನೇಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನ ಮತ್ತು ವಿರಾಜಪೇಟೆ ಪುರಸಭೆಯ ಕೇಂದ್ರ ಪುರಸ್ಕೃತ ಅಮೃತ 20 ಯೋಜನೆಯಡಿಯಲ್ಲಿ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000, ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ 1ರ ನಿಯಮಗಳಿಗನುಸಾರ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರ ಗಳನ್ನು **www.kppp.karnataka.gov.in** ವೆಬ್ ಸೈಟ್ ಮೂಲಕ ಪಡೆದು ಕೊಂಡು ನಂತರ ಭರ್ತಿ ಮಾಡಿದ ಟೆಂಡರ್ ಗಳನ್ನು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸ ಬಹುದು.

1. ಟೆಂಡರ್ ಫಾರಂಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ : 14/10/2025 ರಿಂದ 28/10/2025 ಸಂಜೆ 17:30ಗಂಟೆಗೆ
2. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 28/10/2025 ಸಂಜೆ 17:30 ಗಂಟೆ ವರೆಗೆ
3. ಟೆಂಡರ್ ತೆರೆಯುವ ದಿನಾಂಕ : 30/10/2025 ಬೆಳಗ್ಗೆ 11.30 ಗಂಟೆಯ ನಂತರ
4. ಟೆಂಡರುಗಳನ್ನು ತೆರೆಯುವ ಸ್ಥಳ : ವಿರಾಜಪೇಟೆ ಪುರಸಭೆ

ಕಾಮಗಾರಿಗಳ ವಿವರ, ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್‌ಸೈಟ್ **www.virajpettown.mrc.gov.in** ನಲ್ಲಿ ಮತ್ತು ಕಛೇರಿಯ ಸೂಚನಾ ಫಲಕವನ್ನು ನೋಡ ಬಹುದಾಗಿದೆ.

ಸಹಿ/– ಶ್ರೀಮತಿ. ಎಂ.ಕೆ ದೇಚಮ್ಮ ರವರು
ಅಧ್ಯಕ್ಷರು, ಪುರಸಭೆ, ವಿರಾಜಪೇಟೆ.

ಸಹಿ/–ಶ್ರೀಮತಿ, ಫಸಿಹಾ ತಬಸಮ್
ಉಪಾಧ್ಯಕ್ಷರು ಪುರಸಭೆ, ವಿರಾಜಪೇಟೆ.

ಸಹಿ/– ಶ್ರೀ ಎಂ.ಕೆ ಅಬ್ದುಲ್ ಜಲೀಲ್
ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ವಿರಾಜಪೇಟೆ.

ಸಹಿ/– ಶ್ರೀ ನಾಚಪ್ಪ ಪಿ.ಕೆ
ಮುಖ್ಯಾಧಿಕಾರಿ, ಪುರಸಭೆ, ವಿರಾಜಪೇಟೆ.

PUBLIC NOTICE

NOTICE IS HERE BY GIVEN to the public that my client is intending to enter in to Joint Development Agreement in respect of schedule properties with **M/s Windson Terra, A Registered Partnership Firm, situated at** Shankara Complex, behind Shimsha Bank, 1st Cross, Leelavathi Extension, Maddur-571428, Represented by the Partner and Authorized Representative Dr. Dayananda K.M S/o Sri. Madaiah, Residing at No. 3075, Prestige west wood, Tower-3, Gopalapura, Bangalore -560023 and have been negotiating the formalities of completing the Joint Development Agreement terms in respect of schedule properties.

All or any person/s, company, LLP., Partnership firm etc., having any claim of any nature whatsoever in the Schedule Properties by way of Sale, exchange, lease, license, trust, lien, easement, inheritance, possession, attachment, mortgage, charge, gift, Joint Development or otherwise of any nature whatsoever including any financial institutions, are hereby required to make the same known in writing with copies of all supporting documents to the undersigned within **SEVEN DAYS** from the date of publication of this Notice. Failing which the same shall be deemed to have been waived and my client will proceed and finalize the Joint Development transaction after the expiry of the above period. If any objections are received subsequent to the said date, the same will not be considered.

SCHEDULE

All that piece and parcel of Agricultural land and Residentially converted lands, situated at Yalachahalli Village, Yelawala Hobli, Mysore Taluk, Mysore, bearing the following survey numbers and the measurement is as follows.

Sl. No.	Old Sy. No.	New Sy.No.	Extent		East	West	North	South	Status of Lands
			A	G					
1	4	4/1	1	14	Sy. No.6	Sy. No.5	Sy. No. 6	Sy. No. 2	Agricultural Land
2	4	4/2	0	27	Land belongs to Vinod	Land belongs to Kulkarni	Land belongs to Rachamma	Land belongs to Govindegowda	Residentially converted Land
3	5	5	7	01	Sy. No. 96 and Sy. No. 6	Sy. No. 102 & Govt. Road	Govt. Road & Sy. No. 117	Land belongs to Siddaramegowda & Sy. No.2	Residentially Converted Land
4	6	179	3	30	Siddegowda and KHB	Doddathammegowda	Subbegowda & KHB	Devegowda	Agricultural Land
5	92	92/1	0	30.08	Sy. No. 100	Sy. No. 97	Sy. No. 99	Sy. No. 92/2 & 100	Residentially Converted Land
6	92	92/3	2	10	Sy. No. 100, 101 & 92/4	Sy. No. 96, 93 & 94	Sy. No. 92/2	Sy. No. 92/4	Residentially Converted Land
7	92	92/4	1	34.08	Road	Sy. No. 94	Sy. No. 92/3 & 101	Sy. No. 92/5 & 91	Residentially Converted Land
8	93	93/1	1	00	Sy. No. 92 & 93/2	Sy. No. 96/1	Sy. No. 96/1	Sy. No. 93/2 & 92/3	Residentially Converted Land
9	96	96/3	2	3.08	Sy. No. 96/1	Sy. No. 96/4	Kalluruna ganahalli kavalu Sy. No. 54 & Yelachahalli Sy. No. 97/2	Sy. No. 95/2 & 96/2	Agricultural Land
10	96	96/4	0	31	Sy. No. 96/3	Sy. No. 96/5	Kalluruna ganahalli kavalu Sy. No. 54	Sy. No. 95/2	Agricultural Land
11	96	96/5	1	39	Sy. No. 96/4	Sy. No. 96/6	Kalluruna ganahalli kavalu village boundary	Sy. No. 95/1 & 95/2	Agricultural Land
12	97	97/2	0	29	Sy. No. 97/1	Kallurunaganahalli kavalu gadi	Sy. No. 98	Sy. No. 96	Residentially converted Land
13	97	97/3	0	11	Sy. No. 92	Sy. No. 97/2	Block No.1	Sy. No. 96 & 92	Agricultural Land
14	100	100/1	2	17	Sy. No. 117 & 118	Sy. No. 92	Sy. No. 99	Sy. No. 101	Residentially converted Land
15	100	100/2	2	17	Sy. No. 99 & 101	Sy. No. 92	Sy. No. 100/1	Sy. No. 101	Residentially converted Land
16	101	101/1	1	12	Road	Sy. No. 92	Sy. No. 100	Sy. No. 92	Residentially converted Land
17	101	101/2	1	12	Sy. No. 99	Sy. No. 100 & 101/1	Sy. No. 100	Sy. No. 101/1	Residentially converted Land
18	102	102/5	1	14	Sy. No. 102/6	Sy. No. 5	Road	Sy. No. 102/1	Residentially converted Land
19	117	117/1	1	00	Sy. No. 117/3	Sy. No. 100 & 101	Sy. No. 118	Road	Residentially converted Land
20	117	117/2	1	00	Sy. No. 99	Sy. No. 117/3	Sy. No. 118	Road	Residentially converted Land
21	117	117/3	2	00	Sy. No. 117/2	Sy. No. 117/1	Sy. No. 118	Road	Residentially converted Land

Sd/- M.D. Harish Kumar Hegde, B.Com., LL.B. Advocate,
M/s. Hegde Associates, Advocate and Legal Consultants,
No. 1064, New CH-16, Hotel Airlines Complex, Jayalakshmivilas Road,
Chamarajapuram, Mysore. Ph: 0821-4252194
Date: 14-10-2025

ಮೈಸೂರು ಮಿತ್ರ

ಸಂಪೂರ್ಣ ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ

ಮಾದಿಗ ಸಮಾಜದ ಭೀಮ ಸೇನಾನಿಗಳಿಂದ ಪ್ರತಿಭಟನೆ



ಮಾದಿಗ ಸಮಾಜದ ಭೀಮ ಸೇನಾನಿಗಳು ಪ್ರತಿಭಟನೆ ನಡೆಸಿದರು.

ತಿ.ನರಸೀಪುರ, ಅ.14– ಸಂಪೂರ್ಣ ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಪಟ್ಟಣದಲ್ಲಿ ಮಂಗಳವಾರ ಮಾದಿಗ ಸಮಾಜದ ಭೀಮ ಸೇನಾನಿಗಳು ವಿನೂತನವಾಗಿ ಪ್ರತಿಭಟನೆ ನಡೆಸಿ ಗಮನ ಸೆಳೆದರು.

ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಬಳಿ ಜಮಾಯಿಸಿದ ಮಾದಿಗ ಸಮಾಜದ ಮುಖಂಡರು ಕೊರಳಿಗೆ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರ ಭಾವಚಿತ್ರ ಹಾಕಿಕೊಂಡು ಅದಕ್ಕೆ ಚಪ್ಪಲಿ ಹಾಕಿ, ಕೈಯಲ್ಲಿ ಮಡಿಕೆ ಹಿಡಿದು, ತಮಟೆ ಬಾರಿಸುತ್ತಾ ಮತ ಭಿಕ್ಷೆ ಪ್ರತಿಭಟನೆ ಆರಂಭಿಸಿದರು. ಅಲ್ಲದೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಪ್ರತಿಭಟನಾಕಾರರು ಸಂಪೂರ್ಣ ಒಳ ಮೀಸಲಾತಿ ಜಾರಿಗೊಳಿಸುವ ಸಂಬಂಧ ಸಚಿವ ಮಹದೇವಪ್ಪ ನವರೇ ಅಡ್ಡಗಾಲು ಹಾಕುವ ಮೂಲಕ ತಮ್ಮ ಸಮಾಜಕ್ಕೆ ಮಾತ್ರ ಅನುಕೂಲ ಮಾಡಿಕೊಡಲು ಹೊರಟಿದ್ದಾರೆ ಎಂದು ಆರೋಪಿಸಿದರು.

ಪಟ್ಟಣದ ಖಾಸಗಿ ಬಸ್ ನಿಲ್ದಾಣದಿಂದ ಮೆರವಣಿಗೆ ಮೂಲಕ ಎನ್.ರಾಚಯ್ಯ ಸ್ಮಾರಕ ಮೈದಾನಕ್ಕೆ ತೆರಳುತ್ತಿದ್ದ ಮುಖಂಡರಾದ ಭಾಸ್ಕರ ಪ್ರಸಾದ್, ಮರಡೀಪುರ ರವಿಕುಮಾರ್, ಸರಗೂರು ಪುಟ್ಟಣ್ಣ, ಗೋಪಾಲಪುರ ಮಂಜುನಾಥ್, ಹಿರಿಯ ವಕೀಲರಾದ ಎಸ್. ಅರುಣ್ ಕುಮಾರ್, ಮಂಜುನಾಥ್, ರಾಜೇಶ್, ಸುಂದ್ರೇಶ್, ಡಾ.ಭೀಮ ಸೇನಾನಿಗಳಾದ ಎನ್.ತಿಪ್ಪೇಶ್, ಹೆಚ್.ನೀಲಕಂಠ, ಎಲ್.ವಿ.ಸುರೇಶ, ರೆಡ್ಡಿ, ಹನುಮೇಶ್ ಬೆರಿ, ಗುಡೆಮಾರನಹಳ್ಳಿ ನಾಗರಾಜು, ಅವಿನಾಶ್, ವಿನೋದ್, ಹನುಮೇಶ್, ಶಿವಶಂಕರ, ಭೀಮರಾಯ, ನರಸಿಂಹಲು, ಹನುಮೇಶ್ ಆರೋಲಿ, ಆಂಜನೇಯ, ರಾಜೇಶ್, ರಾಹುಲ್ ಮಹದೇವಯ್ಯ, ದಾದಾಪಿರ್, ಹುಣಸೂರು ರಾಚಪ್ಪ, ಲಕ್ಷ್ಮಣ ಭಂಡಾರಿ ಸೇರಿದಂತೆ 20ಕ್ಕೂ ಹೆಚ್ಚು ಭೀಮ ಸೇನಾನಿಗಳನ್ನು ಪಟ್ಟಣದ ವೆಂಕಟೇಶ್ವರಸ್ವಾಮಿ ದೇವಾಲಯದ ಬಳಿ ಪೊಲೀಸರು ವಶಕ್ಕೆ ಪಡೆದರು. ಬಳಿಕ ಅವರನ್ನು ನಂಜನಗೂಡಿನ ಡಾ. ಅಂಬೇಡ್ಕರ್ ಭವನಕ್ಕೆ ಕರೆದೊಯ್ದು ಸಂಜೆ ವೇಳೆಗೆ ಬಿಡುಗಡೆ ಮಾಡಿದರು. ಪ್ರತಿಭಟನೆ ವಿಷಯ ತಿಳಿದಿದ್ದರಿಂದ ಪಟ್ಟಣದಾದ್ಯಂತ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.

ಮುಳ್ಳೂರು ಗ್ರಾಮ ಪಂಚಾಯಿತಿಗೆ ದಿವ್ಯ ಅಧ್ಯಕ್ಷೆ



ಮುಳ್ಳೂರು ಗ್ರಾಪಂ ನೂತನ ಅಧ್ಯಕ್ಷೆಯಾಗಿ ದಿವ್ಯ ಆಯ್ಕೆಯಾಗಿದ್ದಾರೆ.

ಹುಣಸೂರು, ಅ.14– ತಾಲೂಕಿನ ಮುಳ್ಳೂರು ಗ್ರಾಪಂ ನೂತನ ಅಧ್ಯಕ್ಷೆಯಾಗಿ ದಿವ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬಿಸಿಎಂ 'ಬಿ' ಮಹಿಳೆಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ದಿವ್ಯ ಅವರನ್ನು ಹೊರತು ಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾ ವಣಾಧಿಕಾರಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ಅನಿಲ್ ಕುಮಾರ್ ಘೋಷಿಸಿದರು.

ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಗ್ರಾಪಂ ಮಾಜಿ ಉಪಾಧ್ಯಕ್ಷ ದೇವರಾಜ್, ಮುಳ್ಳೂರು ಗ್ರಾಪಂ ವ್ಯಾಪ್ತಿಯಲ್ಲಿ ನೆನೆಗುದಿಗೆ ಬಿದ್ದರುವ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಂಡು ಹೋಗುವಂತೆ ಸಲಹೆ ನೀಡಿದರು.

ನೂತನ ಅಧ್ಯಕ್ಷೆ ದಿವ್ಯ ಮಾತನಾಡಿ, ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ ಗ್ರಾಪಂನ ಎಲ್ಲಾ ಸದಸ್ಯರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನನ್ನ ಅಧಿಕಾರಾವಧಿಯಲ್ಲಿ ಎಲ್ಲಾ ಸದಸ್ಯರ ಸಲಹೆ, ಸಹಕಾರ ಪಡೆದು ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಈ ವೇಳೆ ಮಾಜಿ ಅಧ್ಯಕ್ಷೆ ಜಯಲಕ್ಷ್ಮಿ, ಉಪಾಧ್ಯಕ್ಷ ಕೃಷ್ಣೇಗೌಡ, ಸದಸ್ಯರಾದ ಮಹೇಶ್, ಗಿರಿಜಾ, ಕೃಷ್ಣಾಚಾರ್, ತಾರಾಶ್ರೀ, ಪುಟ್ಟಣ್ಣಯ್ಯ, ಅನುಸೂಯ, ಶಂಕರರಾವ್ ಖರಾಡೆ, ಕಮಲಮ್ಮ, ಹರಿಣಿ, ಪುಟ್ಟಮ್ಮ, ಲಕ್ಷ್ಮಮ್ಮ ಇನ್ನಿತರರಿದ್ದರು.

ಧರ್ಮಸ್ಥಳ ಸಂಸ್ಥೆಯಿಂದ ಸಮಾಜಮುಖಿ ಕಾರ್ಯಕ್ರಮ

ರಾಜ್ಯ ವಿಶ್ವಕರ್ಮ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್



ಕಾರ್ಯಕ್ರಮವನ್ನು ನಂದಕುಮಾರ್ ಉದ್ಘಾಟಿಸಿದರು.

ನಂಜನಗೂಡು, ಅ.14– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸ್ವಾಸ್ಥ್ಯ, ಆರೋಗ್ಯಪೂರ್ಣ ಸಮಾಜಕ್ಕಾಗಿ ಹಲವು ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದು ರಾಜ್ಯ ವಿಶ್ವಕರ್ಮ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್ ತಿಳಿಸಿದರು.

ನಗರದ ಜೆಎಸ್ಎಸ್ ಮಂಗಳ ಮಂಟಪದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಜಿಲ್ಲಾ ಜನಜಾಗೃತಿ ವೇದಿಕೆ ಸಹಯೋಗದಲ್ಲಿ ನಡೆದ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಗಾಂಧಿ ಸ್ಮೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಧರ್ಮಸ್ಥಳ ಸ್ತ್ರೀಶಕ್ತಿ ಮಹಿಳಾ ಸಹಕಾರ ಸಂಘದಲ್ಲಿ 80 ಲಕ್ಷ ಮಹಿಳಾ ಸದಸ್ಯರು ಸಾಲದ ಪ್ರಯೋಜನ ಪಡೆದಿದ್ದಾರೆ. ಸಂಸ್ಥೆ ಹಲವು ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿದೆ. ರಾಜ್ಯಾದ್ಯಂತ ಸಾವಿರಾರು ಕೆರೆಗಳನ್ನು ಪುನರುಜ್ಜೀವನಗೊಳಿಸಿದೆ. ವೃದ್ಧರಿಗೆ ಮಾಸಾಶನ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನದಂತಹ ಹಲವಾರು ಕಾರ್ಯಕ್ರಮ ಹಮ್ಮಿಕೊಂಡಿದ್ದು, ಧರ್ಮಸ್ಥಳದ ಧರ್ಮಾಧಿಕಾರಿಗಳು ಹಮ್ಮಿಕೊಳ್ಳದ ಸಮಾಜಮುಖಿ ಕೆಲಸಗಳೇ ಇಲ್ಲ ಎಂದರು.

ಜಿಲ್ಲಾ ಜನಜಾಗೃತಿ ಅಧ್ಯಕ್ಷ ಕೆ.ಎನ್. ಪ್ರಭುಸ್ವಾಮಿ ಮಾತನಾಡಿ, ರಾಜ್ಯದಲ್ಲಿ 2 ಸಾವಿರ ಮದ್ಯವರ್ಜನ ಶಿಬಿರ ಆಯೋಜಿಸಿದ್ದೇವೆ. ಇದರಲ್ಲಿ ಕನಿಷ್ಠ 2 ಲಕ್ಷ ಮಂದಿ ಮದ್ಯಪಾನ ತ್ಯಜಿಸಿ ಜೀವನ ನಡೆಸುತ್ತಿದ್ದಾರೆ. ದುಶ್ಚಟದಿಂದ ದೂರ ವಿದ್ದು ನೆಮ್ಮದಿ ಜೀವನ ಕಟ್ಟಿಕೊಳ್ಳಬೇಕು. ಮದ್ಯ ಮುಕ್ತ ಸಮಾಜವನ್ನು ನಿರ್ಮಾಣ ಮಾಡಲು ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮುಂದಾಗಿದೆ. ರಾಜ್ಯವನ್ನು ಪಾನಮುಕ್ತ ಮಾಡಲು ಸಾಕಷ್ಟು ಬಾರಿ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಾ ಬಂದಿದ್ದೇವೆ ಎಂದರು.

ಕಾರ್ಯಕ್ರಮಕ್ಕೂ ಮುನ್ನ ನಗರದ ಹುಲ್ಲಹಳ್ಳಿ ವೃತ್ತದಲ್ಲಿ ಮದ್ಯಪಾನ ಮುಕ್ತ ಜಾಗೃತಿ ಜಾಥಾಕ್ಕೆ ಮಾಜಿ ಶಾಸಕ ಕೇಶವಮೂರ್ತಿ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಪ್ರಾದೇಶಿಕ ನಿರ್ದೇಶಕ ಜಯಂತ ಪೂಜಾರಿ, ಜೆಎಸ್ಎಸ್ ಕಾಲೇಜಿನ ಮುಖ್ಯಸ್ಥ ಡಾ.ಎಂ.ಪಿ. ಸೋಮಶೇಖರ್, ಅನುರಾಗ ಮಕ್ಕಳ ಮನೆಯ ಸೋಮಶೇಖರ ಮೂರ್ತಿ, ಕಮಲ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಿರ್ದೇಶಕ ವಿಜಯಕುಮಾರ್ ನಾಗನಾಳ, ತಾಲೂಕು ಯೋಜನಾಧಿಕಾರಿ ಧರ್ಮರಾಜ್, ಕಸಾಪ ತಾಲೂಕು ಅಧ್ಯಕ್ಷೆ ಲತಾ, ಜನಜಾಗೃತಿ ಸಮಿತಿ ಸದಸ್ಯರಾದ ಶಿವಯ್ಯ, ವರದರಾಜು, ನಾರಾಯಣ್, ಮೂರ್ತಿ, ಶಶಿಕಲಾ, ಹೊನ್ನ ನಾಯಕ ಉಪಸ್ಥಿತರಿದ್ದರು.

ವಿಶ್ವಶಾಂತಿ ಶಿಕ್ಷಣ ಸಂಸ್ಥೆ ಅಭಿವೃದ್ಧಿಗೆ ಸಹಕಾರ ನೀಡುವೆ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭರವಸೆ



ದಿ.ಲಕ್ಕಪ್ಪ ಸ್ವಾಮೀಜಿ ಸಮಾಧಿಗೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪುಷ್ಪಾರ್ಚನೆ ಮಾಡಿದರು.

ಹುಣಸೂರು.ಅ.14– ಸರ್ವರ ಸಹಕಾರದಿಂದ ರತ್ನಪುರಿಯ ಅಕ್ಷರ ಸಂತ ದಿ.ಲಕ್ಕಪ್ಪ ಸ್ವಾಮೀಜಿ ಆಶಯದ ವಿಶ್ವಶಾಂತಿ ಶಿಕ್ಷಣ ಸಂಸ್ಥೆ ಅಭಿವೃದ್ಧಿಪಡಿಸಲು ಸಂಪೂರ್ಣ ಸಹಕಾರ ನೀಡುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಡಿ.ಮಹದೇವಪ್ಪ ಭರವಸೆ ನೀಡಿದರು.

ತಾಲೂಕಿನ ರತ್ನಪುರಿ ವಿಶ್ವಶಾಂತಿ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಸಂಸ್ಥೆ ಸಂಸ್ಥಾಪಕ ದಿ.ಲಕ್ಕಪ್ಪ ಸ್ವಾಮೀಜಿ ನುಡಿನಮನದಲ್ಲಿ ಅವರ ಸಮಾಧಿಗೆ ಪುಷ್ಪಾರ್ಚನೆಗೈದ ನಂತರ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, ಸಾತ್ವಿಕ, ಆಧ್ಯಾತ್ಮಿಕ ಗುರುಗಳನ್ನು ಕಳೆದುಕೊಂಡಿದ್ದೇವೆ. ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯದಂತೆ ಶಿಕ್ಷಣವೇ ಶಕ್ತಿ ಎಂಬುದನ್ನು ಅರಿತು 60 ವರ್ಷಗಳ ಹಿಂದೆಯೇ ಸುಂದರ ಪರಿಸರದಲ್ಲಿ ಶಿಕ್ಷಣ ಸಂಸ್ಥೆ ಸ್ಥಾಪಿಸಿ ಸರಳ ಜೀವನ ನಡೆಸುತ್ತಲೇ ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಕಲ್ಪಿಸಿರುವ ಅವರ ಅಕ್ಷರ ಕ್ರಾಂತಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ತಾವು ಆರೋಗ್ಯ ಮಂತ್ರಿಯಾಗಿದ್ದಾಗ ಇಲ್ಲಿಗೆ ಗ್ರಾಮಾಂತರ ಆಯುರ್ವೇದ ಕಾಲೇಜು ಮಂಜೂರು ಮಾಡಿದ್ದೆ. ಆದರೆ ಅದನ್ನು ಬಳಸಿಕೊಳ್ಳಲಿಲ್ಲ ಎಂದು ಬೇಸರಿಸಿದರು.

ಆಡಳಿತಾತ್ಮಕ ತಂಡ ಕಟ್ಟೋಣ: ಈ ಸಂಸ್ಥೆ ಒಬ್ಬರ ಸ್ವತ್ತಾಗಬಾರದು. ಲಕ್ಕಪ್ಪ ಸ್ವಾಮೀಜಿ ಕನಸು, ಮಾಜಿ ಶಾಸಕ ಮಂಜುನಾಥರ ಹಾಗೂ ಸ್ಥಳೀಯ ಮುಖಂಡರ ಅಭಿಪ್ರಾಯದಂತೆ ಸಂಸ್ಥೆ ಅಭಿವೃದ್ಧಿಪಡಿಸಲು ಸರ್ಕಾರದಿಂದ ಸಿಗುವ ಸೌಲಭ್ಯ ಕಲ್ಪಿಸುವೆ ಎಂದರು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ನಾವು ಕಂಡ ವಿಶ್ವಮಾನವ ಲಕ್ಕಪ್ಪ ಸ್ವಾಮೀಜಿ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿ, ಶ್ರೀಲಕ್ಕಪ್ಪ ಸ್ವಾಮೀಜಿಯವರು ಬಡವರು, ದೀನ ದಲಿತರು, ಅಕ್ಷರ ವಂಚಿತರಿಗೆ ಉಚಿತ ಶಿಕ್ಷಣದ ಜೊತೆಗೆ ಅವರ ಜೀವನ ಸಂದೇಶದಿಂದ ಪ್ರಭಾವಿತನಾಗಿದ್ದೇನೆ. ವಿಶ್ವ ಮಾನವರಾಗಿರುವ ಇವರು ಕಂಡ ಕನಸು ನನಸು ಮಾಡಬೇಕು. ಗ್ರಾಮಸ್ಥರ ಅಭಿಪ್ರಾಯದಂತೆ ಸೇತುವೆಯಾಗಿ ನಾನು ಕೆಲಸ ಮಾಡುತ್ತೇನೆ. ತಕ್ಷಣಕ್ಕೆ ಸಂಸ್ಥೆಯ 50 ನಿರುದ್ಯೋಗಿ ಶಿಕ್ಷಕರ ಭವಿಷ್ಯವಿದೆ. ಎಲ್ಲರ ಕನಸು ನನಸು ಮಾಡಲು ಸಚಿವ ಡಾ.ಮಹದೇವಪ್ಪನವರು ಸಂಸ್ಥೆಯ ಟ್ರಸ್ಟ್‌ನ ಅಧ್ಯಕ್ಷರಾಗಬೇಕು ಎಂದು ಮನವಿ ಮಾಡಿದರು.

ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ಹರಿಹರಾನಂದ ಸ್ವಾಮೀಜಿ ಮಾತನಾಡಿದರು. ಟ್ರಸ್ಟ್ ಅಧ್ಯಕ್ಷ ಡಾ.ಮೂರ್ತಿ, ಕಾರ್ಯದರ್ಶಿ ಮಾಲಿಂಗಪ್ಪ, ಹಿರಿಯ ವಿದ್ಯಾರ್ಥಿ ಮನುಕುಮಾರ್ ಸಚಿವರಿಗೆ ಮನವಿ ಸಲ್ಲಿಸಿದರು. ಪ್ರಾಚಾರ್ಯ ಶಿವಕುಮಾರ್, ಉಪನ್ಯಾಸಕ ಪುಟ್ಟಸ್ವಾಮಿ ಮಾತನಾಡಿದರು. ಸಂಸ್ಥೆ ಹಿರಿಯ ವಿದ್ಯಾರ್ಥಿ ರಾಮಚಂದ್ರ ಗೀತಗಾಯನ ನಡೆಸಿಕೊಟ್ಟರು.

ತಾಪಂ ಇಓ ಹೊಂಗಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ವಿಜಯಕುಮಾರ್, ವಕ್ತಾರ ಲಕ್ಷ್ಮಣ್, ಮುಖಂಡರಾದ ಅಸ್ಗರ್ ಪಾಷ, ರಾಜು ಶಿವರಾಜೇಗೌಡ, ಟಿ.ಕೃಷ್ಣ, ಪ್ರಸನ್ನ, ಪುಟ್ಟಸ್ವಾಮಿ, ಗ್ರಾಪಂ ಅಧ್ಯಕ್ಷರಾದ ದೇವರಾಜ್, ಮಹದೇವ್, ಉಪನ್ಯಾಸಕರಾದ ಎಂ.ರವಿ, ಜಯಸ್ವಾಮಿ, ಮಲ್ಲಿಕಾರ್ಜುನಸ್ವಾಮಿ, ಸುಧಾಕರ್, ಮನೋಜ್ ಕುಮಾರ್ ಸೇರಿದಂತೆ ಇನ್ನಿತರರಿದ್ದರು.

ತಂಬಾಕು ಮಂಡಳಿ ಅಧಿಕಾರಿ ವಿರುದ್ಧ

ಜಾತಿ ನಿಂದನೆ ಪ್ರಕರಣ ದಾಖಲು ಖಂಡನೀಯ

ಕೇಂದ್ರ ತಂಬಾಕು ಮಂಡಳಿ ಮಾಜಿ ಸದಸ್ಯ ವಿಕ್ರಂ ರಾಜ್



ಸುದ್ದಿಗೋಷ್ಠಿಯಲ್ಲಿ ಕೇಂದ್ರ ತಂಬಾಕು ಮಂಡಳಿ ಮಾಜಿ ಸದಸ್ಯ ವಿಕ್ರಂ ರಾಜ್ ಮಾತನಾಡಿದರು.

ಪಿರಿಯಾಪಟ್ಟಣ, ಅ.14– ರೈತಪರ ಕಾಳಜಿ ಹೊಂದಿರುವ ತಂಬಾಕು ಮಂಡಳಿ ಅಧಿಕಾರಿ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಿಸಿರುವುದು ಖಂಡನೀಯ ಎಂದು ಕೇಂದ್ರ ತಂಬಾಕು ಮಂಡಳಿ ಮಾಜಿ ಸದಸ್ಯ ವಿಕ್ರಂ ರಾಜ್ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ತಂಬಾಕು ಮಂಡಳಿ ದಕ್ಷ ಹಾಗೂ ಪ್ರಾಮಾಣಿಕ ಹರಾಜು ನಿರ್ದೇಶಕ ಬಿ.ಸಿ.ಶ್ರೀನಿವಾಸ್ ಅವರ ವಿರುದ್ಧ ಶೃಂಗಾರ ಎಂಬಾತ ತಾನೊಬ್ಬ ದಲಿತನಾದ್ದರಿಂದ ಜಾತಿ ಅಸ್ತ್ರ ಪ್ರಯೋಗಿಸಿ ಹುಣಸೂರಿನ ಆರಕ್ಷಕ ಉಪ ಅಧೀಕ್ಷಕರಲ್ಲಿ ಜಾತಿ ನಿಂದನೆ ಪ್ರಕರಣ ದಾಖಲಿಸಲು ದೂರು ನೀಡಿದ್ದಾನೆ ಎಂದರು.

ಹುಣಸೂರು ತಾಲೂಕಿನ ಕಟ್ಟೆಮಳಲವಾಡಿ ಗ್ರಾಮದ ಶೃಂಗಾರ್ ಎಂಬಾತ ಕಳೆದ ಕೆಲವು ವರ್ಷಗಳಿಂದ ತಂಬಾಕು ಹರಾಜು ಮಾರುಕಟ್ಟೆಗೆ ಕಾರ್ಮಿಕರನ್ನು ಪೂರೈಸುವ ಗುತ್ತಿಗೆ ಪಡೆಯುತ್ತಿದ್ದು, ಪ್ರಸ್ತುತ ಸಾಲಿನಲ್ಲಿ ಕಟ್ಟೆಮಳಲವಾಡಿ ಹರಾಜು ಮಾರುಕಟ್ಟೆಗೆ ಕಾರ್ಮಿಕರನ್ನು ಪೂರೈಸುವ ಗುತ್ತಿಗೆಗಾಗಿ ಕೇಂದ್ರ ಸರ್ಕಾರದ ಕಾನೂನಿನ ಅಡಿಯಲ್ಲಿ ಜೆಇಎಂ ಅಪ್ಲಿಕೇಶನ್ ಮುಖೇನ ಟೆಂಡರ್ ನಲ್ಲಿ ಭಾಗವಹಿಸಿ ಗುತ್ತಿಗೆಯ ನಿಬಂಧನೆ ಗಳನ್ನು ಪೂರ್ಣಗೊಳಿಸಲು ಅಸಮರ್ಥನಾದ ಕಾರಣ ಹೊರಗುತ್ತಿಗೆ ಅನ್ಯ ವ್ಯಕ್ತಿ ಪಾಲಾಗಿದ್ದಕ್ಕೆ ಕೋಪಗೊಂಡು ದೂರು ನೀಡಿದ್ದಾನೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ದೂರು ದುರುದ್ದೇಶ ಪೂರ್ವಕವಾಗಿದ್ದು, ಈ ದೂರನ್ನು ಪೊಲೀಸ್ ಇಲಾಖೆ ಪಡೆಯದೆ ಸಮಾಜದಲ್ಲಿ ಶಾಂತಿ ಭಂಗ ಉಂಟು ಮಾಡುತ್ತಿರುವ ಈತನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡರಾದ ಪ್ರಕಾಶ್ ರಾಜೇ ಅರಸ್, ತೆಲುಗಿನ ಕುಪ್ಪೆ ನಾಗಣ್ಣ, ಹಬಟೂರು ರಮೇಶ್, ಹರೀಶ್ ತಾತನಹಳ್ಳಿ, ಟಿ.ಎಸ್.ಮಲ್ಲಪ್ಪ, ಹಬಟೂರು ಕಾಳೇಗೌಡ ಹಾಜರಿದ್ದರು.

ಹಳ್ಳಿಗಾಡಿನ ಜನರ ಆರೋಗ್ಯ ವೃದ್ಧಿಗಾಗಿ ಆರೋಗ್ಯ ತಪಾಸಣಾ ಶಿಬಿರ

ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್



ಹೆಬ್ಬಲಗುಪ್ಪೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.


ಹೆಚ್.ಡಿ.ಕೋಟೆ, ಅ.14– ಹಳ್ಳಿಗಾಡಿನ ಜನರ ಆರೋಗ್ಯ ವೃದ್ಧಿಗಾಗಿ ಗ್ರಾಮೀಣ ಭಾಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದ್ದು, ಗ್ರಾಮೀಣ ಜನತೆ ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ತಿಳಿಸಿದರು.

ತಾಲೂಕಿನ ಹೆಬ್ಬಲಗುಪ್ಪೆ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹೆಬ್ಬಲಗುಪ್ಪೆ, ಹಾರ್ಟ್ ಸಂಸ್ಥೆ ಮೈಸೂರು, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸರಗೂರು, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಇವರುಗಳ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಆರೋಗ್ಯ ಶಿಬಿರ ಆಯೋಜಿಸಿರುವ ಮೈಸೂರಿನ ಹಾರ್ಟ್ ಸಂಸ್ಥೆ ಕಾರ್ಯ ಪ್ರಶಂಸನೀಯ. ಇಂದು 6ನೇ ಬಾರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗುತ್ತಿದ್ದು, ಶಿಬಿರದಲ್ಲಿ ಕಣ್ಣಿನ ಪರೀಕ್ಷೆ, ಮಧುಮೇಹ, ರಕ್ತದೊತ್ತಡ, ಹೃದಯ ಸಂಬಂಧಿತ ತೊಂದರೆಗಳು, 40 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಮುಟ್ಟಿನ ಕಾಯಿಲೆ, ಉಸಿರಾಟದ ತೊಂದರೆ, ಇಸಿಜಿ ಸೇರಿದಂತೆ ಇನ್ನಿತರ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶಿಬಿರ ಯಶಸ್ವಿಗೊಳಿಸಿ ಎಂದರು.

ಗ್ರಾಮೀಣ ಭಾಗದಲ್ಲಿ ಇಂತಹ ಶಿಬಿರಗಳು ಹೆಚ್ಚಾಗಿ ನಡೆಯಬೇಕು. ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಕ್ಯಾನ್ಸರ್ ತಪಾಸಣಾ ಶಿಬಿರ ಆಯೋಜಿಸುವಂತೆ ಹಾರ್ಟ್ ಸಂಸ್ಥೆ ಮುಖ್ಯಸ್ಥರಿಗೆ ಮನವಿ ಸಲ್ಲಿಸಿದರು. ಇದೇ ವೇಳೆ ಶಿಬಿರದಲ್ಲಿ ಬಿಪಿ ಶುಗರ್ 65, ಸಾಮಾನ್ಯ ರೋಗ ತಪಾಸಣೆ 85, ಜನ ಕಣ್ಣಿನ ಪರೀಕ್ಷೆ 45, ಪಿಎಫ್‌ಟಿ ಪರೀಕ್ಷೆ 10 ಹಾಗೂ 25 ಮಂದಿ ಇಸಿಜಿ ಮಾಡಿಸಿಕೊಂಡರು.

ಹೆಬ್ಬಲಗುಪ್ಪೆ ಗ್ರಾಪಂ ಮಾಜಿ ಅಧ್ಯಕ್ಷ ಶಿವಪ್ಪಶೆಟ್ಟಿ, ನಾರಾಯಣ ಹೆಲ್ತ್‌ನ ಡಾ.ಗುಲ್ಜರ್, ಪ್ರಶಾಂತ್, ಸಿಪ್ಲ ಬ್ರಿತ್ ಫ್ರೀ ಶಬೀರ್, ಪಿಡಿಓ ಪ್ರಭಾಕರ್, ಗ್ರಾಪಂ ಸದಸ್ಯ ಗೋವಿಂದ, ವಿವೇಕಾನಂದ ಸ್ಮಾರಕ ಆಸ್ಪತ್ರೆ ನೇತ್ರ ತಜ್ಞ ಡಾ.ನರೇಂದ್ರ ರಾಮಕೃಷ್ಣ, ಡಾ.ಅಮಲಾ ವರ್ಗಿಸ್, ಹಿಲಾಟ್, ಚನ್ನಪ್ಪ, ಪ್ರತಾಪ್, ಪ್ರಾಥಮಿಕ ಆರೋಗ್ಯ ಕೇಂದ್ರ ಸಮುದಾಯ ಆರೋಗ್ಯ ಅಧಿಕಾರಿ ಶ್ಯಾಮಲ, 'ಡಿ' ಗ್ರೂಪ್ ನೌಕರರಾದ ಸಂದೀಪ್, ಪೂರ್ಣಿಮಾ, ಆಶಾ ಕಾರ್ಯಕರ್ತೆಯರು, ಗ್ರಾಮದ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ನೂತನ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡರಿಗೆ ಸನ್ಮಾನ




ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ನೂತನ ಅಧ್ಯಕ್ಷರಾದ ಶಾಸಕ ಜಿ.ಡಿ.ಹರೀಶ್‌ಗೌಡರನ್ನು ಕೆಎಂಎಫ್ ಡೈರಿ ನಿರ್ದೇಶಕ ಕುಮಾರ್, ಉಪಾಧ್ಯಕ್ಷ ಸದಾನಂದ, ನಿರ್ದೇಶಕಿ ಶಿವಗಾಮಿ ಉಮಾಶಂಕರ್, ಮಹೇಶ್, ಗೋವಿಂದೇಗೌಡ, ಅವಿನಾಶ್, ಕುಮಾರ್, ಮಂಜು ಇತರರು ಸನ್ಮಾನಿಸಿದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಅನಿವಾರ್ಯ ಆದಲ್ಲಿ

ಸಚಿವ ಹೆಚ್.ಸಿ.ಮಹದೇವಪ್ಪನವರಿಗೆ ಸಿಎಂ ಸ್ಥಾನ ನೀಡಿ

ಪ್ರಗತಿಪರ ಸಂಘಟನೆಗಳ ಮುಖಂಡರ ಒತ್ತಾಯ



ಸಭೆಯಲ್ಲಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಮುಖ್ಯಮಂತ್ರಿ ಮಾಡುವಂತೆ ಒತ್ತಾಯಿಸಲಾಯಿತು.

ತಿ.ನರಸೀಪುರ, ಅ.14– ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಮಾಡಿದ್ದೇ ಆದಲ್ಲಿ ಆ ಸ್ಥಾನವನ್ನು ದಲಿತ ನಾಯಕರು, ಪ್ರಭಾವಿ ಸಚಿವರೂ ಆದ ಹೆಚ್.ಸಿ. ಮಹದೇವಪ್ಪ ಅವರಿಗೆ ನೀಡುವಂತೆ ಪ್ರಗತಿಪರ ಸಂಘಟನೆಗಳ ಮುಖಂಡರು ಒತ್ತಾಯಿಸಿದ್ದಾರೆ.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಂಗಳವಾರ ನಡೆದ ವಿವಿಧ ದಲಿತ ಸಂಘಟನೆಗಳ ಮುಖ್ಯಸ್ಥರ ಸಭೆಯಲ್ಲಿ ಮಾತನಾಡಿದ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಪ್ರಸ್ತುತ ರಾಜ್ಯ ರಾಜಕಾರಣದಲ್ಲಿ ನವೆಂಬರ್ ಕ್ರಾಂತಿಯಾಗಲಿದೆ ಎಂಬ ಹೇಳಿಕೆಗಳು ಕೇಳಿ ಬರುತ್ತಿದ್ದು, ಮುಖ್ಯಮಂತ್ರಿ ಬದಲಾವಣೆ ವಿಷಯ ಚರ್ಚಿತವಾಗುತ್ತಿದೆ. ಹಾಗೇನಾದರೂ ಮುಖ್ಯಮಂತ್ರಿ ಬದಲಾವಣೆಯಾಗಿದ್ದೇ ಆದಲ್ಲಿ ಆ ಸ್ಥಾನವನ್ನು ನಮ್ಮ ಕ್ಷೇತ್ರದ ಶಾಸಕರೂ ಆದ ರಾಜ್ಯ ಸಚಿವ ಸಂಪುಟದ ಪ್ರಭಾವಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ನೀಡುವ ಮೂಲಕ ರಾಜ್ಯ ಸರ್ಕಾರ ಅಧಿಕಾರಕ್ಕೆ ಬರಲು ಪ್ರಮುಖ ಪಾತ್ರ ವಹಿಸಿದ ದಲಿತ ಸಮುದಾಯದ ಋಣ ತೀರಿಸಬೇಕೆಂದು ಹೈಕಮಾಂಡ್ ಅನ್ನು ಒತ್ತಾಯಿಸಿದರು.

ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರು ಸತತವಾಗಿ ತಿ.ನರಸೀಪುರ ಕ್ಷೇತ್ರವನ್ನು ಪ್ರತಿನಿಧಿಸಿಕೊಂಡು ಬಂದಿದ್ದಾರೆ. ಅಲ್ಲದೇ ವಿವಿಧ ಸಚಿವ ಸ್ಥಾನ ಪಡೆದು ಆ ಸ್ಥಾನದಲ್ಲಿ ನಿರೀಕ್ಷೆಗೂ ಮೀರಿದ ಅಭಿವೃದ್ಧಿ ಕೆಲಸಗಳನ್ನು ಮಾಡುವ ಮೂಲಕ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಅಲ್ಲದೇ ಮುಖ್ಯಮಂತ್ರಿ ಸ್ಥಾನದ ಹತ್ತಿರಕ್ಕೆ ಹೋಗಿದ್ದ ಹಿರಿಯ ರಾಜಕಾರಣಿ ಬಿ.ರಾಚಯ್ಯ ಅವರ ಶಿಷ್ಯರಾಗಿರುವ ಮಹದೇವಪ್ಪನವರಿಗೆ ಯಾವುದೇ ಹುದ್ದೆ ಕೊಟ್ಟರೂ ನಿಭಾಯಿಸುವ ಚಾಣಾಕ್ಷತನ ಇರುವುದರಿಂದ ಹೈಕಮಾಂಡ್ ಮುಖ್ಯಮಂತ್ರಿ ಸ್ಥಾನ ಬದಲಾವಣೆ ಮಾಡಿದ್ದೇ ಆದಲ್ಲಿ ಆ ಸ್ಥಾನವನ್ನು ಮಹದೇವಪ್ಪರವರಿಗೆ ನೀಡುವಂತೆ ಒತ್ತಾಯಿಸಿದರು.

ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ ಮಾತನಾಡಿ, ಸಂಪುಟ ಪುನರಚನೆ ಆಗಬೇಕೆಂಬ ಚರ್ಚೆ ನಡೆದಿರುವ ವೇಳೆ ದಲಿತರನ್ನು ಮುಖ್ಯಮಂತ್ರಿ ಮಾಡಬೇಕೆಂಬುದು ದಲಿತ ಸಮಾಜದ ಒತ್ತಾಯವಾಗಿದೆ. ದೇಶದಲ್ಲಿ ಕಾಂಗ್ರೆಸ್ ಪಕ್ಷದ ಮೇಲೆ ದಲಿತರ ಋಣ ಇದ್ದು, ಋಣ ತೀರಿಸುವ ಸದಾವಕಾಶ ಕಾಂಗ್ರೆಸ್ ಪಕ್ಷಕ್ಕೆ ಒದಗಿ ಬಂದಿದೆ. 1975ರ ತುರ್ತು ಪರಿಸ್ಥಿತಿ ನಂತರ ಇಂದಿರಾಗಾಂಧಿ ಅಧಿಕಾರಕ್ಕೆ ಬಂದಾಗಿನಿಂದ 2025ರ ತನಕ ಸುದೀರ್ಘವಾಗಿ 50 ವರ್ಷಗಳ ಕಾಲ ದಲಿತರು ಕಾಂಗ್ರೆಸ್ ಪಕ್ಷ ಬೆಂಬಲಿಸುತ್ತಾ ಬಂದಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷದ ಆಡಳಿತಾವಧಿಯಲ್ಲಿ ಒಬ್ಬರೇ ಒಬ್ಬರು ದಲಿತ ಮುಖ್ಯಮಂತ್ರಿ ಕಾಣಲು ಸಾಧ್ಯವಾಗದಿರುವುದು ದಲಿತ ಸಮಾಜದ ದೌರ್ಭಾಗ್ಯ. 2023ರ ಚುನಾವಣೆಯಲ್ಲಿ ರಾಜ್ಯದ ಶೇ.20ರಷ್ಟು ದಲಿತರು ಎಲ್ಲಾ ಪಕ್ಷಗಳನ್ನು ಬದಿಗೊತ್ತಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುವ ಮೂಲಕ 136 ಸ್ಥಾನ ಗೆಲುವಿಗೆ ಪ್ರಮುಖ ಪಾತ್ರವಹಿಸಿದ್ದಾರೆ. ಈಗ ಎರಡೂವರೆ ವರ್ಷಗಳ ನಂತರ ಅಧಿಕಾರ ಹಸ್ತಾಂತರ ಆಗಬೇಕಿದೆ. ಅದು ಆದದ್ದೇ ಆದಲ್ಲಿ ಕಾಂಗ್ರೆಸ್ ಪಕ್ಷ ದಲಿತ ಋಣ ತೀರಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಹುದ್ದೆಗೆ ಅರ್ಹತೆ ಹೊಂದಿರುವ ಸಚಿವ ಹೆಚ್.ಸಿ.ಮಹದೇವಪ್ಪ ರನ್ನು ಮುಖ್ಯಮಂತ್ರಿಯನ್ನಾಗಿ ಮಾಡ ಬೇಕು ಎಂದು ಆಗ್ರಹಿಸಿದರು.

ಅಂಬೇಡ್ಕರ್ ಅಭಿವೃದ್ಧಿ ಸಂಘದ ಉಪಾಧ್ಯಕ್ಷ ಮೂಗೂರು ಎಂ.ಕೆ.ಸಿದ್ದರಾಜು, ಹಿರಿಯ ಮುಖಂಡ ಸೋಸಲೆ ಮಹದೇವಸ್ವಾಮಿ, ದಸಂಸ ಡಾ.ಚಂದ್ರಶೇಖರ್, ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್. ಸಿದ್ದಾರ್ಥ, ತಾಪಂ ಸದಸ್ಯರಾದ ಕುಕ್ಕೂರು ಪ್ರಸನ್ನ, ನಿಲಸೋಗೆ ಬಸವರಾಜು, ಮೂಗೂರು ಎಂ.ಆರ್.ಸುಂದರ್, ಸೋಮನಾಥಪುರ ಗಣೇಶ್, ತ್ರಿವೇಣಿ ನಗರ ಮಹದೇವಮ್ಮ, ಸೋಸಲೆ ರಾಜಶೇಖರ್, ಕೆಬ್ಬೆಹುಂಡಿ ನಿಂಗರಾಜು, ಆಲಗೂಡು ಶಿವಣ್ಣ, ಕನ್ನಾಯಕನಹಳ್ಳಿ ಮರಿಸ್ವಾಮಿ, ನಿಲಸೋಗೆ ಕುಮಾರ್, ತೊಟ್ಟವಾಡಿ ರಾಜಪ್ಪ, ಕೊಳತ್ತೂರು ಪ್ರಭಾಕರ್, ಚೌಹಳ್ಳಿ ಪರಶುರಾಮ್, ಹೆಮ್ಮಿಗೆ ಪ್ರಸನ್ನ, ಬೆನಕನಹಳ್ಳಿ ನಾರಾಯಣಸ್ವಾಮಿ, ಸೋಸಲೆ ಶಿವು, ಕುಪ್ಯಾ ಗವಿಸಿದ್ದಯ್ಯ, ಗೋವಿಂದರಾಜು ಮತ್ತಿತರರಿದ್ದರು.

ಉದ್ಯಮಿ ಎಸ್.ಶ್ರೀಕಾಂತ್‌ಗೆ ಪ್ರಶಸ್ತಿ ಪ್ರದಾನ




ಮೈಸೂರಿನ ಪುರಭವನದಲ್ಲಿ ಕರ್ನಾಟಕ ಸಾಂಸ್ಕೃತಿಕ ಸಾಹಿತ್ಯ ಪರಿಷತ್ ವತಿಯಿಂದ ಉದ್ಯಮಿ ಎಸ್.ಶ್ರೀಕಾಂತ್ ಅವರಿಗೆ ಕರ್ನಾಟಕ ಮಾಣಿಕ್ಯ ಶ್ರೇಷ್ಠ ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಪರಿಷತ್ ಸಂಸ್ಥಾಪಕ ರಾಜ್ಯಾಧ್ಯಕ್ಷ ಕಸ್ತೂರಿ ಚಂದ್ರು, ಮೇಲುಕೋಟೆ ವೆಂಗೀಪುರ ನಂಬಿ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಡಾ.ಕೆ.ರಘುರಾಂ, ಹೈಕೋರ್ಟ್ ವಕೀಲ ಹೆಚ್.ಆರ್.ನಾರಾಯಣ್, ಬಂಡೀಪುರ ಅರಣ್ಯ ವಿಭಾಗ ಎಸಿಎಫ್ ಎನ್.ಪಿ.ನವೀನ್ ಕುಮಾರ್, ವಕೀಲ ಉಮೇಶ್, ಜಿಲ್ಲಾಧ್ಯಕ್ಷೆ ಅಮೀನಾ ಬೇಗಂ, ನಗರಾಧ್ಯಕ್ಷ ಡಾ. ಮೌಲ್ಯ ಜೈಕುಮಾರ್ ಹಾಜರಿದ್ದರು.

ಜಗದೀಶ್ ನಿಧನ



ಬೆಟ್ಟದಪುರ, ಅ.14– ಇಲ್ಲಿಗೆ ಸಮೀಪದ ಅನಿವಾಳು ಗ್ರಾಮದ ನಿವಾಸಿ, ಬೆಟ್ಟದಪುರ ಗ್ರಾಪಂ ಮಾಜಿ ಅಧ್ಯಕ್ಷೆ ಗೌರಮ್ಮ ಅವರ ಪತಿ ಜಗದೀಶ್(72) ಮಂಗಳವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ 4 ಗಂಟೆಗೆ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ದಾಕ್ಷಾಯಿಣಿ

ನಂಜನಗೂಡು, ಅ.14– ತಾಲೂಕಿನ ಹುರ ಗ್ರಾಮದ ನಿವಾಸಿ ದಿ.ಕೃಷ್ಣಮೂರ್ತಿ ಅವರ ಪುತ್ರಿ ದಾಕ್ಷಾಯಿಣಿ(47) ಇತ್ತೀಚೆಗೆ ನಿಧನರಾದರು. ಮೃತರು ತಾಯಿ, ತಂಗಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬುದ್ಧ, ಬಸವ, ಅಂಬೇಡ್ಕರ್ ತತ್ವಾದರ್ಶ ಸನ್ಮಾರ್ಗಕ್ಕೆ ನಾಂದಿ

ಬೌದ್ಧ ಮಹಾ ಸಮ್ಮೇಳನದ ವಿಚಾರಗೋಷ್ಠಿಯಲ್ಲಿ ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್

ಮೈಸೂರು,ಅ.14(ಪಿಎಂ)– ಬುದ್ಧ, ಬಸವ ಹಾಗೂ ಡಾ.ಅಂಬೇಡ್ಕರ್ ಅವರ ತತ್ವಾದರ್ಶಗಳ ಪಾಲನೆಯಿಂದ ನಾವು ಸರಿ ದಾರಿಯಲ್ಲಿ ಸಾಗಲು ಸಾಧ್ಯವಾಗಲಿದೆ ಎಂದು ಸಾಮಾಜಿಕ ಚಿಂತಕರೂ ಆದ ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್ ಹೇಳಿದರು.


ಬೌದ್ಧ ಮಹಾ ಸಮ್ಮೇಳನದ ನಳಂದ ಮುಖ್ಯ ವೇದಿಕೆಯಲ್ಲಿ ಮಂಗಳವಾರ ನಡೆದ ವಿಚಾರಗೋಷ್ಠಿಯಲ್ಲಿ ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್ ಮಾತನಾಡಿದರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿರುವ ಬೌದ್ಧ ಮಹಾ ಸಮ್ಮೇಳನದ ನಳಂದ ಮುಖ್ಯ ವೇದಿಕೆಯಲ್ಲಿ ಮಂಗಳವಾರ ನಡೆದ ವಿಚಾರಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬುದ್ಧನ ಚರಿತ್ರೆಯ ಅಧ್ಯಯನದಿಂದ ಬದುಕಿನ ದಾರಿ ಸ್ಪಷ್ಟವಾಗಲಿದ್ದು, ಅದೇ ಬುದ್ಧ ಬೆಳಕು. ಪ್ರೊ.ಕೆ.ಎಸ್.ಭಗವಾನ್ ಅವರು ಬುದ್ಧನ ಕುರಿತಂತೆ ಆಳವಾದ ಅಧ್ಯಯನ ನಡೆಸಿದ್ದಾರೆ. ಯಾವುದೇ ಮಾಹಿತಿಗೆ ಅವರ ಗ್ರಂಥವನ್ನು ಅವಲೋಕಿಸಬಹುದು. ಅವರು ಸರಳವಾಗಿ ಕನ್ನಡದಲ್ಲಿ ಬುದ್ಧನ ವಿಚಾರಧಾರೆ ವಿವರಿಸಿದ್ದಾರೆ. ಬುದ್ಧ ನಮ್ಮನ್ನು ಮುನ್ನಡೆಸುವ ಕಾಲ ಆಯಿತು. ಪ್ರಸ್ತುತ ಬುದ್ಧನ ವಿಚಾರಧಾರೆಯೊಂದಿಗೆ ನಾವು ಸಾಗಬೇಕಿದೆ ಎಂದು ತಿಳಿಸಿದರು.

ಅನ್ಯ ಜಾತಿ ಹುಡುಗ ಅಥವಾ ಹುಡುಗಿ ಪ್ರೀತಿ ಮಾಡಿ ಮದುವೆ ಆದಾಗ ಪೋಷಕರು ಅವರನ್ನು ಕೊಂದು ಹಾಕುವ ಎಷ್ಟೋ ಪ್ರಕರಣಗಳು ನಡೆದಿವೆ. ಆದರೆ ಅಂತಹ ಪೋಷಕರು ಬುದ್ಧನ ತತ್ವ ಅರಿತರೆ ಹಿಂಸೆಗೆ ಅವಕಾಶವಾಗುವುದಿಲ್ಲ. ಪ್ರಸ್ತುತ ಅತ್ಯಾಚಾರ, ಅನ್ಯಾಯ ಹೆಚ್ಚಾಗಲು ಬುದ್ಧನ ತತ್ವಗಳನ್ನು ಸಮರ್ಪಕವಾಗಿ ಪಸರಿಸದೇ ಇರುವುದೇ ಕಾರಣ. ಆದ್ದರಿಂದ ಇಂತಹ ಸಮ್ಮೇಳನ ಬುದ್ಧನ ಮೌಲ್ಯಗಳ ಬಗ್ಗೆ ಅರಿವು ಮೂಡಿಸುವಲ್ಲಿ ಮಹತ್ವದ್ದಾಗಿದೆ. ಇದರಿಂದ ಶೇ.50ರಷ್ಟು ಜನರಾದರೂ ಬುದ್ಧ, ಬಸವ ಹಾಗೂ ಅಂಬೇಡ್ಕರ್ ಅವರ ಚಿಂತನೆಗಳನ್ನು ಅಳವಡಿಸಿಕೊಳ್ಳಲಿದ್ದಾರೆ ಎಂದು ಭರವಸೆ ವ್ಯಕ್ತಪಡಿಸಿದರು.

ಗಂಡ ಸಾವನ್ನಪ್ಪಿದರೆ ಮರು ಮದುವೆ ಆಗಲು ಅವಕಾಶ ಕಲ್ಪಿಸಿರುವ ಪದ್ಧತಿ ಹಲವು ಬುಡಕಟ್ಟು ಸಮುದಾಯದಲ್ಲಿದೆ. ಇಂತಹ ಉದಾತ್ತ ಚಿಂತನೆಗಳಿಗೆ ಬುದ್ಧ, ಬಸವ ಮತ್ತು ಅಂಬೇಡ್ಕರ್ ಕಾನೂನು ಚೌಕಟ್ಟು ನೀಡಿದ್ದಾರೆ. ಆ ಮೂಲಕ ಸಮಾನ ಸ್ಥಾನಮಾನ ಕಲ್ಪಿಸಿದ್ದಾರೆ. ಬುದ್ಧನೆಂದರೆ ಜ್ಞಾನ ಹಾಗೂ ಮಾನವೀಯತೆ ಸಂಕೇತವಾಗಿದ್ದು, ಈಗಿನ ಸರ್ಕಾರಗಳನ್ನು ಸ್ವಲ್ಪ ಮಟ್ಟಿಗಾದರೂ ಬುದ್ಧ ಹಾಗೂ ಬಾಬಾ ಸಾಹೇಬರ ಚಿಂತನೆಗಳನ್ನು ಮೈಗೂಡಿಸಿಕೊಂಡಿರುವ ಹಿನ್ನೆಲೆಯಲ್ಲಿ ಉದಾತ್ತ ಚಿಂತನೆಗಳಡಿ ಜನಪರ ಹಾಗೂ ಮಹಿಳಾಪರ ಕಾರ್ಯಕ್ರಮಗಳು ಜಾರಿಗೊಂಡಿವೆ ಎಂದರು.

ಮೈಸೂರು ಮಹಾರಾಜರ ಪೈಕಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಹೆಚ್ಚು ಸ್ಮರಿಸುತ್ತೇವೆ. 'ರಾಜರ್ಷಿ' ಎಂದು ಅವರನ್ನು ಕೊಂಡಾಡುತ್ತೇವೆ. ಕಾರಣ ಅವರು ಬುಡಕಟ್ಟು ದೀನ ದಲಿತರು, ಬಡವರು ಸೇರಿದಂತೆ ಪ್ರತಿಯೊಬ್ಬರ ಶ್ರೇಯೋಭಿವೃದ್ಧಿ ದೃಷ್ಟಿಯಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಿದರು ಎಂದು ಹೇಳಿದರು.

ಪ್ರಸ್ತುತ ಹೆಚ್ಚಾಗಿ ವಿದ್ಯಾವಂತರೇ ಒಂದು ದಿನವೂ ಬಿಡುವಿಲ್ಲದಂತೆ ಹಬ್ಬಗಳ ಆಚರಣೆಯಲ್ಲಿ ತೊಡಗಿದ್ದಾರೆ. ಇಂತಹ ವಿದ್ಯಾವಂತರು ಖಂಡಿತವಾಗಿ ಬುದ್ಧ, ಬಸವ ಹಾಗೂ ಬಾಬಾ ಸಾಹೇಬರನ್ನು ಅರ್ಥ ಮಾಡಿಕೊಂಡಿಲ್ಲ. ಈ ಮಹನೀಯರ ತತ್ವ-ಚಿಂತನೆಗಳನ್ನು ಅವಳಡಿಸಿಕೊಳ್ಳಲು ಇಂತಹ ಯುವ ಸಮೂಹ ಪ್ರಯತ್ನ ಮಾಡುತ್ತಿಲ್ಲ. ಶೇ.20ರಷ್ಟು ವಿದ್ಯಾವಂತರು ಮಾತ್ರ ಈ ಮಹನೀಯರ ತತ್ವ-ಸಿದ್ಧಾಂತ ಅರ್ಥ ಮಾಡಿಕೊಂಡಿದ್ದಾರೆ ಎಂದು ತಿಳಿಸಿದರು.

ಬುದ್ಧನ ತತ್ವ ಪಾಲನೆಯಲ್ಲಿ ಪ್ರಸ್ತುತ ನಡೆಯುತ್ತಿರುವ ಆಡಂಬರದ ಆಚರಣೆಗಳು ಬರುವುದೇ ಇಲ್ಲ. ಬುದ್ಧನ ತತ್ವಗಳ ಪಾಲನೆ ಅತ್ಯಂತ ಸರಳ. ಮಕ್ಕಳು, ಕಾರ್ಮಿಕರು, ರಾಜಕೀಯ ವ್ಯಕ್ತಿಗಳು, ಸಂಘಟನೆಗಳು ಸೇರಿದಂತೆ ಪ್ರತಿಯೊಬ್ಬರು ಬುದ್ಧ, ಬಸವ ಹಾಗೂ ಅಂಬೇಡ್ಕರ್ ಅವರ ತತ್ವಾದರ್ಶಗಳತ್ತ ಗಮನ ನೀಡಬೇಕು ಎಂದರು.

ಇದಕ್ಕೂ ಮುನ್ನ 'ಭಾರತದಲ್ಲಿ ಸಾಮಾಜಿಕ ಚಳುವಳಿಗಳ ಮೇಲೆ ಬುದ್ಧ ಚಿಂತನೆಗಳ ಪ್ರಭಾವ' ಕುರಿತು ವಿಚಾರ ಮಂಡಿಸಿದ ಕವಯತ್ರಿ ಹೆಚ್.ಎಸ್. ಅನುಪಮಾ, ವರ್ಣ ವ್ಯವಸ್ಥೆಯಲ್ಲಿನ ಅಸಮಾನತೆ ಪ್ರಶ್ನಿಸಿದ ಚಳುವಳಿಗಳಲ್ಲಿ ಬುದ್ಧನ ತತ್ವದ ಪ್ರಭಾವ ಕಾಣಬಹುದು. 3 ಸಾವಿರ ವರ್ಷಗಳ ಹಿಂದೆ ವೇದ ಕಲಿತವರೇ ಶ್ರೇಷ್ಠರು ಎಂಬ ಭಾವನೆ ಬಿತ್ತಲಾಗಿತ್ತು. ಕಾಲ್ಪನಿಕ ವಿಷಯಗಳಲ್ಲಿ ಭಾರತವನ್ನು ಮುಳಗಿಸ ಲಾಗಿತ್ತು. ಇಂತಹ ಅವೈಜ್ಞಾನಿಕ ವಿಚಾರಗಳ ವಿರುದ್ಧ ಬೌದ್ಧ ಪ್ರಜ್ಞೆ ಜಾಗೃತಿ ಮೂಡಿಸಿತು. ಬುದ್ಧನ ತತ್ವದ ಪರಿಣಾಮ ಅಶೋಕ ಯುದ್ಧಗಳನ್ನು ಕೈಬಿಟ್ಟು ಸಾಮಾಜಿಕ ಸುಧಾರಣೆಯ ದೊಡ್ಡ ಪ್ರಯತ್ನ ಮಾಡಿದೆ ಎಂದು ವಿವರಿಸಿದರು.

'ಬಾಬಾ ಸಾಹೇಬರ ಜ್ಞಾನೋದಯದ ನಂತರ ಧಮ್ಮ ಮತ್ತು ನಾವು-ನೀವು' ವಿಚಾರ ಕುರಿತು ವಿಧಾನ ಪರಿಷತ್ ಮಾಜಿ ಸದಸ್ಯ ಬಿ.ಎಸ್. ವೀರಯ್ಯ ವಿಚಾರ ಮಂಡಿಸಿದರು. ಹೆಚ್‌ಡಿ ಕೋಟೆ ಅಂತರಸಂತೆ ಬುದ್ಧವಿಹಾರದ ಪೂಜ್ಯ ಭಂತೆಮಾತೆ ಗೌತಮಿ ಧಮ್ಮಸಾನಿಧ್ಯ ವಹಿಸಿದ್ದರು.

ಬುದ್ಧ ಚಲಿಸಿದ ಮಾರ್ಗವೇ ಸಾಮಾಜಿಕ ಸುಧಾರಣೆಯ ಚಳುವಳಿ...

ಯಾವುದೇ ವಿಚಾರವಾಗಲಿ, ಗುರು-ಹಿರಿಯರು ಹೇಳಿದ್ದಾರೆ, ಶಾಸ್ತ್ರ ಗ್ರಂಥದಲ್ಲಿ ಬರೆದಿಟ್ಟಿದೆ, ಪರಂಪರೆಯಿಂದ ಬಂದಿದೆ ಎಂಬ ಕಾರಣಕ್ಕೂ ನಂಬಬೇಡ. ಅವಲೋಕಿಸಿ, ವಿಶ್ಲೇಷಿಸು. ಅದು ಲೋಕಹಿತ ಮತ್ತು ಒಳಿತಿಗೆ ಪೂರಕವಾಗಿದ್ದರೆ ಅನುಸರಿಸು ಎಂದು ಬುದ್ಧ ಹೇಳಿದ್ದಾನೆ. ಬುದ್ಧನ ಈ ಮಾತುಗಳಲ್ಲೇ ಜನರಲ್ಲಿ ಅರಿವು ಮೂಡಿಸುವ ಉದ್ದೇಶವಿದೆ. ಬುದ್ಧ ಚಲಿಸಿದ ಮಾರ್ಗವೇ ಒಂದು ಸಾಮಾಜಿಕ ಸುಧಾರಣೆಯ ಚಳವಳಿ.

-ಹೆಚ್.ಎಸ್.ಅನುಪಮಾ, ಕವಯತ್ರಿ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದೇ ಕಾಲ್ ಹಿಮ್ ಓಜಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್-1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸೈಯಾರಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್-1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್-1 (ಕ)	4 ಪ್ರದರ್ಶನಗಳು
ರಾಜಕಮಲ್	
ಇಡ್ಲಿ ಕಡಾಯಿ (ತ)	4 ಪ್ರದರ್ಶನಗಳು
ಸಂಗಂ	
ಕಾಂತಾರ ಚಾಪ್ಟರ್-1 (ಕ)	4 ಪ್ರದರ್ಶನಗಳು
ಲಿಡೋ	
ಇಡ್ಲಿ ಕೊಟ್ಟು (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಏಳುಮಲೆ(ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್ ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಬೆ.9.45ಕ್ಕೆ, ಮ.1.10ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸುನ್ನಿ ಸಂಸ್ಕಾರಿ ಕಿ ತುಳಸಿ ಕುಮಾರಿ (ಹಿಂ): ಸಂ.4.30ಕ್ಕೆ.
ಸ್ಕ್ರೀನ್ 2	ತ್ರೋನ್ ಏರ್ಸ್ (ಇಂ): ಮ.1.35ಕ್ಕೆ, ರಾ.7.30ಕ್ಕೆ, ಕಾಂತಾರ ಚಾಪ್ಟರ್ 1(ಕ): ಸಂ.4.05ಕ್ಕೆ, ರಾವಣ ಪ್ರಭು (ಮ): ರಾ.10.05ಕ್ಕೆ.
ಸ್ಕ್ರೀನ್ 3	ಕಾಂತಾರ ಚಾಪ್ಟರ್ 1(ಕ): ಬೆ.10.05ಕ್ಕೆ, ಮ.1.25ಕ್ಕೆ, ಸಂ.4.45ಕ್ಕೆ, ರಾ.8.15ಕ್ಕೆ.
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರೌಡಿ ಪ್ರತಿಬಂಧಕ ದಳ ಮತ್ತೆ ಅಸ್ತಿತ್ವಕ್ಕೆ ತಂದ ಕ್ರಮ ಸ್ವಾಗತಾರ್ಹ

ಕರ್ನಾಟಕ ಪ್ರಜಾ ಪಾರ್ಟಿ ಸಂಸ್ಥಾಪಕ ರಾಜ್ಯಾಧ್ಯಕ್ಷ ಬಿ.ಶಿವಣ್ಣ

ಮೈಸೂರು,ಅ.14(ಪಿಎಂ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಅಪರಾಧಗಳನ್ನು ತಡೆಗಟ್ಟಿ ಶಾಂತಿ-ಸುವ್ಯವಸ್ಥೆ ಕಾಪಾಡಲು ರೌಡಿ ಪ್ರತಿಬಂಧಕ ದಳ ಮತ್ತೆ ಅಸ್ತಿತ್ವಕ್ಕೆ ತಂದಿರುವ ನಗರ ಪೊಲೀಸ್ ಆಯುಕ್ತರ ಕ್ರಮವನ್ನು ಕರ್ನಾಟಕ ಪ್ರಜಾ ಪಾರ್ಟಿ (ರೈತಪರ್ವ) ಸ್ವಾಗತಿಸಲಿದೆ ಎಂದು ಪಾರ್ಟಿಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಬಿ.ಶಿವಣ್ಣ ತಿಳಿಸಿದ್ದಾರೆ.


ಬಿ.ಶಿವಣ್ಣ

ಮೈಸೂರಿನಲ್ಲಿ ಹಾಡಹಗಲೇ ಕೊಲೆಗಳು ನಡೆಯುತ್ತಿದ್ದು, ಗೂಂಡಾಗಳು ತಮ್ಮ ಅಟ್ಟಹಾಸ ಮೆರೆಯುತ್ತಿದ್ದಾರೆ. ಬಾಲಕಿ ಅತ್ಯಾಚಾರ ಮಾಡಿ, ಅತ್ಯಂತ ಭೀಕರವಾಗಿ ಹತ್ಯೆಗೈದಿರುವುದು ಖಂಡನೀಯ. ಮತ್ತೊಂದು ಪ್ರಕರಣದಲ್ಲಿ ವ್ಯಕ್ತಿಯೊಬ್ಬನ ಬರ್ಬರವಾಗಿ ಕೊಚ್ಚಿ ಕೊಲೆ ಮಾಡಲಾಗಿದೆ. ದುರುಳರ ಈ ನಡೆ ಮೈಸೂರು ಜನರನ್ನು ಭಯಭೀತರನ್ನಾಗಿ ಮಾಡಿದೆ.

ಮೈಸೂರು ನಗರ ಪೊಲೀಸ್ ಆಯುಕ್ತರು ಈ ಪ್ರಕರಣಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದು, ಮೈಸೂರು ನಗರದಲ್ಲಿ ಈ ಹಿಂದೆ ಇದ್ದಂತಹ ರೌಡಿ ಪ್ರತಿಬಂಧಕ ದಳವನ್ನು ಮತ್ತೆ ಅಸ್ತಿತ್ವಕ್ಕೆ ತಂದಿದ್ದಾರೆ. ಆ ಮೂಲಕ ನಗರದಲ್ಲಿ ರೌಡಿಗಳ ಅಟ್ಟಹಾಸ ಮಟ್ಟಹಾಕಿ ಅಪರಾಧಗಳನ್ನು ತಡೆಗಟ್ಟಲು ಮುಂದಾಗಿದ್ದಾರೆ. ಹೀಗೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಶಾಂತಿ-ಸುವ್ಯವಸ್ಥೆ ಕಾಪಾಡಲು ಗಂಭೀರ ಕ್ರಮಗಳಿಗೆ ಮುಂದಾಗಿರುವ ಪೊಲೀಸ್ ಆಯುಕ್ತರ ಕ್ರಮ ಸ್ವಾಗತಾರ್ಹ ಎಂದು ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

ಮಾಜಿ ಪತ್ನಿ ಹತ್ಯೆ; ವ್ಯಕ್ತಿಗೆ ಜೀವಾವಧಿ ಶಿಕ್ಷೆ

ಮೈಸೂರು ನ್ಯಾಯಾಲಯ ಮಹತ್ವ ತೀರ್ಪು

ಮೈಸೂರು, ಅ.14– ಮಾಜಿ ಪತ್ನಿಯನ್ನು ಹತ್ಯೆ ಮಾಡಿದ್ದ ವ್ಯಕ್ತಿಗೆ ಮೈಸೂರಿನ 2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲೂಕು ಮೂಲದ ಲೇಟ್ ತಾಂಡವ ಮೂರ್ತಿ ಅವರ ಪುತ್ರ ಕಾರ್ತಿಕ್‌ಗೆ ನ್ಯಾಯಾಲಯ ಶಿಕ್ಷೆ ವಿಧಿಸಿದ್ದು, ಈತ ಮೈಸೂರಿನ ವಿದ್ಯಾರಣ್ಯಪುರಂನಲ್ಲಿ ತನ್ನ ಮಾಜಿ ಪತ್ನಿಯನ್ನು 2017ರಲ್ಲಿ ಹತ್ಯೆ ಮಾಡಿದ್ದ.

ಕಾರ್ತಿಕ್‌ನ ಸಹೋದರಿ ರೈಲ್ವೆ ಉದ್ಯೋಗಿಯಾಗಿದ್ದು ಅವರು ಮೈಸೂರಿನ ರೈಲ್ವೆ ಕ್ವಾಟ್ರರ್ಸ್‌ನಲ್ಲಿ ಇದ್ದರು. ಸುನೀತಾ ಅವರ ತಂದೆಯೂ ರೈಲ್ವೆ ನೌಕರರಾಗಿದ್ದರಿಂದ ಕುಟುಂಬದೊಂದಿಗೆ ಕ್ವಾಟ್ರರ್ಸ್‌ನಲ್ಲೇ ನೆಲೆಸಿದ್ದರು. ಆಗಾಗ ಸಹೋದರಿ ಮನೆಗೆ ಬಂದು ಹೋಗುತ್ತಿದ್ದ ಕಾರ್ತಿಕ್ ಹಾಗೂ ಸುನೀತಾ ಪ್ರೀತಿಸಿ, ವಿವಾಹವಾಗಿದ್ದರು. ದಂಪತಿಗೆ ಗಂಡು ಮಗುವಿದ್ದು, ಕಾರ್ತಿಕ್ ವಿನಾಕಾರಣ ಪತ್ನಿಯ ನಡತೆ ಮೇಲೆ ಅನುಮಾನಪಟ್ಟು ಕಿರುಕುಳ ನೀಡುತ್ತಿದ್ದ. ಪತಿಯ ಕಿರುಕುಳ ಸಹಿಸಲಾಗದೆ ಸುನೀತಾ 2017ರಲ್ಲಿ ವಿಚ್ಛೇದನಾ ಪಡೆದು, ಮಗನೊಂದಿಗೆ ಮೈಸೂರಿಗೆ ವಾಪಸ್ಸಾದರು. ಅಷ್ಟರಲ್ಲಿ ತಾಯಿಯೂ ಮೃತಪಟ್ಟಿದ್ದರಿಂದ ತಂದೆ ಮತ್ತು ತಮ್ಮನಿಗೂ ಸಹಾಯವಾಗಬಹುದು ಎಂದು ಭಾವಿಸಿ, ಅವರ ಮನೆಯಲ್ಲೇ ಆಶ್ರಯ ಪಡೆದರು.

ಇದರಿಂದ ಸುನೀತಾ ಮೇಲೆ ದ್ವೇಷ ಬೆಳೆಸಿಕೊಂಡಿದ್ದ ಕಾರ್ತಿಕ್, 2017ರ ಜೂ.13ರಂದು ಪುತ್ರನ ನೋಡುವ ನೆಪದಲ್ಲಿ ಮೈಸೂರಿಗೆ ಬಂದಿದ್ದ. ಅಂದು ಬೆಳಗ್ಗೆ ತಂದೆ ಮತ್ತು ತಮ್ಮ ಕೆಲಸಕ್ಕೆ ಹೋಗಿದ್ದರಿಂದ ಸುನೀತಾ ತನ್ನ ಮಗನನ್ನು(ಆಗ 7 ವರ್ಷ) ಶಾಲೆಯ ಬಸ್ ಹತ್ತಿಸಲು ನಿಂತಿದ್ದರು. ಅಲ್ಲಿಗೆ ಬಂದ ಕಾರ್ತಿಕ್, ಮಗನಿಗೆ ಚಾಕೋಲೆಟ್ ಕೊಡಿಸಿ ಮುದ್ದಿಸಿದ್ದ. ಮಗನನ್ನು ಶಾಲೆಯ ಬಸ್ ಹತ್ತಿಸಿದ ಸುನೀತಾ, ಮನೆಯೊಳಗೆ ಬಂದು ಬಾಗಿಲು ಮುಚ್ಚುವಷ್ಟರಲ್ಲಿ ಕಾರ್ತಿಕ್ ಹಿಂಬಾಲಿಸಿ ಬಂದಿದ್ದ.

ಮಗನನ್ನು ನೋಡಲಷ್ಟೇ ಬಂದಿದ್ದೆ. ಒಂದು ಲೋಟ ನೀರು ಕೊಡು, ಕುಡಿದುಕೊಂಡು ಹೊರಡುತ್ತೇನೆ ಎಂದು ಹೇಳಿದ್ದ. ಇದನ್ನು ನಂಬಿದ ಸುನೀತಾ ನೀರು ತರಲೆಂದು ಅಡುಗೆ ಕೋಣೆಯತ್ತ ಹೋಗುತ್ತಿದ್ದಂತೆ ಬಾಗಿಲು ಭದ್ರಗೊಳಿಸಿದ ಕಾರ್ತಿಕ್, ಪೂರ್ವ ನಿಯೋಜಿತವಾಗಿ ತಂದಿದ್ದ ಡ್ರ್ಯಾಗರ್‌ನಿಂದ ಸುನೀತಾಳ ಕತ್ತು ಕೊಯ್ದು, ಚುಚ್ಚಿ ಹತ್ಯೆ ಮಾಡಿ, ಪರಾರಿಯಾಗಿದ್ದ. ಈ ವೇಳೆ ತನ್ನ ಮೊಬೈಲ್ ಸಿಮ್ ಕಾರ್ಡ್ ಅನ್ನು ಮುರಿದು, ರೈಲ್ವೆ ಶೆಡ್‌ನ ಪೊದೆಯೊಳಗೆ ಬಿಸಾಡಿದ್ದ.

ಘಟನೆ ಸಂಬಂಧ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ಸಾಕ್ಷ್ಯಾಧಾರಗಳ ಆಧಾರದಲ್ಲಿ ಆರೋಪಿಯನ್ನು ಬಂಧಿಸಲಾಗಿತ್ತು. ಅಂದಿನ ತನಿಖಾಧಿಕಾರಿ ಓಂಕಾರಪ್ಪ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ 2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ(2ನೇ ಎಡಿಜೆ)ದ ನ್ಯಾಯಾಧೀಶರಾದ ಮಲ್ಲನಗೌಡ ಅವರು ಕಾರ್ತಿಕ್ ವಿರುದ್ಧದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆತನಿಗೆ ಜೀವಾವಧಿ ಶಿಕ್ಷೆ ಹಾಗೂ 1 ಲಕ್ಷ ರೂ. ದಂಡ ವಿಧಿಸಿ, ಸೋಮವಾರ ತೀರ್ಪು ಪ್ರಕಟಿಸಿದ್ದಾರೆ. ಸರ್ಕಾರದ ಪರವಾಗಿ 2ನೇ ಎಡಿಜೆ ಸರ್ಕಾರಿ ಅಭಿಯೋಜಕಿ ಬಿ.ಎಂ.ವೀಣಾ ವಾದ ಮಂಡಿಸಿದ್ದರು.

ಅ.18ರವರೆಗೂ ಭಾರಿ ಮಳೆ

ಹವಾಮಾನ ಇಲಾಖೆ



ಬೆಂಗಳೂರು, ಅ.14– ಕರ್ನಾಟಕವನ್ನೂ ಒಳಗೊಂಡು ದಕ್ಷಿಣ ಭಾರತದಲ್ಲಿ ಅ. 18ರವರೆಗೂ ಗುಡುಗು ಸಹಿತ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರ ಪ್ರದೇಶ ಹಾಗೂ ತೆಲಂಗಾಣದ ಕೆಲ ಭಾಗಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗಲಿದೆ. ಕೆಲವು ಭಾಗಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆಗಳಿವೆ ಎಂದು ಮುನ್ಸೂಚನೆ ನೀಡಿದೆ.

ಈ ಅವಧಿಯಲ್ಲಿ ಬೆಂಗಳೂರಿನಲ್ಲೂ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ. ಗಾಳಿಯ ವೇಗವು ಗಂಟೆಗೆ 30ರಿಂದ 40 ಕಿ.ಮೀ. ವೇಗದಲ್ಲಿ ಬೀಸಲಿದೆ. ಈ ಅವಧಿಯಲ್ಲಿ ಸಿಡಿಲು ಉಂಟಾಗುವ ಸಾಧ್ಯತೆಗಳೂ ಇವೆ ಎಂದು ಎಚ್ಚರಿಸಿದೆ.

ನೈರುತ್ಯ ಮುಂಗಾರು ಕೊನೆಗೊಳ್ಳುವ ಮನ್ಸೂಚನೆಯೂ ಇದೆ. ಹೀಗಾಗಿ ಕೇಂದ್ರ ಮತ್ತು ಪೂರ್ವ ಭಾರತದ ಹಲವೆಡೆ ಮಳೆಯಾಗಲಿದೆ ಎಂದಿದೆ.



ಎರಡನೇ ದಿನವೂ ಯಶಸ್ವಿ ಪ್ರದರ್ಶನ...

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ರಂಗಭೂಮಿ ಟ್ರಸ್ಟ್ ಕೊಡಗು ಪ್ರಸ್ತುತಿಯ 'ನಿಜಮಹಾತ್ಮ ಬಾಬಾಸಾಹೇಬ' ನಾಟಕದ ಎರಡನೇ ದಿನದ ಪ್ರದರ್ಶನ ಸಹ ಮಂಗಳವಾರ ಯಶಸ್ವಿಯಾಗಿ ನಡೆಯಿತು. ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚಿಸಿ, ನಿರ್ದೇಶಿಸಿರುವ ನಾಟಕ ಇದಾಗಿದೆ.

ಸರಣಿ ಕ್ಲೀನ್‌ಸ್ವೀಪ್ ಮಾಡಿದ ಭಾರತ; ವಿಂಡೀಸ್‌ಗೆ ಮುಖಭಂಗ



ಟ್ರೋಫಿಯೊಂದಿಗೆ ಟೀಂ ಇಂಡಿಯಾ ಆಟಗಾರರ ಸಂಭ್ರಮ

ನವದೆಹಲಿ, ಅ.14(ವಿವಿಹೆಚ್)– ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ವೆಸ್ಟ್‌ಇಂಡೀಸ್ ವಿರುದ್ಧ ನಡೆದ ಎರಡನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದಲ್ಲಿ ಭಾರತ 7 ವಿಕೆಟ್ ಅಂತರದ ಭರ್ಜರಿ ಗೆಲುವು ದಾಖಲಿಸಿದೆ. ಆ ಮೂಲಕ ಎರಡು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಭಾರತ 2-0 ಅಂತರದ ಕ್ಲೀನ್ ಸ್ವೀಪ್ ಸಾಧನೆ ಮಾಡಿದೆ.

ವಿಂಡೀಸ್ ಒಡ್ಡಿದ 121 ರನ್‌ಗಳ ಗುರಿ ಬೆನ್ನತ್ತಿದ ಭಾರತ ಅಂತಿಮ ದಿನದಾಟದ ಮೊದಲ ಅವಧಿಯಲ್ಲಿ (ಮೊದಲ ಸೆಸನ್) ಗೆಲುವಿನ ನಗೆ ಬೀರಿತು. 35.2 ಓವರ್‌ಗಳಲ್ಲಿ ಕೇವಲ 3 ವಿಕೆಟ್ ಕಳೆದುಕೊಂಡು ಗುರಿ ಮುಟ್ಟಿತು

ಚೇಸ್ ಮಾಡಲು ಬಂದ ಟೀಂ ಇಂಡಿಯಾ ಪರ ಯಶಸ್ವಿ ಜೈಸ್ವಾಲ್ 8 ಹಾಗೂ ನಾಯಕ ಶುಭಮನ್ ಗಿಲ್ 13 ರನ್ ಗಳಿಸಿ ಔಟ್ ಆದರು. ನಂತರ ಬಂದ ಸಾಯಿ ಸುದರ್ಶನ್ 39 ರನ್‌ಗಳ ಉಪಯುಕ್ತ ಇನಿಂಗ್ಸ್ ಕಟ್ಟಿದರು. ಬಳಿಕ ಭರ್ಜರಿಯಾಗಿ ಬ್ಯಾಟ್ ಬೀಸಿದ ಆರಂಭಿಕ ಬ್ಯಾಟರ್, ಕನ್ನಡಿಗ ಕೆ.ಎಲ್. ರಾಹುಲ್ ಅಜೇಯ ಅರ್ಧಶತಕ (58) ಗಳಿಸಿದರು. ಧ್ರುವ್ ಜುರೆಲ್ 6 ರನ್ ಗಳಿಸಿ ಅಜೇಯರಾಗಿ ಉಳಿದರು.

ಭಾರತ ಮೊದಲ ಇನಿಂಗ್ಸ್‌ನಲ್ಲಿ ಯಶಸ್ವಿ ಜೈಸ್ವಾಲ್ (175) ಹಾಗೂ ನಾಯಕ ಶುಬ್‌ಮನ್‌ಗಿಲ್ (129) ಶತಕದ ಬಲದೊಂದಿಗೆ 5 ವಿಕೆಟ್ ನಷ್ಟಕ್ಕೆ 518 ರನ್ ಪೇರಿಸಿ ಡಿಕ್ಲೇರ್ ಘೋಷಿಸಿತ್ತು.

ಕುಲದೀಪ್ ಯಾದವ್ (82ಕ್ಕೆ 5 ವಿಕೆಟ್) ದಾಳಿಗೆ ಸಿಲುಕಿದ್ದ ವಿಂಡೀಸ್ 248 ರನ್ನಿಗೆ ಆಲೌಟ್ ಆಗಿ ತನ್ನ ಮೊದಲ ಇನ್ನಿಂಗ್ಸ್ ಮುಗಿಸಿತ್ತು. ಆ ಮೂಲಕ ಭಾರತ ಮೊದಲ ಇನಿಂಗ್ಸ್‌ನಲ್ಲಿ 270 ರನ್‌ಗಳ ಮುನ್ನಡೆ ಗಳಿಸಿತ್ತಲ್ಲದೆ ಎದುರಾಳಿ ತಂಡದ ಮೇಲೆ ಫಾಲೋ ಆನ್ ಹೇರಿತ್ತು.

ದ್ವಿತೀಯ ಇನಿಂಗ್ಸ್‌ನಲ್ಲಿ ಪ್ರತಿರೋಧ ತೋರಿದ್ದ ವಿಂಡೀಸ್ 390 ರನ್ ಬಾರಿಸಿತು. ಜಾನ್ ಕ್ಯಾಂಪ್‌ಬೆಲ್ (115) ಹಾಗೂ ಶಾಯ್ ಹೋಪ್ (103) ಅಮೋಘ ಶತಕಗಳನ್ನು ಬಾರಿಸಿ ತಂಡಕ್ಕೆ ಆಸರೆಯಾಗಿದ್ದರು.

ಭಾರತದ ಪರ ದ್ವಿತೀಯ ಇನಿಂಗ್ಸ್‌ನಲ್ಲಿ ಕುಲದೀಪ್ ಯಾದವ್ ಹಾಗೂ ಜಸ್‌ಪ್ರೀತ್ ಬೂಮ್ರಾ ತಲಾ ಮೂರು ವಿಕೆಟ್‌ಗಳನ್ನು ಕಬಳಿಸಿ ಮಿಂಚಿದ್ದರು.

ಎರಡನೇ ಟೆಸ್ಟ್ ಪಂದ್ಯದಲ್ಲಿ 8 ವಿಕೆಟ್ ಪಡೆದ ಕುಲ್ದೀಪ್ ಯಾದವ್ ಪಂದ್ಯಶ್ರೇಷ್ಠ ಪಡೆದರೆ, ಟೂರ್ನಿಯಲ್ಲಿ ಉತ್ತಮ ಸಾಧನೆ ಮಾಡಿದ ರವೀಂದ್ರ ಜಡೇಜಾ ಸರಣಿ ಶ್ರೇಷ್ಠ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

ಇದಕ್ಕೂ ಮೊದಲು ಅಹಮದಾಬಾದ್‌ನಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತ, ವಿಂಡೀಸ್ ವಿರುದ್ಧ ಇನ್ನಿಂಗ್ಸ್ ಹಾಗೂ 140 ರನ್ ಅಂತರದ ಜಯ ಗಳಿಸಿತ್ತು.

ದಿಢೀರ್ ಶ್ರೀಮಂತ ಸಮಾಜ ಅಕ್ರಮ ಸಂಪಾದನೆಯಿಂದಲೇ ನಿರ್ಮಾಣವಾದದ್ದು!

• ನಿವೃತ್ತ ಲೋಕಾಯುಕ್ತ ಡಾ.ಎನ್.ಸಂತೋಷ್‌ಹೆಗ್ಡೆ ವಿಷಾದ • ಸಿಎಫ್‌ಟಿಆರ್‌ಐನಲ್ಲಿ ಡಾ.ಅಂಬೇಡ್ಕರ್ ಜಯಂತಿ

ಮೈಸೂರು, ಅ.14(ಎಸ್‌ಪಿಎನ್)– ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅಳವಡಿಸಿಕೊಂಡಿದ್ದ 'ತೃಪ್ತಿ' ಮತ್ತು 'ಮಾನವೀಯ ಮೌಲ್ಯ'ಗಳನ್ನು ಇತರರೂ ಅನುಸರಿಸಿದಾಗ ಮಾತ್ರ ಸಾಮಾಜಿಕವಾಗಿ ಭಾರತ ಸುಂದರ ದೇಶವಾಗಲು ಸಾಧ್ಯ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಡಾ.ಎನ್.ಸಂತೋಷ್ ಹೆಗ್ಡೆ ಅಭಿಪ್ರಾಯಪಟ್ಟರು.



ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿಯಲ್ಲಿ ಹಿರಿಯ ಸಾಹಿತಿ ಡಾ.ಸಿ.ನಾಗಣ್ಣ, ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ಅಧ್ಯಕ್ಷ ಜಾಕೀರ್ ಹುಸೇನ್, ಸಿಎಫ್‌ಟಿಆರ್‌ಐ ಎಸ್ಸಿ, ಎಸ್ಟಿ ವರ್ಗಗಳ ನೌಕರರ ಸಂಘದ ಸಂಸ್ಥಾಪಕ ಅಧ್ಯಕ್ಷ ಎಸ್.ಶಿವಪ್ಪ ಅವರನ್ನು ಸನ್ಮಾನಿಸಲಾಯಿತು.

ಮೈಸೂರು ಸಿಎಫ್‌ಟಿಆರ್‌ಐ ಸಭಾಂಗಣದಲ್ಲಿ ಸಿಎಫ್‌ಟಿಆರ್‌ಐನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿ ಸಮಾರಂಭದಲ್ಲಿ ಭಾಗವಹಿಸಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಜನಸಾಮಾನ್ಯರು ಅಂಬೇಡ್ಕರ್ ಅವರ ಸೇವಾ ಕಾರ್ಯ ಮತ್ತು ವಿಚಾರ ಧಾರೆಗಳನ್ನು ಸದಾ ಸ್ಮರಿಸಿ, ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರಸ್ತುತ ನಮ್ಮ ಸುತ್ತಲೂ ಕಾಣುವ ಸಮಾಜ ಶ್ರೀಮಂತವಾಗಿದೆ. ಅದು ಅಕ್ರಮ ಮಾರ್ಗದಲ್ಲಿ ಗಳಿಸಿದ ಸಂಪಾದನೆಯಲ್ಲಿ ದಿಢೀರ್ ಉದ್ಭವಿಸಿದ ಶ್ರೀಮಂತ ಸಮಾಜ. ಕಾನೂನು ವ್ಯಾಪ್ತಿ ಯಲ್ಲಿ ಸಂಪತ್ತುಗಳಿಸಿ, ಶ್ರೀಮಂತರಾದ ವರ ಸಂಖ್ಯೆ ವಿರಳ. ಈ ಸಾಮಾಜಿಕ ಅನ್ಯಾಯಕ್ಕೆ ಸಮಾಜವೇ ಕಾರಣ. ಅಂತೆಯೇ ಇಂದಿನ ಸಮಾಜದಲ್ಲಿ 'ಸಂಪತ್ತು' ಮತ್ತು 'ಅಧಿಕಾರ' ದಾಹ ಹೆಚ್ಚಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು, ಕಡು ಬಡತನದಲ್ಲಿ ಹುಟ್ಟಿದರೂ, ತನ್ನ ಸುತ್ತ ಕ್ರೂರ ಸಾಮಾಜಿಕ ವ್ಯವಸ್ಥೆಯಿದ್ದರೂ ಆ ಸಮಾಜದ ನಡುವೆ ಬದುಕಿ, ಅಪಾರ ಜ್ಞಾನ ಸಂಪತ್ತು ಗಳಿಸಿದ್ದರು. ಇದು ಅದರ ಫಲವಾಗಿ ಅವರು ನೀಡಿರುವ ಸಂವಿಧಾನದ ನೆರಳಿನಲ್ಲಿ ಸುಂದರ ಬದುಕು ಕಟ್ಟಿಕೊಂಡಿದ್ದೇವೆ. ಇದಕ್ಕೆ ನಮ್ಮ ಅನೇಕ ಪೂರ್ವಜರ ಶ್ರಮವಿದೆ. ಹಾಗಾಗಿ ಭಾರತ ಪ್ರಗತಿ ಹೊಂದಿದ ದೇಶವಾಗಿ ಮುಂಚೂಣಿಯಲ್ಲಿದೆ ಎಂದು ಬಣ್ಣಿಸಿದರು.

ಪ್ರಸ್ತುತ ನಗರ ಪ್ರದೇಶದಲ್ಲಿ ಪೋಷಕರಿಬ್ಬರೂ ಹೊರಗಡೆ ಕೆಲಸಕ್ಕೆ ಹೋಗುವ ಪರಿಸ್ಥಿತಿಯಿದೆ. ಪೋಷಕರ ಅನುಪಸ್ಥಿತಿಯಲ್ಲಿ ಮಕ್ಕಳು ಜೀವನ ಕಟ್ಟಿಕೊಳ್ಳಬೇಕಾದ ಸನ್ನಿವೇಶ ನಗರ ಪ್ರದೇಶದಲ್ಲಿದೆ. ಈ ಅವಧಿಯಲ್ಲಿ ಅವರು (ಮಕ್ಕಳು) ಒಳ್ಳೆಯ ಗುಣಗಳನ್ನಾದರೂ ಬೆಳೆಸಿಕೊಳ್ಳಬಹುದು. ಇಲ್ಲವೇ ಕೆಟ್ಟ ಗುಣಗಳನ್ನಾದರೂ ಬೆಳೆಸಿಕೊಳ್ಳಬಹುದು. ಇದು ಪರಿಸರದ ಮೇಲೆ ಅವಲಂಭಿತವಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಪೋಷಕರು ತಮ್ಮ ಮಕ್ಕಳಿಗೆ ನೈತಿಕ ಪಾಠಗಳನ್ನು ಕಲಿಸುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು.ಇಲ್ಲದಿದ್ದರೆ, ತಮ್ಮ ಮಕ್ಕಳು ಮೌಲ್ಯಗಳನ್ನು ಅಳವಡಿಸಿಕೊಳ್ಳದೇ ಎಷ್ಟೇ ವಿದ್ಯಾವಂತರಾದರೂ ಭ್ರಷ್ಟಾಚಾರದಿಂದ ಮುಕ್ತಿ ಹೊಂದಲು ಸಾಧ್ಯವಿಲ್ಲ. ನಾನು ಲೋಕಾಯುಕ್ತದಲ್ಲಿದ್ದಾಗ ಮೂರು ಮಂದಿ ಮುಖ್ಯಮಂತ್ರಿಗಳು, ಎಂಟು ಮಂದಿ ಮಂತ್ರಿಗಳು ಹಾಗೂ 156 ಮಂದಿ ಭ್ರಷ್ಟ ಅಧಿಕಾರಿಗಳ ವಿರುದ್ಧ ವರದಿ ನೀಡಿದ್ದೇ. ಆದರೆ, ಸರ್ಕಾರಗಳು ನನ್ನ ವರದಿಯನ್ನು ಸರಿಯಾಗಿ ಅನುಷ್ಠಾನ ಮಾಡಲಿಲ್ಲ. ಇದರಿಂದ ಭ್ರಷ್ಟರು ರಾಜಾರೋಷವಾಗಿ ಓಡಾಡಿಕೊಂಡಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಸ್ತುತ ಬಿಹಾರ ವಿಧಾನಸಭೆಗೆ ಚುನಾವಣೆ ಘೋಷಣೆಯಾಗಿದೆ. ಎಲ್ಲಾ ಪಕ್ಷಗಳಿಂದ ಅಭ್ಯರ್ಥಿಗಳಾಗಿ ಘೋಷಣೆ ಮಾಡಿರುವ 100ರಲ್ಲಿ 63 ಅಭ್ಯರ್ಥಿಗಳು ಕ್ರಿಮಿನಲ್ ಹಿನ್ನಲೆಯುಳ್ಳವರಾಗಿದ್ದಾರೆ. ಹಾಗೆಯೇ ಸಂಸದರಲ್ಲಿ 270 ಮಂದಿ ಕ್ರಿಮಿನಲ್‌ಗಳು. ಹಿರಿಯರು ಸೃಷ್ಟಿಸಿರುವ ಭ್ರಷ್ಟಾಚಾರ ಸಮಾಜವನ್ನು ಮುಕ್ತಗೊಳಿಸಬೇಕಾದರೆ, ಅದು ಯುವ ಸಮೂಹದಿಂದ ಮಾತ್ರ ಸಾಧ್ಯ ಎಂದರು.

ರಾಜ್ಯ ಸರಕಾರದ ಕೈ ಮಗ್ಗ ಮತ್ತು ಜವಳಿ ಇಲಾಖೆಯ ಆಯುಕ್ತೆ ಕೆ.ಜ್ಯೋತಿ ಮಾತನಾಡಿ, ಜನರಲ್ಲಿ ಅಸಹನೆ, ಕೋಪದೊಂದಿಗೆ ಪ್ರತಿ ಸ್ಪರ್ಧೆ ಮನೋಭಾವ ಹೆಚ್ಚಾಗಿ, ಕಾನೂನಿನ ಭಯವೇ ಇಲ್ಲದಂತಾಗಿದೆ. ಹಣ ಸಂಪಾದನೆಯೇ ಯಶಸ್ಸು ಎಂಬಂತೆ ಮಾಧ್ಯಮಗಳಲ್ಲಿ ಬಿಂಬಿತವಾಗುತ್ತಿದೆ. ಇದು ಮೌಲ್ಯಗಳ ಕುಸಿತದ ಸಂಕೇತವಾಗಿದೆ. ಅಂಬೇಡ್ಕರ್ ಅವರನ್ನು ಹೊಗಳುವ ಭರದಲ್ಲಿ ದಲಿತರ ಸೂರ್ಯ ಎನ್ನುತ್ತೇವೆ. ಈ ಹೇಳಿಕೆ ಅವರ ಜ್ಞಾನ ಸಂಪತ್ತಿಗೆ ಮಾಡುವ ಅಪಮಾನ ಹಾಗೂ ಅವರನ್ನು ಕೇವಲ ಒಂದು ಜಾತಿಗೆ ಸಿಮೀತಗೊಳಿಸುವುದು ಕೂಡ ಅಪರಾಧದ ಮನೋಭಾವ. ಅವರು ಜಗತ್ತಿಗೆ ಬೆಳಕು ನೀಡಿದ ಸೂರ್ಯ. ಅವರನ್ನು ಯಾವುದೋ ಒಂದು ಜಾತಿಗೆ ಸಿಮೀತಗೊಳಿಸದಂತೆ ಸಭಿಕರಲ್ಲಿ ಮನವಿ ಮಾಡಿದರು.

ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ: ಈ ವೇಳೆ ಹಿರಿಯ ಸಾಹಿತಿ ಡಾ.ಸಿ.ನಾಗಣ್ಣ, ಡಿ.ದೇವರಾಜಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ಅಧ್ಯಕ್ಷ ಜಾಕೀರ್ ಹುಸೇನ್, ಸಿಎಫ್‌ಟಿಆರ್‌ಐ ಎಸ್ಸಿ, ಎಸ್ಟಿ ವರ್ಗಗಳ ನೌಕರರ ಸಂಘದ ಸಂಸ್ಥಾಪಕ ಅಧ್ಯಕ್ಷ ಎಸ್.ಶಿವಪ್ಪ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ಮಾತನಾಡಿದರು. ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಂ, ಸಿಎಫ್‌ಟಿಆರ್‌ಐನ ಪರಿಶಿಷ್ಠ ಜಾತಿ, ಪರಿಶಿಷ್ಠ ವರ್ಗಗಳ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಿವಸ್ವಾಮಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಅಹಿಂದ ಜವರಪ್ಪ ಇದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಪಿ.ಶ್ವೇತಾ ಆರ್.ರಾಧಾ, ಎಂ.ಜಮುನಾ, ಸಿ.ಸ್ನೇಹ, ಯು. ರಾಕೇಶ್, ಕೆ.ಸುಸ್ಮಿತಾ, ಎಸ್. ಐಶ್ವರ್ಯ, ಪಿ.ಆಕಾಶ್, ಮಂಜುಳಾ, ಸುಧಾ, ವಿ.ಅನನ್ಯ, ಸಿಂಚನ, ಲಕ್ಷ್ಮಿ, ಎಂ.ನಂದನ್, ಪಿ.ಪ್ರಿಯಾ, ಪಿ. ಅಂಜಲಿ, ಭೂಮಿಕಾ, ಎ.ಸಂಜನಾ, ಡಿ.ನಾಗರಾಜ, ಎಂ.ಯಮುನಾ, ಎಸ್.ಭಾವನ, ಜಿ.ಎಂ. ಕಿಶೋರ್, ಜಿ.ದಿವ್ಯ, ಎಂ.ಕೆ.ಗೀತ ಅವರನ್ನು ಅಭಿನಂದಿಸಲಾಯಿತು.

ಜ.15ರಿಂದ 20ರವರೆಗೆ ಸುತ್ತೂರು ಜಾತ್ರೆ



ಮೈಸೂರು, ಅ. 14– ಸುತ್ತೂರು ಶ್ರೀಕ್ಷೇತ್ರದಲ್ಲಿ ಸಂಪ್ರದಾಯದಂತೆ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವನ್ನು 2026 ಜನವರಿ 15ರಿಂದ 20ರವರೆಗೆ (ಪುಷ್ಯ ಬಹುಳ ದ್ವಾದಶಿಯಿಂದ ಮಾಘ ಶುದ್ಧ ದ್ವಿತೀಯದವರೆಗೆ) ಆಚರಿಸಲು ಇದೇ 13ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಸಂಚಾಲಕರುಗಳ ಸಭೆಯಲ್ಲಿ ತೀರ್ಮಾನಿಸಲಾಯಿತು. ರಥೋತ್ಸವ, ತೆಪ್ಪೋತ್ಸವ, ಕೊಂಡೋತ್ಸವ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳು, ವಿವಿಧ ಸ್ಪರ್ಧೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಎಂದಿನಂತೆ ಆರು ದಿನಗಳ ಕಾಲ ನೆರವೇರಲಿದೆ.

ವ್ಯಕ್ತಿ ನಾಪತ್ತೆ



ಮೈಸೂರು, ಅ.14– ಮನೆಯಿಂದ ರಾತ್ರೋರಾತ್ರಿ ವ್ಯಕ್ತಿ ನಾಪತ್ತೆಯಾಗಿರುವ ಬಗ್ಗೆ ಮೈಸೂರಿನ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುವೆಂಪುನಗರ ಇಡಬ್ಲ್ಯೂಎಸ್‌ಎಂ ಬ್ಲಾಕ್‌ನಲ್ಲಿರುವ ಚಿಕ್ಕಮ್ಮನ ಮಗನ ಮನೆಯಲ್ಲಿ ಉಳಿದುಕೊಂಡಿದ್ದ ಕೆ.ಆರ್.ನಗರ ತಾಲೂಕು ಗಂಧನಹಳ್ಳಿ ಗ್ರಾಮದ ಯೋಗೇಶ್(44), ಅ.3 ರಂದು ರಾತ್ರಿ ಊಟ ಮಾಡಿ ಮಲಗಿದ್ದವರು ಬೆಳಗಾಗುವಷ್ಟರಲ್ಲಿ ನಾಪತ್ತೆಯಾಗಿದ್ದಾರೆ.

ಮದ್ಯ ವ್ಯಸನಿಯಾಗಿರುವ ಇವರಿಗೆ ಅಲರ್ಜಿ ಆಗಿದ್ದರಿಂದ ಚಿಕಿತ್ಸೆ ಕೊಡಿಸಲೆಂದು ಮೈಸೂರಿಗೆ ಅ.3ರಂದು ಕರೆತರಲಾಗಿತ್ತು. ಆದರೆ ಅಂದು ರಾತ್ರಿಯೇ ನಾಪತ್ತೆಯಾಗಿದ್ದಾರೆ. ಕೈ ಮತ್ತು ಹಣೆ ಮೇಲೆ ಗಾಯದ ಗುರುತುಗಳಿದ್ದು, ಮಾನಸಿಕ ಅಸ್ವಸ್ಥರಂತೆ ಕಾಣಿಸುತ್ತಾರೆ ಎಂದು ಅವರ ಚಿಕ್ಕಮ್ಮನ ಮಗ ಶಶಿಧರ್, ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಕಾಣೆಯಾಗಿರುವ ವ್ಯಕ್ತಿ ಬಗ್ಗೆ ಸುಳಿವು ದೊರೆತರೆ ಪೊಲೀಸ್ ಕಂಟ್ರೋಲ್ ರೂಂ(0821-2418339) ಅಥವಾ ಸಂಬಂಧ ಶಶಿಧರ್(8970269634) ಅವರಿಗೆ ಮಾಹಿತಿ ನೀಡುವಂತೆ ಮನವಿ ಮಾಡಲಾಗಿದೆ.



ಸಾರ್ವಜನಿಕ ಪ್ರಕಟಣೆ

[illegible]

mysilkrae
KALENI SILK INDUSTRY

ಅಪ್ಪಟ ಚಿನ್ನದ ಜರಿಯ ಸೀರೆಗಳು FACTORY SECONDS SALE

100% PURE SILK / GOLD ZARI SAREES

UP TO 40% DISCOUNT

Woven on traditional looms exclusively with pure silk from the historic region of Mysore.

KALENI SILK INDUSTRY

263, Hebbal Industrial Area, Opp. to Annapurna Aahar Hotel, Mysore-570018

We are open on Sundays too

9019949145 / 9845817295 / 9019348989

Kumuda Spa & Salon DEEPAVALI OFFER

For Men - Complimentary Cleanup for 90mins Massage * For Women - Complimentary Cleanup or Hair cut for 90mins Massage * For Women - Complimentary Cleanup or Hair cut for 90mins Massage * Complimentary Facial for Full Body Waxing for Women. *Complimentary Foot Massage for Hair spa.

All Kumuda Spa Packages @ 10% Discount

0821-4193567
9632769550

OM PRAKASH AND VIMAL ABBHI DAAN PUNYA TRUST (R)

Abbhi Nivas, 2631, 2nd Main, Valmiki Road, Vontikoppal Mysuru - 570002, Ph: 9743429859

APPOINTMENT NOTIFICATION

Lecturers with relevant qualification and experience in respective subjects are required for Abbhi Trust, Mysore

Sl.No.	Subject	No. of Posts	Qualification
1	Physics	02	M.Sc., B.Ed.
2	Chemistry	02	M.Sc., B.Ed.
3	Mathematics	02	M.Sc., B.Ed.
4	Computer Science	02	M.Sc., B.Ed./MCA
5	English	01	M.A., B.Ed.
6	Kannada	01	M.A., B.Ed.

1. Minimum 3 to 5 years experience in PU Board & KCET coaching.
2. Salary will be based on experience and subject competency.
3. Dynamic and Freshers with zeal can apply.
4. Preference for those who opt to stay in the hostel.

Send your application with CV to WHATSAPP 9743429859 or Email to info.abbhitrust@gmail.com or by post to the above address to reach on or before 30/10/2025.

www.abbhitrust.com Sd/- President

HOUSE FOR SALE IN POLICE LAYOUT

As per your requirement Architect designed

20x30 House at 57 lakhs
20x40 House at 76 lakhs
30x40 House at 108 lakhs

Call: 9663906675

ಇಂಪೀರಿಯಲ್ ಸಿಟಿ

ಮೆಗಾ ರೆಸಿಡೆನ್ಷಿಯಲ್ ವಿಲ್ಲಾ ಟೌನ್‌ಶಿಪ್

ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

₹749/

ಬುಕಿಂಗ್ ಪ್ರಾರಂಭವಾಗಿದೆ

ಇಲವಾಲ ಸ್ಯಾಟಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕೀ.ಮೀ

MUDA LIMITS

ಸುಲಭ 4 ಕಂತುಗಳ ಸೌಲಭ್ಯವಿದೆ

30x40 | 30x50
40x60 | 50x80

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಹೈಲ್ಯಾಂಡ್ ಪ್ರಾಪರ್ಟೀಸ್

90713 86615
88840 71010

HOUSE FOR SALE

Architect designed

20x40 @ 38 Lakhs
30x50 @ 71 Lakhs

Near St. Joseph School, Mysore

CALL: 8123387555 9663906675

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಜಿಲ್ಲಾ ಕಾರ್ಯಕ್ರಮ ನಿರ್ವಹಣ ಘಟಕ
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

308, ಮೂರನೇ ಮಹಡಿ, ಜಿಲ್ಲಾಡಳಿತ ಭವನ, ಶ್ರೀ ಬಿ.ರಾಚಯ್ಯ ಜೋಡಿ ರಸ್ತೆ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ–571313

EMAIL ID :rchochamarajanagar@gmail.com ದೂರವಾಣಿ ಸಂಖ್ಯೆ : 08226–355162

ಕ್ರಸಂ: ಜಿಆಕುಕಸೊ/ಚಾನ/ಎನ್.ಹೆಚ್.ಎಂ/ಇ–ಟೆಂಡರ್/ವಾಹನ/02/2025–26 ದಿನಾಂಕ: 10/10/2025

ಟೆಂಡರ್ ಪ್ರಕಟಣೆ–2

ಚಾಮರಾಜನಗರ ಜಿಲ್ಲೆಯಲ್ಲಿ 2025–26 ನೇ ಸಾಲಿಗೆ ಎನ್.ಹೆಚ್.ಎಂ ಯೋಜನೆಯಡಿ ಸಂಚಾರಿ ಆರೋಗ್ಯ ಘಟಕಗಳಿಗೆ ಹೊರಗುತ್ತಿಗೆ ಸಂಸ್ಥೆಯವರಿಂದ ಮಾಸಿಕ ಬಾಡಿಗೆ ಆಧಾರದಲ್ಲಿ ಒಟ್ಟು 4 ವಾಹನಗಳನ್ನು ಒದಗಿಸಲು 2021 ರ ಮೇಲ್ಪಟ್ಟ ಮಾಡೆಲ್‌ನ **Bolero** ಮಾದರಿಯ **SUV** ನಾಲ್ಕು ಚಕ್ರಗಳ ವಾಹನಗಳನ್ನು (ಚಾಲಕರ ಸಮೇತ) ಸಾರಿಗೆ/ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಾಯಿತ ಹೊರ ಸಂಪನ್ಮೂಲ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ (**Website: www.kppp.karnataka.gov.in**) ಮೂಲಕ ನಿಯಮಾನುಸಾರ ಟೆಂಡರ್ ಕರೆಯಲಾಗಿದೆ. ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. (ರಜಾ ದಿನ ಹೊರತುಪಡಿಸಿ).

ಕ್ರ ಸಂ	ಅವಶ್ಯಕವಿರುವ ವಾಹನಗಳು	ಅನು ಮೋದಿತ ಮಾಸಿಕ ಬಾಡಿಗೆ ದರ (inclusive of GST)	ಟೆಂಡರ್ ಅಂದಾಜು ಮೊತ್ತ	ಇ.ಎಂ.ಡಿ ಮೊತ್ತ	ಟೆಂಡರ್ ಫಾರಂ ಅಪ್‌ಲೋಡ್ ಮಾಡುವ ಪ್ರಾರಂಭ ದಿನಾಂಕ & ವೇಳೆ	ಟೆಂಡರ್ ಫಾರಂ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ & ವೇಳೆ	ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ & ವೇಳೆ	ಆರ್ಥಿಕ ಲಕೋಟೆ ತೆರೆಯುವ ದಿನಾಂಕ & ವೇಳೆ
1	ಸಂಚಾರಿ ಆರೋಗ್ಯ ಘಟಕ ವಾಹನ – 04	60000/– with A/C	16,80,000	42,000/–	10/10/2025	23/10/2025 ಸಂಜೆ 4.30	24/10/2025 ಸಂಜೆ 4.30	28/10/2025 ಬೆಳಿಗ್ಗೆ 11.00

ಸಹಿ/– ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ,
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಸಂ: ವಾಸಾಸಂಇ:ಚಾನಗರ:412:2025–26



G9 projects

POORVA SHELTERS

Near to Lalithadripura Ring road Mysuru

Book your plot, we'll Build your dream home

20×30 | 30×40 & 20×40 | 30×50

₹ 3,999/- per sqft

8088-707-707

ನಮೂನೆ ಸಂಖ್ಯೆ – ಐಎನ್‌ಸಿ – 25ಎ

ಸಾರ್ವಜನಿಕ ಕಂಪನಿಯನ್ನು ಖಾಸಗಿ ಕಂಪನಿಯಾಗಿ ಪರಿವರ್ತಿಸಲು ನೀಡಬೇಕಾದ ಪತ್ರಿಕಾ ಜಾಹಿರಾತು

ಮಾನ್ಯ ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ಪ್ರದೇಶ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಇವರ ಮುಂದೆ

ಕಂಪನಿಗಳ ಕಾಯ್ದೆ, 2013, ಕಲಂ 14 ಕಂಪನಿಗಳ ಕಾಯ್ದೆ, 2013, ಕಂಪನಿಗಳ (ಸಂಯೋಜನೆ) ನಿಯಮಗಳು, 2014, ನಿಯಮ 41ರ ವಿಚಾರದಲ್ಲಿ

ಮತ್ತು

ಮೈಸೂರು – 570 016, ಮೇಟಗಳ್ಳಿ, ಕೆ.ಆರ್.ಎಸ್. ರಸ್ತೆಯಲ್ಲಿ, ನೋಂದಾಯಿತ ಕಛೇರಿ ಹೊಂದಿರುವ ಮೈಸೂರು ಸ್ಟೀಲ್ಸ್ (ನಿಯಮಿತ) ರವರ ವಿಚಾರದಲ್ಲಿ

(ಅರ್ಜಿದಾರರು)

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಸದರಿ ಕಂಪನಿಯು ಕಲಂ 14 ಕಂಪನಿಗಳ ಕಾಯ್ದೆ 2013 ಮತ್ತು ಮೇಲೆ ಕಾಣಿಸಿದ ನಿಯಮಗಳಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಿ, ಸೆಪ್ಟೆಂಬರ್ 30, 2025 ರಂದು ನಡೆದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹೊರಡಿಸಿದ ವಿಶೇಷ ನಿರ್ಣಯದಡಿ ಖಾಸಗಿ ಕಂಪನಿಯಾಗಿ ಪರಿವರ್ತನೆಗೊಳ್ಳುವ ಇರಾದೆಯನ್ನು ಹೊಂದಿದ್ದು, ಸದರಿ ಪರಿವರ್ತನೆಗೆ ಕಾರ್ಯರೂಪಕ್ಕೆ ತರಲಿದೆ.

ಸದರಿ ಕಂಪನಿಯ ಉದ್ದೇಶಿತ ಪರಿವರ್ತನೆಯಿಂದ ಯಾರಾದರೂ ವ್ಯಕ್ತಿಯ ಆಸಕ್ತಿಗೆ ಧಕ್ಕೆ ಉಂಟು ಆಗುವಲ್ಲಿ, ಅಂತ ವ್ಯಕ್ತಿಗಳು, ತಮ್ಮ ಆಕ್ಷೇಪಣೆಗಳ ವಿವರವನ್ನು ಸೂಕ್ತ ಸಬೂಬುಗಳೊಡನೆ, ಪ್ರಮಾಣ ಪತ್ರದೊಂದಿಗೆ ಲಿಖಿತ ರೂಪದಲ್ಲಿ 'ಪ್ರಾದೇಶಿಕ ನಿರ್ದೇಶಕರು, ದಕ್ಷಿಣ ಪ್ರಾಂತ್ಯ, 3 ನೇ ಮಹಡಿ, ಕಾರ್ಪೊರೇಟ್ ಭವನ್, ಬಂಡ್ಲಾಗುಡ, ನಗೋಳೇ, ತಟ್ಟಿನರಾಂ ಗ್ರಾಮ, ಹಯಾತ್ನಗರ್‌ಮಂಡಲ್, ರಂಗಾರೆಡ್ಡಿ ಜಿಲ್ಲೆ, ಹೈದರಾಬಾದ್ 500 068, ತೆಲಂಗಾಣ' ಕ್ಕೆ ಈ ಪ್ರಕಟಣೆಯ 14 ದಿನಗಳೊಳಗೆ ಸಲ್ಲಿಸತಕ್ಕದ್ದು. ಹಾಗೆಯೇ ಒಂದು ನಕಲನ್ನು ಅರ್ಜಿದಾರ ಕಂಪನಿಯ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು : ಮೈಸೂರು ಸ್ಟೀಲ್ಸ್, ಕೆ. ಆರ್. ಎಸ್. ರಸ್ತೆ, ಮೇಟಗಳ್ಳಿ, ಮೈಸೂರು 570016, ಕರ್ನಾಟಕ

ದಿನಾಂಕ: ಅಕ್ಟೋಬರ್ 14, 2025
ಸ್ಥಳ : ಮೈಸೂರು
ಇಂದ ಮತ್ತು ಪರವಾಗಿ
ಮೈಸೂರು ಸ್ಟೀಲ್ಸ್ ಪ್ರೈ ಲಿಮಿಟೆಡ್

ಸಹಿ/–
ರಲ್ಲಪಲ್ಲಿಕರ್ಣಂ ನಾಗಾರ್ಜುನ್
ನಿರ್ದೇಶಕರು.
ಡಿಐಎನ್‌ಸಂಖ್ಯೆ : 07357814